ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 32 ಆಗಸ್ಟ್ 2-9, 1998 ರೂ. 2.00

ರಾಜ್ಯದಲ್ಲಿ ವಿಶಾಲ ಹೋರಾಟ ಬೆಳೆದು ಬರಬೇಕು

ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಕರೆ

ಜನಗಳಲ್ಲಿ ಅತೃಪ್ತಿ ತೀವ್ರವಾಗಿ ಹೆಚ್ಚುತ್ತಿದೆ. ವಿವಿಧ ಪ್ರಶ್ನೆಗಳ ಮೇಲೆ ಹೋರಾಟಗಳು ಪ್ರಾರಂಭವಾಗಿವೆ, ಜನಬೆಂಬಲ ಪಡೆದಿವೆ. ಅಸಹನೆಗೊಂಡ ಜನಸಮುದಾಯದ ಒಟ್ಟು ಅಸಂತೃಪ್ತಿ ಸ್ಫೋಟಗೊಳ್ಳುವ ಹಾದಿಯಲ್ಲಿದೆ. ವಿಭಿನ್ನ ಪ್ರಶ್ನೆಗಳ ಮೇಲಿನ ಹೋರಾಟಗಳು ವಿಶಾಲ ಹೋರಾಟವಾಗಿ ಬೆಳೆಯುವಂತೆ ಶ್ರಮಿಸಬೇಕು ಎಂದು ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಪಕ್ಷದ ಘಟಕಗಳಿಗೆ ಕರೆ ನೀಡಿದೆ. ಇದು ಕೋಮುವಾದದ ವಿರುದ್ಧ ಹೋರಾಟದ ಪ್ರಮುಖ ವಿಧಾನವೂ ಹೌದು. ಜೊತೆಯಲ್ಲಿ ಈ ಹೋರಾಟದಲ್ಲಿ ಭಾಗವಹಿಸುವ ಜನಸಮುದಾಯಗಳ ನಡುವೆ ಕೋಮುವಾದದ ವಿರುದ್ಧ, ಫ್ಯಾಸಿಸ್ಟ್ ಅಪಾಯದ ವಿರುದ್ಧ ನಿರಂತರ ಪ್ರಚಾರ ನಡೆಸಬೇಕು ಎಂದೂ ಸಿ.ಪಿ.ಐ.(ಎಂ) ಕರೆ ನೀಡಿದೆ. ಜುಲೈ 27 ಹಾಗೂ 28 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸಭೆ ನಡೆದು ಕಳೆದ ಎರಡು ತಿಂಗಳ ರಾಜಕೀಯ ಬೆಳವಣಿಗೆಗಳ ವಿಶ್ಲೇಷಣೆ ನಡೆಸಿತು. ಅದನ್ನು ಈ ಮುಂದೆ ಕೊಡಲಾಗಿದೆ.

ರಾಜ್ಯದಲ್ಲಿ ಲೋಕಸಭಾ ಚುನಾವಣೆಗಳ ನಂತರ ನಡೆದ ವಿಧಾನಸಭಾ ಉಪಚುನಾವಣೆಗಳಲ್ಲಿನ ಫಲಿತಾಂಶ ಬಿಜೆಪಿ-ಲೋಕಶಕ್ತಿ ಕೂಟಕ್ಕೆ ರಾಜ್ಯದ ಜನತೆ ಮಾಡಿದ ನೇರ ಮುಖಭಂಗವಾಗಿದೆ. ಲೋಕಸಭಾ ಚುನಾವಣೆಗಳಲ್ಲಿ ಕ್ರಮವಾಗಿ 15 ಮತ್ತು 3 ಸ್ಥಾನಗಳನ್ನು ಪಡೆದು ಕೇಂದ್ರದಲ್ಲಿ ಮೊಟ್ಟಮೊದಲ ಬಾರಿಗೆ ಸರ್ಕಾರ ರಚಿಸಿದ ಹಾಗೂ ಅಣುಸ್ಫೋಟ ನಡೆಸಿ ಭಾರತದಲ್ಲೆಲ್ಲಾ ಯುದ್ಧೋನ್ಮಾದ ವನ್ನು ಹಬ್ಬಿಸಲು ಪ್ರಯತ್ನಿಸಿದ ನಂತರವೂ ಬಿಜೆಪಿ ಹಾಗೂ ಲೋಕಶಕ್ತಿ ಹಿಂದೆ ಪಡೆದಿದ್ದ ಸ್ಥಾನಗಳಲ್ಲಿಯೂ ಸೋತಿರುವುದು ಕರ್ನಾಟಕ ಜನತೆ ಬಿಜೆಪಿಗೆ , ಅದರ ಕೋಮುವಾದೀ ಪ್ರಚಾರಕ್ಕೆ ಮರುಳಾಗಿಲ್ಲವೆಂದು ಹಾಗೂ ಮುಂದಿನ ವಿಧಾನ ಸಭಾ ಚುನಾವಣೆಗಳಲ್ಲಿ ಬಿಜೆಪಿ-ಲೋಕಶಕ್ತಿಯ ಗೆಲುವು ಅವರಿಗೆ ಕಟ್ಟಿಟ್ಟ ಬುತ್ತಿಯೇನಲ್ಲವೆಂದು ತೋರಿಸಿದೆ. ಕರ್ನಾಟಕದ ಈ ಜನಾಭಿಪ್ರಾಯ ಜಾತ್ಯಾತೀತ ಶಕ್ತಿಗಳ ಪರವಾಗಿದೆಯೆಂದು ದೃಢಪಡಿಸಿದೆ.

ನಂತರ ವಿಧಾನ ಪರಿಷತ್ ಚುನಾವಣೆಗಳಲ್ಲಿ ಬಿಜೆಪಿ ತನ್ನ ಸ್ಥಾನಗಳನ್ನು ಉಳಿಸಿಕೊಂಡಿರುವುದು ಮಧ್ಯಮವರ್ಗದ ಮೇಲೆ ಬಿಜೆಪಿಯ ಪ್ರಭಾವ ಮುಂದುವರಿದಿರುವುದನ್ನು ಸೂಚಿಸುತ್ತದೆ.

ಇದು ಕರ್ನಾಟಕದಲ್ಲಿ ಆಳುವ ಸರ್ಕಾರಕ್ಕೆ ಹಾಗೂ ಜನತಾದಳ ಪಕ್ಷಕ್ಕೆ ಅವರಿಗೆ ಲೋಕಸಭಾ ಚುನಾವಣೆಗಳಲ್ಲಾದ ತೀವ್ರ ಸೋಲಿನಿಂದಾದ ವಿಶ್ವಾಸದ ಕುಸಿತದಿಂದ ಮೇಲಕ್ಕೆತ್ತಿ ತಮ್ಮಿಂದ ದೂರವಾದ ಜನತೆಯನ್ನು ಮತ್ತೆ ಒಲಿಸಿಕೊಳ್ಳಲು ತೀವ್ರ ಪ್ರಯತ್ನ ನಡೆಸಲು ಹಚ್ಚಬೇಕಾಗಿತ್ತು. ಆದರೆ ಅದಕ್ಕೆ ಬದಲಾಗಿ ಮಂತ್ರಿಮಂಡಲ ಪುನರ್ರಚನೆಯ ಬಗ್ಗೆ ತೀವ್ರ ಭಿನ್ನಮತ, ಬಹಿರಂಗ ಹೇಳಿಕೆಗಳ, ಗುಂಪುಗಾರಿಕೆಯ ವೈಷಮ್ಯ ಮತ್ತೆ ಪ್ರಕಟವಾಯಿತು.

ಜನರ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸದೆ ಜಾತಿಗಳ ಲೆಕ್ಕಾಚಾರದಲ್ಲಿ ಒಕ್ಕಲಿಗ ಹಿಂದುಳಿದ ಜಾತಿಗಳ ಕೂಟ ರಚನೆ ಮಾಡಿ ಮುಂದಿನ ಚುನಾವಣೆಗಳನ್ನು ಗೆಲ್ಲುವ ತಂತ್ರಗಳ ಕಾರಣವಾಗಿ ಈ ಬಿಕ್ಕಟ್ಟುಗಳು ಜನತಾದಳವನ್ನು ಅನೈಕ್ಯಗೊಳಿಸುತ್ತಿವೆ.

ಇದರ ಜೊತೆಗೆ ಜನರ ಒಲವನ್ನು ಮತ್ತೆ ಗಳಿಸಿಕೊಳ್ಳುವ ಪ್ರಯತ್ನ ಮಾಡುವ ಬದಲಾಗಿ ಅವರನ್ನು ದೂರ ತಳ್ಳುವ ವಿದ್ಯುತ್ ದರ ಏರಿಕೆ, ಕುಡಿಯುವ ನೀರಿನ, ಹಾಲಿನ ದರ ಏರಿಕೆ, ಆಡಳಿತದಲ್ಲಿ ಅದಕ್ಷತೆ, ಜನರ ಬೇಡಿಕೆಗಳಿಗೆ, ಅಭಿಪ್ರಾಯಕ್ಕೆ, ಹಾಗೂ ಹೋರಾಟಗಳಿಗೆ ಮನ್ನಣೆ ಕೊಡುವುದಕ್ಕೆ ಬದಲಾಗಿ -ಪಂಚಾಯತ್ ನೌಕರರು, ಅಂಗನವಾಡಿ ನೌಕರರು ಮೊದಲಾದ ವಿಭಾಗಗಳ ಬೇಡಿಕೆಗಳ ಬಗ್ಗೆ ನಿರ್ಲಕ್ಷ್ಯ, ಬಾಗೂರು- ನವಿಲೆ ಹೋರಾಟದ ರೈತರ ಮೇಲೆ ಪೊಲೀಸ್ ಬಲಪ್ರಯೋಗ ಇತ್ಯಾದಿ ಕ್ರಮಗಳಿಂದ ಮತ್ತಷ್ಟು ಜನ ದೂರವಾಗುತ್ತಿದ್ದಾರೆ. 12 ಕೊಲೆಗಳಿಗೆ ಕಾರಣವಾದವರು ಎಂದು ತನಿಖೆಯಿಂದ ಸಾಬೀತುಪಟ್ಟ ಮಾಲೀಕಯ್ಯ ಗುತ್ತೇದಾರರನ್ನು ಮಂತ್ರಿ ಮಂಡಲದಿಂದ ಕೈ ಬಿಡಲಿಲ್ಲ. ಪಕ್ಷದ ಮಟ್ಟದಲ್ಲಿಯೂ ಯಾವ ಚೈತನ್ಯಶಾಲಿ ಪ್ರಯತ್ನಗಳಿಲ್ಲದೇ ಮುಂದಿನ ಚುನಾವಣೆಗಳಲ್ಲಿ ಆದಂತಾಗಲಿ ಎನ್ನುವ ಧೋರಣೆ ಇದೆ.

ಜನತಾದಳದಿಂದ ಜನ ದೂರವಾಗುತ್ತಿರುವ, ಬಿಜೆಪಿಗೆ ಒಲವನ್ನು ತೋರಿಸದಿರುವ ಜನತೆ ಈ ಅನುಕೂಲ ಸನ್ನಿವೇಶದಲ್ಲಿಯೂ ಕಾಂಗ್ರೆಸ್ ರಾಜ್ಯದಲ್ಲಿ ತನಗೆ ಬೇರೆ ಯಾವ ಪಕ್ಷಗಳಿಗಿಂತಲೂ ಹೆಚ್ಚಾಗಿಯೇ ಇರುವ ಸಂಘಟನಾ ಶಕ್ತಿಯನ್ನು ಮುಂದಿನ ಚುನಾವಣೆಗಳಲ್ಲಿ ಅಧಿಕಾರ ಪಡೆಯುವ ದೃಷ್ಟಿಯಿಂದಲಾದರೂ ರಾಜಕೀಯ ಹೋರಾಟದಲ್ಲಿ, ಮುಖ್ಯವಾಗಿ, ಬಿಜೆಪಿ ವಿರುದ್ಧದ ಹೋರಾಟದಲ್ಲಿ ತೊಡಗಿಸುವ ಯಾವುದೇ ಯತ್ನ ಮಾಡಿಲ್ಲ. ಕೇವಲ ಜನತಾದಳ ಸರ್ಕಾರದ ವಿರುದ್ಧ ಪತ್ರಿಕಾ ಹೇಳಿಕೆಗಳನ್ನು ನೀಡುವುದರಲ್ಲಿಯೇ ತೃಪ್ತರಾಗಿದ್ದಾರೆ. ಕಾವೇರಿ, ಕೃಷ್ಣಾ, ಹಿಂದುಳಿದ ಪ್ರದೇಶಗಳು ಎಂಬ ಜನವಿಭಜಕ ಪ್ರಶ್ನೆಗಳನ್ನಷ್ಟೇ ಎತ್ತುತ್ತಿದ್ದಾರೆ.

ಈ ಮಧ್ಯೆ ಜನರ ಅತೃಪ್ತಿ ತೀವ್ರವಾಗಿ ಹೆಚ್ಚುತ್ತಿದೆ. ವಿವಿಧ ಪ್ರಶ್ನೆಗಳ ಮೇಲೆ ಮುಖ್ಯವಾಗಿ ನೀರಾವರಿಯ ಬಗ್ಗೆ ರೈತರ ಪರಿಸ್ಥಿತಿಯ ಆಲಕ್ಷದ ಬಗ್ಗೆ ತಾನೇತಾನಾಗಿ ಹೋರಾಟಗಳು ರೂಪುಗೊಳ್ಳುತ್ತಿವೆ, ಪ್ರಾರಂಭವಾಗುತ್ತಿವೆ. ಜನ ಬೆಂಬಲ ಪಡೆದಿವೆ. ತುಂಗಭದ್ರಾ ಮೇಲ್ದಂಡೆಗಳು ತುಮಕೂರು, ಹಾಸನ, ಮೈಸೂರು, ಮಂಡ್ಯ ರೈತರ ಹೋರಾಟಗಳೇ ಇದಕ್ಕೆ ನಿದರ್ಶನವಾಗಿದೆ. ಇದು ರೈತರು ಮಾತ್ರವಲ್ಲದೆ, ಅಸಹನೆಗೊಂಡ ಜನಸಮುದಾಯದ ಒಟ್ಟು ಅತೃಪ್ತಿ ಸ್ಫೋಟಗೊಳ್ಳುವ ಹಾದಿಯಲ್ಲಿದೆ ಎಂಬುದನ್ನು ಸೂಚಿಸುತ್ತದೆ.

ಈ ಅತೃಪ್ತಿಯನ್ನು ತನ್ನೆಡೆಗೆ ತಿರುಗಿಸಿಕೊಳ್ಳಲು ಬಿಜೆಪಿ ಪ್ರಯತ್ನ ನಡೆಸಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿದ್ದೂ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದಿರುವ ರೈತರಿಗೆ ಯಾವ ಪರಿಹಾರವನ್ನೂ ನೀಡಲು ನಿರಾಕರಿಸುವುದಲ್ಲದೆ ಅವರನ್ನು ಮತ್ತಷ್ಟು ಆತ್ಮಹತ್ಯೆಗೆ ದೂಡುವ ನೀತಿಗಳನ್ನು ದಿನದಿನವೂ ಘೋಷಿಸುತ್ತಿರುವ ಬಿಜೆಪಿ ರೈತ ಸಂಘದ ಹಿಂದಿನ ನಾಯಕ ಈಗಿನ ಬಿಜೆಪಿ ಮಂತ್ರಿ ಬಾಬಗೌಡ ಪಾಟೀಲರನ್ನು ಉಪಯೋಗಿಸಿ ರೈತರನ್ನು ಸೆಳೆಯುವ ಯತ್ನ ಹಾಗೂ ತಾನೇ ವಿದ್ಯುತ್ ಪ್ರಾಧಿಕಾರ ಕಾನೂನಿನ ಮೂಲಕ ವಿದ್ಯುತ್ ಬೆಲೆ ಏರಿಕೆಗೆ ಒತ್ತಡ ಹಾಕಿದ್ದರೂ ವಿದ್ಯುತ್ ಬೆಲೆ ಏರಿಕೆ ವಿರುದ್ಧ ಬಂದ್ ಇತ್ಯಾದಿಗಳನ್ನು ನಡೆಸುತ್ತಾ ಜನರ ಅತೃಪ್ತಿಯನ್ನು ಬಳಸಿಕೊಳ್ಳುವ ಯತ್ನ ನಡೆಸಿದೆ. ಇತ್ತೀಚೆಗೆ ಬಿಜೆಪಿ ಅಧ್ಯಕ್ಷ ಕುಶಾಭಾವುಠಾಕ್ರೆ ಭೇಟಿ ಹಾಗೂ ಪಕ್ಷದ, ಆರೆಸ್ಸೆಸ್‌ನ ಚಟುವಟಿಕೆಗಳ ಮೂಲಕ ಚುನಾವಣೆಗಳನ್ನೆದುರಿಸಲು ಸನ್ನದ್ಧವಾಗುತ್ತಿದೆ. ಮುಸ್ಲಿಂ ಅಲ್ಪ ಸಂಖ್ಯಾಂತರ ಮೇಲೆ ನಿರಂತರ ಧಾಳಿಯ ಜೊತೆಗೆ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆಯೂ ಅವರು ಧಾಳಿಯನ್ನಾರಂಭಿಸಿದ್ದಾರೆ.

ಅದೇ ಸಂದರ್ಭದಲ್ಲಿ ಸಿಪಿಐ(ಎಂ) ಕೂಡಾ ಜನರ ಅತೃಪ್ತಿಯನ್ನು ಪ್ರಜಾಸತ್ತಾತ್ಮಕ ಚಳುವಳಿಗಳಾಗಿ ರೂಪಿಸಲು ತೀವ್ರ ಪ್ರಯತ್ನ ನಡೆಸಿದೆ. ರಾಜ್ಯ ರೈತ ಸಂಘದೊಂದಿಗೆ ನಡೆಸಿದ ಸಮಾವೇಶದಲ್ಲಿ ರಾಜ್ಯ ರೈತ ಸಂಘದ ನಾಯಕರು ರಾಜ್ಯಮಟ್ಟದ ಹೋರಾಟವೊಂದಕ್ಕೆ ಒಪ್ಪದಿದ್ದರೂ ಜಿಲ್ಲಾಮಟ್ಟಗಳಲ್ಲಿ ರೈತ ಸಂಘದ ನಾಯಕರೊಂದಿಗೆ ಜಂಟಿ ಚಳುವಳಿ ನಡೆಸಲು ಹೋರಾಟ ರೂಪಿಸುವ ಮುನ್ನೆಜ್ಜೆಗಳನ್ನು ತೆಗೆದುಕೊಂಡಿದ್ದಾರೆ. ರಾಯಚೂರಿನಲ್ಲಿ ರಾಜ್ಯ ರೈತ ಸಂಘದೊಡಗೂಡಿ ಜಿಲ್ಲಾದ್ಯಂತ ರಸ್ತಾ ರೋಖೋ, ನೀರಾವರಿ ಪಡೆಯುವಲ್ಲಿ ಯಶಸ್ಸು ಮತ್ತು ಮುಂದುವರಿಯುತ್ತಿರುವ ಹೋರಾಟ, ಬೀದರ್ ಬಂದ್, ಗುಲ್ಬರ್ಗದಲ್ಲಿ ಜಂಟೀ ಜಾಥಾ, ಬಿಜಾಪುರದಲ್ಲಿ ಎರಡೂ ರೈತಸಂಘಗಳ ಜಂಟಿ ಸಮಾವೇಶ ಇತ್ಯಾದಿಗಳು ಈ ದಿಸೆಯಲ್ಲಿ ಉತ್ತಮ ಆರಂಭವಾಗಿದೆ. ಅದೇ ದಿಕ್ಕಿನಲ್ಲಿ ರಾಜ್ಯ ರೈತ ಸಂಘದ ರಾಜ್ಯ ಸಮಿತಿ ಎಡಪಕ್ಷಗಳೊಡನೆ ಐಕ್ಯ ಹೋರಾಟ ಮಾಡಬೇಕೆಂದು ನಿರ್ಣಯ ಕೈಗೊಂಡಿರುವುದು ಒಂದು ಪ್ರಮುಖ ಬೆಳವಣಿಗೆಯಾಗಿದೆ. ನಂತರ ನರಗುಂದದಲ್ಲಿ ರಾಜ್ಯ ರೈತ ಸಂಘ ಪ್ರಾಂತ ರೈತ ಸಂಘಗಳ ಜಂಟಿ ಬಹಿರಂಗ ಸಭೆ ನಡೆದಿದೆ. ಈ ಮೈತ್ರಿಯನ್ನು ಮುಂದುವರೆಸಿ ಸಾಮೂಹಿಕ ಸಂಘಟನೆಗಳ ವೇದಿಕೆಯ ಹೋರಾಟದಲ್ಲಿಯೂ ಅವರು ಭಾಗವಹಿಸುತ್ತಿದ್ದಾರೆ.

ಸಿಪಿಐ ಮುನ್ನೆಜ್ಜೆಯಿಂದ ಜನರ ಹೋರಾಟಗಳನ್ನು ತೀವ್ರಗೊಳಿಸಬೇಕು, ಸಾಮೂಹಿಕ ಸಂಘಟನೆಗಳ ವೇದಿಕೆಯ ಹೋರಾಟ ವಿಶಾಲ ಹೋರಾಟವಾಗಿ ಬೆಳೆಯಲು ಪಕ್ಷದ ಎಲ್ಲಾ ಸದಸ್ಯರು ಘಟಕಗಳು ಶ್ರಮಿಸಬೇಕು. ಇದು ಕೋಮುವಾದದ ವಿರುದ್ಧ ಹೋರಾಟದ ಪ್ರಮುಖ ವಿಧಾನವೂ ಹೌದು. ಜೊತೆಯಲ್ಲಿ ಈ ಹೋರಾಟದಲ್ಲಿ ಸೆಳೆಯಲ್ಪಟ್ಟ ಜನಸಮುದಾಯಗಳ ನಡುವೆ ಕೋಮುವಾದದ ವಿರುದ್ಧ, ಫ್ಯಾಸಿಸ್ಟ್ ಅಪಾಯದ ವಿರುದ್ಧ ನಿರಂತರ ಪ್ರಚಾರ ಮಾಡಬೇಕು.

ಸುರ್ಜೀತ್‌ರವರಿಂದ ಕರಡು ರಾಜಕೀಯ ನಿರ್ಣಯ ಬಿಡುಗಡೆ

ಮುಂಬರುವ ದಿನಗಳಲ್ಲಿ ಸಿ.ಪಿ.ಐ.(ಎಂ) ಮುಂದಿರುವ ಪ್ರಧಾನ ಕಾರ್ಯಭಾರವೆಂದರೆ ಮಾರ್ಚ್ 1998 ರಲ್ಲಿ ಕೇಂದ್ರದಲ್ಲಿ ಆರ್.ಎಸ್.ಎಸ್. ಮಾರ್ಗದರ್ಶನದ, ಬಿ.ಜೆ.ಪಿ. ನೇತೃತ್ವದ ಸರಕಾರ ಮೂಡಿಬರುವುದರೊಂದಿಗೆ ಪ್ರಭುತ್ವ ವ್ಯವಸ್ಥೆಯ ಮೇಲೆ ಹಾಗೂ ಸಮಾಜದ ಮೇಲೆ ತಮ್ಮ ಹಿಡಿತವನ್ನು ಬಹುಪಾಲು ಹೆಚ್ಚಿಸಿಕೊಂಡಿರುವ ಕೋಮು ಶಕ್ತಿಗಳ ವಿರುದ್ಧ ಹೋರಾಡುವುದು. ಈ ಹೋರಾಟವನ್ನು ಮುಂದೊಯ್ಯಲು ಹಾಗೂ ಜನಗಳ ಬದುಕಿನ ಮೇಲಿನ ಪ್ರಹಾರಗಳನ್ನು ಪ್ರತಿರೋಧಿಸಲು ಒಂದು ಮೂರನೇ ಪರ್ಯಾಯವನ್ನು ಮುಂದಿಡುವುದು ಅಗತ್ಯ. ಇದಕ್ಕಾಗಿ ಎಡ ಶಕ್ತಿಗಳು, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಮತ್ತೆ ಬೆಸೆಯಬೇಕು. ಅದೇ ವೇಳೆಗೆ ಈ ಕಾರ್ಯತಂತ್ರವಷ್ಟೇ ವರ್ಗ ಶಕ್ತಿಗಳ ಬಲಾಬಲದಲ್ಲಿ ಒಂದು ತೀವ್ರಗಾಮಿ ಬದಲಾವಣೆ ಮಾಡಿ ಒಂದು ನಿಜವಾದ ಪರ್ಯಾಯವನ್ನು ತರಲು ಸಾಲದು. ನಿಜವಾದ ಪರ್ಯಾಯ ಬರಬೇಕಾದರೆ ಅದು ಬಂಡವಾಳಶಾಹಿ ಭೂಮಾಲಕ ಧೋರಣೆಗಳ ವಿರುದ್ಧ , ಆಳುವ ವರ್ಗಗಳ ಸಿದ್ಧಾಂತಗಳ ವಿರುದ್ಧ ರಾಜಕೀಯ ಮತ್ತು ಸೈದ್ಧಾಂತಿಕ ಹೋರಾಟಗಳ ಮೂಲಕ ಬಲಗೊಳ್ಳುವ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯಿಂದ ಮಾತ್ರವೇ ಸಾಧ್ಯ. "ರಾಜಕೀಯವಾಗಿ, ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮವಾಗಿ ಪಕ್ಷದ ಎಲ್ಲಾ ಕೆಲಸ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗವನ್ನು ಕಟ್ಟುವ, ಬಲಿಷ್ಟಗೊಳಿಸುವ ಕೇಂದ್ರ ಕಾರ್ಯಭಾರದತ್ತ ಇರಬೇಕು".

ಇವು ಜುಲೈ 27ರಂದು ಬಿಡುಗಡೆಗೊಳಿಸಿದ ಸಿ.ಪಿ.ಐ.(ಎಂ)ನ ಹದಿನಾರನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯದ ಮುಖ್ಯ ಅಂಶಗಳು. ಪಕ್ಷದ ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್‌ರವರು ನವದೆಹಲಿಯಲ್ಲಿನ ಪಕ್ಷದ ಕೇಂದ್ರ ಕಛೇರಿಯಲ್ಲಿ ನಡೆದ ಒಂದು ಕಿಕ್ಕಿರಿದ ಪತ್ರಿಕಾ ಸಮ್ಮೇಳನದಲ್ಲಿ ಅದನ್ನು ಬಿಡುಗಡೆ ಮಾಡಿದರು. ಸಿ.ಪಿ.ಐ.(ಎಂ)ನ ಹದಿನಾರನೇ ಮಹಾಧಿವೇಶನ ಕಲ್ಕತ್ತೆಯಲ್ಲಿ ಅಕ್ಟೋಬರ್ 5 ರಿಂದ 11 ರವರೆಗೆ ಜರುಗಲಿದ್ದು, ಪಕ್ಷದ ಪ್ರತಿಯೊಬ್ಬ ಸದಸ್ಯನೂ ಇದನ್ನು ಚರ್ಚಿಸಿ, ತಿದ್ದುಪಡಿಗಳನ್ನು ಸೂಚಿಸಲು ಅನುವಾಗುವಂತೆ ಮಹಾಧಿವೇಶನದ ರಾಜಕೀಯ ನಿರ್ಣಯದ ಕರಡನ್ನು ಎರಡು ತಿಂಗಳ ಮೊದಲೇ ಬಿಡುಗಡೆ ಮಾಡಲಾಗಿದೆ. ಕಮ್ಯುನಿಸ್ಟ್ ಪಕ್ಷಗಳು ಬಿಟ್ಟು ಬೇರಾವ ಪಕ್ಷವೂ ಈ ರೀತಿ ಪಕ್ಷದ ಎಲ್ಲಾ ಸದಸ್ಯರೂ ಒಳಗೊಳ್ಳುವಂತಹ ಪ್ರಜಾಸತ್ತಾತ್ಮಕ ಚರ್ಚೆ ನಡೆಸುವ ಅಭ್ಯಾಸವಿಟ್ಟುಕೊಂಡಿಲ್ಲ.

ಈ ಪತ್ರಿಕಾ ಸಮ್ಮೇಳನದಲ್ಲಿ ಕಾಂಗ್ರೆಸ್(ಐ)ನ್ನು ಕುರಿತಂತೆ ಪತ್ರಕರ್ತರು ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರಿಸುತ್ತಾ ಸುರ್ಜಿತ್‌ರವರು ಸಿ.ಪಿ.ಐ(ಎಂ) ಈಗಲೂ ಕಾಂಗ್ರೆಸ್(ಐ) ಮತ್ತು ಇತರ ಬಂಡವಾಳಶಾಹಿ ಜಾತ್ಯಾತೀತ ಪಕ್ಷಗಳನ್ನು ಒಂದೇ ರೀತಿ ಕಾಣುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕೇವಲ ಮುಖಂಡತ್ವದ ಬದಲಾವಣೆಯಿಂದಲೇ ಕಾಂಗ್ರೆಸ್(ಐ)ನ ಸ್ವರೂಪ ಬದಲಾಗುವುದಿಲ್ಲ. ತಾವು ಅಲ್ಪ ಸಂಖ್ಯಾತರಿಂದ, ಪರಿಶಿಷ್ಟ ಜಾತಿ-ಬುಡಕಟ್ಟುಗಳ ಜನರಿಂದ, ಬಡವರಿಂದ, ವಂಚಿತರಿಂದ ಏಕೆ ದೂರವಾದವು ಎಂಬ ಬಗ್ಗೆ ಅವರು ಮಂಥನ ಮಾಡುವುದು ಅಗತ್ಯ. ಸ್ವಯಂ ವಿಮರ್ಶೆ ಮಾಡಿಕೊಂಡು ತನ್ನ ಮೂಲಭೂತ ಧೋರಣೆಗಳನ್ನು ಬದಲಿಸದಿದ್ದರೆ ಅದು ನಮ್ಮ ಒಂದು ಮಿತ್ರಪಕ್ಷವಾಗಲು ಸಾಧ್ಯವಿಲ್ಲ ಎಂದು ಸುರ್ಜಿತ್ ಹೇಳಿದರು.

ಅದೇ ವೇಳೆಗೆ ಬಿ.ಜೆ.ಪಿ. ನೇತೃತ್ವದ ಸರಕಾರ ಬಿದ್ದರೆ, ಸಿ.ಪಿ.ಐ.(ಎಂ) ಏನು ಮಾಡುತ್ತದೆ ಎಂದು ಕೇಳಿದಾಗ ಬಿ.ಜೆ.ಪಿ.ಯನ್ನು ಅಧಿಕಾರದಿಂದ ಹೊರಗಿಡಲು ಕಾಂಗ್ರೆಸ್‌ನಿಂದ ಹೊರಗಿನ ಬೆಂಬಲವನ್ನು ಪಡೆಯುವ 1996ರ ಸನ್ನಿವೇಶವನ್ನು ತಿರಸ್ಕರಿಸಲಾಗಿಲ್ಲ ಎಂದರು. ಇಂದು ಕಾಂಗ್ರೆಸ್(ಐ) ಸರಕಾರ ತರುವ ತಕ್ಷಣದ ಸಂಭವಗಳ ಬಗ್ಗೆ ಕೇಳಿದಾಗ 'ಕೇಂದ್ರ ಸರಕಾರ ವೈರುಧ್ಯಗಳಿಂದ ತುಂಬಿ ತುಳುಕುತ್ತಿದೆ. ದಿನಕ್ಕೊಂದು ಸಮಸ್ಯೆಯನ್ನು ಎದುರಿಸುತ್ತಿದೆ. ಅದನ್ನು ಬೀಳಿಸುವ ಅವಶ್ಯಕತೆ ಇಲ್ಲ, ತಾನಾಗಿಯೇ ಬಿದ್ದು ಬಿಡುತ್ತದೆ' ಎಂದು ಸುರ್ಜಿತ್ ಹೇಳಿದರು.

(ಐ.ಎನ್.ಎನ್.)



ಶಾಸಕಾಂಗದಲ್ಲಿ ಮಹಿಳಾ ಮೀಸಲಾತಿ ಕುರಿತು ಮಸೂದೆಯನ್ನು ಮಂಡಿಸಲು ಹಿಂಜರಿದ ಬಿಜೆಪಿ ನೇತೃತ್ವದ ಸರಕಾರದ ವಿರುದ್ಧ ಮಹಿಳೆಯರ ಆಕ್ರೋಶ. ಜುಲೈ 24 ರಂದು ಬೆಂಗಳೂರಿನಲ್ಲಿ ಮೀಸಲಾತಿ-ವಿರೋಧಿಗಳ ಭೂತದಹನದ ಕಾರ್ಯಕ್ರಮದ ಚಿತ್ರ.

ಇತಿಹಾಸದ ಪುಟಗಳಿಂದ



ರಾಬಿನ್ ದ್ವೀಪ

ಕತ್ತಲು ಕವಿದ ವರ್ಷಗಳು

ವರ್ಣಭೇದದ ವಿರುದ್ಧ, ಕರಿಯರ ವಿಮೋಚನೆಯ ಹೋರಾಟಕ್ಕಾಗಿ 27 ವರ್ಷಗಳಷ್ಟು ದೀರ್ಘಕಾಲ ರಾಬಿನ್ ದ್ವೀಪದಲ್ಲಿ 'ಜೀವಾವಧಿ ಶಿಕ್ಷೆ' ಅನುಭವಿಸಿದ ನೆಲ್ಸನ್ ಮಂಡೇಲಾರ ಅದಮ್ಯ ಚೇತನದ ಕಥೆ ಕೇಳುವುದೆಂದರೆ ರೋಮಾಂಚನ ಉಂಟು ಮಾಡುವಂತಹುದು, ಅದರಲ್ಲೂ ಅವರದೇ ಮಾತುಗಳಲ್ಲಿ. ಸ್ವಾತಂತ್ರ್ಯದತ್ತ ದೀರ್ಘ ಪಯಣ (Long Walk to Freedom)ನೆಲ್ಸನ್ ಮಂಡೇಲಾರ ಆತ್ಮ ಕಥನ. 'ರಾಬಿನ್ ದ್ವೀಪ - ಕತ್ತಲು ಕವಿದ ವರ್ಷಗಳು' ಆ ಆತ್ಮ ಕಥನದ ಪ್ರಕರಣ. ಇಲ್ಲಿ ಆಯ್ದ ಆ ಪ್ರಕರಣದ ಭಾಗ ರಾಬಿನ್ ದ್ವೀಪದಲ್ಲಿ ಅವರ ಕರಾಳ ಬದುಕು ಆರಂಭವಾದ ಬಗ್ಗೆ ಹೇಳುತ್ತದೆ. ಕಳೆದ ಸಂಚಿಕೆಯಿಂದ ಮುಂದುವರೆದುದು

ಮರುದಿನ ಅಧಿಕಾರಿಗಳು ಜೈಲಿನ ಅಂಗಳದಲ್ಲಿ ಭಾರಿ ಸ್ಕಿಪ್ (ಉಕ್ಕಿನ ಡಬ್ಬ- ಸಾಮಾನ್ಯವಾಗಿ ಕೇಬಲ್‌ನಿಂದ ನೇತಾಡಿಸುವಂತಹದ್ದು, ಗಣಿಗಳಲ್ಲಿ ಅದಿರು ಸಾಗಿಸಲು ಬಳಸುವಂತದ್ದು) ಇರಿಸಿ ಅದು ವಾರದ ಕೊನೆಯೊಳಗೆ ಅರ್ಧದಷ್ಟು ತುಂಬ ಬೇಕು ಎಂದು ಆಜ್ಞೆ ಮಾಡಿದರು. ನಾವು ಕಠಿಣ ಶ್ರಮ ಪಟ್ಟು ಅದನ್ನು ತುಂಬಿಸಿದೆವು. ಮರುವಾರ ಆ ವಾರದೊಳಗೆ ಸ್ಕಿಪ್ ಮುಕ್ಕಾಲು ಭಾಗ ತುಂಬಿರಬೇಕೆಂದು ವಿಧಿಸಲಾಯಿತು. ಅದನ್ನೂ ನಾವು ನಡೆಸಿಕೊಟ್ಟೆವು. ಮುಂದಿನವಾರ ಸ್ಕಿಪ್‌ನ್ನು ಆ ವಾರದೊಳಗಾಗಿ ಪೂರ್ತಿ ತುಂಬಿಸಬೇಕೆಂದು ವಿಧಿಸಲಾಯಿತು. ಆ ಆಜ್ಞೆ ರೋಷ ತಂದರೂ ನಾವು ಅದನ್ನೂ ನಡೆಸಿ ಕೊಟ್ಟೆವು. ಆದರೆ ವಾರ್ಡರುಗಳಿಗೆ ಬುದ್ಧಿಕಲಿಸ ಬೇಕು ಎಂದೂ ನಿರ್ಧರಿಸಿದೆವು. ಮುಂದಿನ ವಾರದಿಂದ ನಾವು ರಾಬಿನ್ ದ್ವೀಪದ ಮೊದಲ ಗೋ-ಸ್ಲೋ (Go-Slow) ಚಳುವಳಿ ಆರಂಭಿಸಿದೆವು. ನಾವು ಮೊದಲಿನ ಕೆಲಸದ ಅರ್ಧದಷ್ಟೇ ಮಾಡುತ್ತಿದ್ದೆವು. ಈ ಚಳುವಳಿಯ ಸಂಯೋಜನೆ ನಿರ್ಧಾರ ಅಲ್ಲಲ್ಲಿ ಸಿಗುವ ಅವಕಾಶದಲ್ಲಿ ಪಿಸು ಮಾತುಗಳಲ್ಲೇ ಹರಡುವುದು ಸಾಧ್ಯವಾಗಿತ್ತು. ಕೆಲಸದ ಕೋಟಾ ತಿರಸ್ಕರಿಸುವ ಈ ಚಳುವಳಿ ವಿರುದ್ಧ ವಾರ್ಡರುಗಳು ಬಹಳವಾಗಿ ಹೆದರಿಸಿದರು, ಪೀಡಿಸಿದರು. ಆದರೆ ನಾವು ಜಗ್ಗಲಿಲ್ಲ. ನಮ್ಮ ಗೋ-ಸ್ಲೋ ಚಳುವಳಿ ಮುಂದುವರೆಯಿತು -ನಾವು ಕಲ್ಲು ಒಡೆಯುವ ಕೆಲಸದಲ್ಲಿ ತೊಡಗಿದ್ದವರೆಗೆ.

ರಾಬಿನ್ ದ್ವೀಪ 1962 ರಲ್ಲಿ ನಾನು ಎರಡು ವಾರ ಅಲ್ಲಿ ಇದ್ದಾಗಿನಿಂದ ಭಾರಿ ಬದಲಾವಣೆ ಕಂಡಿತ್ತು. 1962 ರಲ್ಲಿ ಕೆಲವೇ ಕೈದಿಗಳಿದ್ದರು. ಆಗ ಅದು ಒಂದು ಪ್ರಾಯೋಗಿಕ ಜಾಗದಂತೆ ಕಾಣುತ್ತಿತ್ತು. ಪೂರ್ಣ ಪ್ರಮಾಣದ ಜೈಲಿನಂತೆ ಇರಲಿಲ್ಲ. ಎರಡು ವರ್ಷಗಳ ನಂತರ ರಾಬಿನ್ ದ್ವೀಪ-ದಕ್ಷಿಣ ಆಫ್ರಿಕಾದ ಜೈಲು ವ್ಯವಸ್ಥೆಯಲ್ಲೇ ಅತ್ಯಂತ ಕ್ರೂರ ಹಾಗೂ ಅಧಿಕಾರಿಗಳ ಕಪಿ ಮುಷ್ಟಿಯಲ್ಲಿದ್ದ ವಿಭಾಗವಾಗಿ ಬೆಳೆದಿತ್ತು. ಅದು ಕೈದಿಗಳಿಗೆ ಮಾತ್ರವಲ್ಲ, ಜೈಲು ಸಿಬ್ಬಂದಿಗೂ ಅತ್ಯಂತ ಕಠಿಣ ಜಾಗವಾಗಿತ್ತು. ಸಿಗರೇಟ್ ಮತ್ತು ಅನುಕಂಪ ಕೊಡುತ್ತಿದ್ದ ಕರಿಯ ವಾರ್ಡರುಗಳಿಗೆ ಈಗ ಜಾಗ ಇರಲಿಲ್ಲ. ಈಗಿನ ಬಿಳಿಯ ಹಾಗೂ ಆಫ್ರಿಕನ್ಸ್ ಮಾತನಾಡುವ ವಾರ್ಡರ್‌ಗಳು ಯಜಮಾನ-ಸೇವಕ ಸಂಬಂಧವನ್ನು ಹೇರ ಬಯಸುತ್ತಿದ್ದರು. ನಾವು ಅವರನ್ನು ಬಾಸ್ ಅಂತ ಕರೆಯಬೇಕೆಂದು ಆಜ್ಞೆ ಮಾಡುತ್ತಿದ್ದರು. ಅದನ್ನು ನಾವು ಯಾವಾಗಲೂ ಪಾಲಿಸಲಿಲ್ಲ. ರಾಬಿನ್ ದ್ವೀಪದಲ್ಲಿ ವರ್ಣಭೇದದ ವಿಭಜನೆ ಸಂಪೂರ್ಣವಾಗಿತ್ತು. ಅಲ್ಲಿ ಕರಿಯ ವಾರ್ಡರುಗಳಿರಲಿಲ್ಲ. ಬಿಳಿಯ ಕೈದಿಗಳು ಇರಲಿಲ್ಲ.

ಒಂದು ಜೈಲಿನಿಂದ ಇನ್ನೊಂದು ಜೈಲಿಗೆ ಹೋದಾಗ ಅಲ್ಲಿ ಹೊಂದಿಕೊಳ್ಳಲು ಕಾಲಾವಕಾಶ ಬೇಕಾಗುತ್ತದೆ. ಆದರೆ ರಾಬಿನ್ ದ್ವೀಪಕ್ಕೆ ಹೋಗಿದ್ದು ಬೇರೆ ಯಾವುದೋ ದೇಶಕ್ಕೆ ಹೋದಂತಿತ್ತು. ಅದು ಬರಿಯ ಜೈಲೂ ಆಗಿರಲಿಲ್ಲ. ಅದೇ ಒಂದು ಬೇರೆ ಯಾವುದೋ ಲೋಕದಂತಿತ್ತು, ಪ್ರಿಟೋರಿಯಾ ಬಿಟ್ಟಾಗ ಇದ್ದ ನಮ್ಮ ಉತ್ಸಾಹವನ್ನು ಇಲ್ಲಿನ ಕಟು ವಾತಾವರಣ ಆರಿಸಿತ್ತು. ಇನ್ನು ಮೇಲೆ ನಮ್ಮ ಜೈಲು ಜೀವನ ತೀರಾ ಕಟುವಾಗಿರುತ್ತದೆ ಎಂದು ನಮಗೆಲ್ಲರಿಗೂ ಅನಿಸತೊಡಗಿತ್ತು. ಪ್ರಿಟೋರಿಯಾದಲ್ಲಿದ್ದಾಗ ನಾವು ಜೈಲಿನಲ್ಲಿದ್ದರೂ, ನಮ್ಮ ಬೆಂಬಲಿಗರು ಮತ್ತು ಕುಟುಂಬದ ಜೊತೆಗೆ ಇದ್ದೆವು ಎಂದು ಅನಿಸುತ್ತಿತ್ತು. ಈ ದ್ವೀಪದಲ್ಲಿ ನಾವು ಅವರೆಲ್ಲರಿಂದಲೂ ದೂರವಿದ್ದೆವು. ನಿಜವಾಗಿಯೂ ನಾವು ದೂರಮಾಡಲ್ಪಟ್ಟಿದ್ದೆವು. ಕಂಡ ಸಹವರ್ತಿಗಳ ಜೊತೆ ಇರುವ ಸಮಾಧಾನ ಇತ್ತು. ಆದರೆ ಅದೊಂದೇ ಸಮಾಧಾನವಾಗಿತ್ತು. ನನ್ನ ಆತಂಕ ಬೇಗನೆ ಹೊಸ ಹಾಗೂ ಬೇರೆ ರೀತಿಯ ಹೋರಾಟ ಆರಂಭವಾಗಿದೆ ಎಂಬ ಅರಿವಾಗಿ ಬದಲಾಯಿತು.

ಮೊದಲ ದಿನದಿಂದಲೇ ಚಡ್ಡಿ ಹಾಕುವುದರ ವಿರುದ್ಧ ನಾನು ಪ್ರತಿಭಟಿಸಿದ್ದೆ. ಜೈಲಿನ ಮುಖ್ಯಸ್ಥನನ್ನು ನಾನು ನೋಡಬೇಕೆಂದು ಒತ್ತಾಯ ತಂದು ಆತನನ್ನು ಭೇಟಿ ಮಾಡಿ ಎಲ್ಲಾ ದೂರುಗಳ ಪಟ್ಟಿ ಕೊಟ್ಟೆ. ವಾರ್ಡರ್‌ಗಳು ನನ್ನ ಪ್ರತಿಭಟನೆ ನಿರ್ಲಕ್ಷಿಸಿದರು. ಆದರೆ ಎರಡನೇ ವಾರ ಕೊನೆ ಹೊತ್ತಿಗೆ ಎರಡು ಖಾಕಿ ಪ್ಯಾಂಟ್‌ಗಳು ನನ್ನ ಸೆಲ್‌ನಲ್ಲಿ ಬಿದ್ದವು. ಯಾವ ತ್ರೀ-ಪೀಸ್ ಸೂಟು ಸಹ ನನಗೆ ಇಷ್ಟು ಖುಶಿ ಕೊಟ್ಟಿರಲಿಲ್ಲ, ಆದರೆ ಅದನ್ನು ತೊಟ್ಟುಕೊಳ್ಳುವ ಮೊದಲು ನನ್ನ ಸಹವರ್ತಿಗಳಿಗೂ ಪ್ಯಾಂಟ್ ಕೊಡಲಾಗಿದೆಯೋ ಎಂದು ವಿಚಾರಿಸಿದೆ.

ಅವರಿಗೆ ಕೊಟ್ಟಿರಲಿಲ್ಲ. ನಾನು ವಾರ್ಡರ್‌ಗೆ ಪ್ಯಾಂಟ್‌ಗಳನ್ನು ವಾಪಸು ತೆಗೆದುಕೊಂಡು ಹೋಗಲು ಹೇಳಿದೆ. ವಾರ್ಡರ್ ಗೊಣಗಿದ. ಪ್ಯಾಂಟು ಬೇಕು ಅಂತಿಯಾ ತಂದರೆ ಈಗ ಬೇಡ ಅಂತಿಯಾ ಎಂದ.

ಕರಿಯ ತೊಟ್ಟ ಚಡ್ಡಿ ಮುಟ್ಟಲು ಆತ ಹಿಂಜರಿದಿದ್ದ. ಕೊನೆಗೆ ಕಮಾಂಡಿಂಗ್ ಆಫೀಸರ್ ಸ್ವತಃ ನನ್ನ ಸೆಲ್‌ಗೆ ಆ ಪ್ಯಾಂಟುಗಳನ್ನು ವಾಪಸು ತೆಗೆದುಕೊಂಡು ಹೋಗಲು ಬಂದ. 'ಆಯ್ತು ಮಂಡೇಲಾ, ನೀನೂ ಎಲ್ಲರಿಗೆ ಸಿಗುವ ಚಡ್ಡಿನೇ ಹಾಕ್ಕೊಬಹುದು'. ನನಗೆ ಪ್ಯಾಂಟ್ ಕೊಡಲು ತಯಾರಿದ್ದರೆ ಎಲ್ಲಾ ನನ್ನ ಕರಿಯ ಮಿತ್ರರಿಗೆ ಕೊಡಲು ಏನು ಕಷ್ಟ ಎಂದು ಕೇಳಿದೆ. ಆತನ ಬಳಿ ಅದಕ್ಕೆ ಏನೂ ಉತ್ತರವಿರಲಿಲ್ಲ.

(ಮುಗಿಯಿತು)

ರಾಬಿನ್‌ದ್ವೀಪದ ಸೆರೆಯಲ್ಲಿ ಮಂಡೇಲಾ



ಗರ ಬಡಿದೇ ಇರುವ ರಫ್ತು



ಜಿ.ಎಸ್.ಮಣಿ

ರಫ್ತನ್ನು ಹೆಚ್ಚಿಸುವ ಮೂಲಕ ಆರ್ಥಿಕದ ಪುನಶ್ಚೇತನ ಮಾಡುತ್ತೇವೆಂದು ಸರ್ಕಾರಿ ವಕ್ತಾರರು ಉದಾರೀಕರಣ/ಜಾಗತೀಕರಣ ಕಾರರು ಹೇಳುತ್ತಲೇ ಇದ್ದಾರೆ. ಇದಕ್ಕಾಗಿ ಹಲವು ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಆಮದು-ರಫ್ತು ನೀತಿಯ ಉದಾರೀಕರಣ ಒಂದು ಕ್ರಮವಾದರೆ ಡಾಲರಿಗೆದುರು ರೂಪಾಯಿಯ ಬೆಲೆ ಕುಸಿಯುತ್ತಿದ್ದಾಗ್ಯೂ ಕಂಡರೂ ಕಾಣದಂತೆ ಸರ್ಕಾರ ಕ ಕಣ್ಮುಚ್ಚಿ ಕುಳಿತಿದ್ದು ಸರ್ಕಾರ ಸುಮ್ಮನಿದ್ದರೆ ರಫ್ತು ಹೆಚ್ಚುತ್ತದೆ ಎಂದು ರಫ್ತುದಾರರೂ ಹೇಳುತ್ತಲೇ ಬಂದರು.

ರೂಪಾಯಿಯ ಬೆಲೆ ಕುಸಿಯಿತು ನಿಜ. ಆದರೆ ರಫ್ತು ಹೆಚ್ಚಾಗಲೇ ಇಲ್ಲ. ಇಂದು ವಿದೇಶೀ ವಿನಿಮಯ ಶಿಲ್ಕು 25 ಶತಕೋಟಿ ಡಾಲರುಗಳಷ್ಟಕ್ಕೆ ಇಳಿದು ಹೋಗಿದೆ. ಯಾಕೆ ರಫ್ತು ಹೆಚ್ಚಾಗುತ್ತಿಲ್ಲ? ಉದಾರೀಕರಣದ ಆರ್ಥಿಕ ನೀತಿಯ ವೈಫಲ್ಯ ಇದು ಎಂದು ಉದಾರೀಕರಣವಾದಿಗಳ್ಯಾರೂ ಒಪ್ಪಿಕೊಳ್ಳುತ್ತಿಲ್ಲ. ಬದಲಿಗೆ ಇತರ ಹಲವು ಕಾರಣಗಳು ಬೆರಳು ಮಾಡಿ ತೋರಿಸುತ್ತಾರೆ.

ರಫ್ತು ಲಾಭದಾಯಕವಾಗೇ ಇಲ್ಲ ಎಂದು ರಫ್ತುದಾರರು ತಮ್ಮ ಗೋಳು ಹೇಳಿಕೊಳ್ಳುತ್ತಾರೆ. ಬ್ಯಾಂಕುಗಳು ರಫ್ತು ಸಾಲದ ಮೇಲೆ ಹೇರುವ ಬಡ್ಡಿದರ ತೀರ ಹೆಚ್ಚಿನದು (ಈ ದರಗಳು ರಿಯಾಯತಿ ದರಗಳು) ಎಂಬುದು ಅವರು ನೀಡುವ ಇನ್ನೊಂದು ಕಾರಣ. ಇದಲ್ಲದೆ ಸರ್ಕಾರದ ವಿವಿಧ ಇಲಾಖೆಗಳು ರಫ್ತುದಾರರನ್ನು ಗೋಳು ಹೊಯ್ದುಕೊಳ್ಳುತ್ತವೆ ಎಂಬುದು ಮತ್ತೊಂದು ಕಾರಣ.

ರೂಪಾಯಿಯ ಬೆಲೆ ಈಗಿನಷ್ಟೇ ಹಂತದಲ್ಲಿ ಸ್ಥಿರವಾದರೆ ಒಳ್ಳೆಯದು ಎಂದು ಅವರು ಹೇಳುತ್ತಾರೆ. ಯಾಕೆಂದರೆ ರೂಪಾಯಿಯ ಬೆಲೆ ಇನ್ನೂ ಕುಸಿದರೆ ಆಗ ಆಮದಿನ ಬೆಲೆ ಹೆಚ್ಚುತ್ತದೆ. ರಫ್ತಿಗಾಗಿ ಮಾಡಬೇಕಾದ ಆಮದುಗಳು ಹಲವಿರುವದರಿಂದ ಆಮದಿನ ಬೆಲೆ ಹೆಚ್ಚಿದರೆ ರಫ್ತಿನ ಬೆಲೆಯೂ ಹೆಚ್ಚಬೇಕಾಗುತ್ತದೆ. ಆದರೆ ವಿದೇಶೀ ಆಮದುದಾರರು ಹೆಚ್ಚಿನ ಬೆಲೆ ನೀಡಲು ಒಪ್ಪುವುದಿಲ್ಲ. ಆದ್ದರಿಂದ ರಫ್ತು ಲಾಭದಾಯಕವಾಗುವ ಬದಲು ಹಾನಿದಾಯಕವಾಗಿಬಿಡುತ್ತದೆ. ಆಗ್ನೇಯ ಏಶಿಯಾ ದೇಶಗಳ ಬಿಕ್ಕಟ್ಟಿನಿಂದಾಗಿ ಈ ದೇಶಗಳು ತೀರ ಕಡಿಮೆಬೆಲೆಗೆ ಸರಕುಗಳನ್ನು ರಫ್ತು ಮಾಡುತ್ತಾರಾದ್ದರಿಂದ ಭಾರತದ ರಫ್ತು ಇವುಗಳೊಡನೆ ಸ್ಪರ್ಧಿಸಲಾರದು.

ಹೀಗೆ ಭಾರತದ ರಫ್ತಿಗೆ ಇಂದಿಗೂ ಗರಬಡಿದೇ ಇದೆ.

ವಿಮಾ ರಂಗದ ಉದಾರೀಕರಣ: ಸರ್ಕಾರಕ್ಕೆ ತಲೆ ನೋವು;

ವಿಮಾ ರಂಗದ ಖಾಸಗೀಕರಣದ ವಿಷಯ ಬಿಜೆಪಿ ಸರ್ಕಾರಕ್ಕೆ ಈಗಾಗಲೇ ತಲೆನೋವು ತಂದಿದೆ. ತನ್ನ ಬಜೆಟ್ ಭಾಷಣದಲ್ಲಿ ವಿಮಾವಲಯವನ್ನು ಖಾಸಗೀಕರಿಸುವ ಘೋಷಣೆಯನ್ನು ಹಣಕಾಸು ಮಂತ್ರಿಗಳು ಮಾಡಿದ್ದರು. ವಿಮಾ ವಲಯದಲ್ಲಿ ಶೇ. 26 ರಷ್ಟು ವಿದೇಶೀ ನೇರ ಹೂಡಿಕೆಯನ್ನು ಅನುಮತಿಸಬೇಕೇ ಬೇಡವೇ ಎಂಬ ಬಗ್ಗೆ ಮಂತ್ರಿ ಮಂಡಲದ ಸದಸ್ಯರೊಳಗೆ ತೀವ್ರ ಭಿನ್ನಾಭಿಪ್ರಾಯಗಳು ಎದ್ದಿದ್ದು ಈಗ ಯಾವುದೇ ನಿರ್ಧಾರಕ್ಕೆ ಬರುವುದು ಅಸಾಧ್ಯವಾಗಿಹೋಗಿದೆ.

ಇದಕ್ಕಾಗಿ ಒಂದು ಮಂತ್ರಿಮಂಡಲದ ಸಮಿತಿಯನ್ನು ನೇಮಿಸಲಾಗಿದೆ. ಹಣಕಾಸು ಮಂತ್ರಿ ಯಶವಂತ ಸಿನ್ಹಾ, ವಾಣಿಜ್ಯ ಮಂತ್ರಿ ರಾಮಕೃಷ್ಣ ಹೆಗಡೆ, ಇಂಧನ ಮಂತ್ರಿ ಪಿ. ಆರ್.ಕುಮಾರ ಮಂಗಳಂ, ಪೆಟ್ರೋಲಿಯಂ ಮಂತ್ರಿ ವಿ.ಕೆ ರಾಮಮೂರ್ತಿ ಮತ್ತು ಕಾನೂನು ಮಂತ್ರಿ ತಂಬಿ ದುರೈ ಈ ಸಮಿತಿಯಲ್ಲಿದ್ದಾರೆ. ಈ ಸಮಿತಿ ಪರೀಕ್ಷಿಸಬೇಕಾದ ಪ್ರಸ್ತಾಪ ಗಳೆಂದರೆ ವಿದೇಶೀ ನೇರ ಹೂಡಿಕೆ ಶೇ 26 ಕ್ಕೆ ಸೀಮಿತವಾಗಿರಬೇಕು. ವಿದೇಶೀ ನೇರ ಹೂಡಿಕೆದಾರರು ಅನಿವಾಸಿ ಭಾರತೀಯರು ಮತ್ತು ಇತರೆ ವಾಣಿಜ್ಯ ಸಾಲಗಳು ಶೇ. 40ಕ್ಕೆ ಸೀಮಿತವಾಗಿರಬೇಕು, ಇನ್ಸುರೆನ್ಸ್ ಪ್ರಾಧಿಕಾರ ಸರ್ಕಾರದ ಬದಲಿಗೆ ಲೈಸನ್ಸ್ ನೀಡುವ ಅಧಿಕಾರ ಹೊಂದಿರಬೇಕು, ಒಂದು ಕಂಪನಿಗೆ ಒಂದೇ ಲೈಸನ್ಸ್ ನೀಡಬೇಕು ಇತ್ಯಾದಿ.

ವಿಮಾರಂಗದ ಉದಾರೀಕರಣ ಮೊದಲು ಬರೀ ದೇಶಿ ಕಂಪನಿಗಳ ಪ್ರವೇಶಕ್ಕೆ ಸೀಮಿತವಾಗಬೇಕೆಂಬ ಪ್ರಸ್ತಾಪದಿಂದ ಈಗ ಹೇಗೆ ವಿದೇಶೀ ಹೂಡಿಕೆದಾರರಿಗೂ ನಿಲುಕುವಂತೆ ಮಾಡಲಾಗುತ್ತಿದೆ ಎಂಬುದನ್ನು ಸ್ಪಷ್ಟವಾಗಿ ಕಾಣಬಹುದು. ವಿಮಾರಂಗವನ್ನು ಜಾಗತಿಕ ಹೂಡಿಕೆದಾರರಿಗೆ ಹಿಂಬಾಗಿಲಿನಿಂದ ತೆರೆಯಬೇಕೆಂಬ ಹುನ್ನಾರದ ಭಾಗದ ಈ ನಾಟಕ ಎಂಬುದನ್ನು ಮರೆಯಬಾರದು ಅಲ್ಲವೇ.

ಸಣ್ಣ ಕೈಗಾರಿಕೆಗಳಿಗೆ ಮತ್ತೊಂದು ಅಡ್ಡಗಾಲು

ಕೈಗಾರಿಕೆ ಸಣ್ಣದೆಂದು ಗಣಿಸಲು ಅದರ ಸ್ಥಾವರ ಮತ್ತು ಯಂತ್ರಗಳಲ್ಲಿನ ಹೂಡಿಕೆ 300 ಲಕ್ಷ ರೂಪಾಯಿಗಳಿಷ್ಟಿರಬಹುದೆಂದು ಹಿಂದಿನ ಸಂಯುಕ್ತರಂಗ ಸರ್ಕಾರ ನಿರ್ಧರಿಸಿತ್ತು. ಇದರಿಂದ ದೊಡ್ಡ ಬಂಡವಾಳಿಗರಿಗೆ ಲಾಭವಾಗುತ್ತದೆಂದು ಎಲ್ಲರಿಗೂ ಗೊತ್ತಿತ್ತು. ಬಿಜೆಪಿ ಸರ್ಕಾರ ಈ ಮಿತಿಯನ್ನು ಮತ್ತೆ ಮೊದಲಿನ 60 ಲಕ್ಷ ರೂಪಾಯಿಗೆ ಇಳಿಸಬೇಕೆಂಬ ಪ್ರಸ್ತಾಪ ಮಾಡಿತು. ಪ್ರಧಾನ ಮಂತ್ರಿ ವಾಜಪೇಯಿಯವರು ಇದನ್ನು 100 ಲಕ್ಷ ರೂಪಾಯಿಗಳಿಗೆ ಇಳಿಸಬಹುದೆಂದು ಸೂಚಿಸಿದ್ದರು.

ಆದರೆ ಈಗ ಬಿಜೆಪಿಯ ಜವಳಿ ಮಂತ್ರಿ ಕಾಶೀರಾಮ ರಾಣಾ ಜವಳಿ ಕ್ಷೇತ್ರಕ್ಕೆ ಮಾತ್ರ ಈ ಮಿತಿಯನ್ನು ಕಡಿಮೆ ಮಾಡುವುದು ಬೇಡ, ಬೇರೆ ಉದ್ದಿಮೆಗಳಿಗೆ ಬೇಕಾದರೆ ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ.

ಯಾವುದೇ ಒಳ್ಳೆಯ ಕ್ರಮಗಳು ಜಾರಿಗೆ ಬರದಂತೆ ನೋಡಿಕೊಳ್ಳುವ ಬಿಜೆಪಿಯ ತಂತ್ರ ಇದಿರಬಹುದು. ಜನಾಭಿಪ್ರಾಯಕ್ಕೆ ಮಣಿದಂತೆ ನಟಿಸಿ ಕ್ರಮದ ಘೋಷಣೆ ಮಾಡಿಬಿಡುವುದು. ಅನಂತರ ಅವರಲ್ಲೇ ಯಾರಾದರೊಬ್ಬರು ಅಡ್ಡಗಾಲು ಹಾಕಿಬಿಡುವುದು. ಈ ವಿವಾದದಲ್ಲಿ ದಿನ ದೂಡಿಬಿಡುವುದು. ಹೇಗಿದೆ ಈ ತಂತ್ರ? ಇನ್ನಂತೂ ಸಣ್ಣ ಕೈಗಾರಿಕೆಗಳಿಗೆ ಅನುಕೂಲಕರ ನಿರ್ಧಾರ ಸದ್ಯದಲ್ಲಿ ಬರಲಾರದು ಅಲ್ಲವೆ?

ಬೆಂಗಳೂರಿನ ಬಿನ್ನಿ ಮಿಲ್ಲಿನಲ್ಲಿ ಪ್ರಹಾರ

ಬೆಂಗಳೂರಿನ ಬಿನ್ನಿ ಮಿಲ್ ತನ್ನ ಕೆಲಸಗಾರರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಮುಂದಿರಿಸಿದೆ. ಈಗಿರುವ ಕಾರ್ಮಿಕರ ಸಂಖ್ಯೆಯನ್ನು ಈಗಿನ 1150 ರಿಂದ 600 ರಷ್ಟು ಇಳಿಸುವ ಉದ್ದೇಶ ಬಿನ್ನಿ ಮಿಲ್ಲಿನದು.

ಈಗಿನ ಹಲವು ಚಟುವಟಿಕೆಗಳನ್ನು ಮಿಲ್ ಕಡಿತ ಗೊಳಿಸಲಿದೆಯಂತೆ. ಆದರೆ ನಿವೃತ್ತಿ ಯೋಜನೆಯ ಪ್ರಕಾರ ಪ್ರತಿ ಕೆಲಸಗಾರನಿಗೆ ಪ್ರತಿ ಒಂದು ವರ್ಷದ ಸೇವೆಗೆ 18 ದಿನಗಳ ಸಂಬಳ ಮತ್ತು 15 ದಿನಗಳ ಗ್ರಾಚ್ಯೂಯಿಟಿ ಹಣವನ್ನು ಪರಿಹಾರವಾಗಿ ನೀಡಲಾಗುತ್ತದಂತೆ. ಇದರ ಜೊತೆಗೆ ಎಕ್ಸ್‌ಗ್ರೇಷಿಯಾ ಎಂದು 20000 ರೂಪಾಯಿಗಳನ್ನು ನೀಡಲಾಗುವುದಂತೆ.

ಸ್ವಯಂ ನಿವೃತ್ತಿ ಯೋಜನೆಯೆಂದು ಹೀಗೆ ಅಲ್ಪ ಹಣ ನೀಡಿ ಬೀದಿಗೆಸೆವ ಕೆಲಸ ಕಾರ್ಮಿಕರನ್ನು ವಿನಾಶದೆಡೆಗೇ ತಳ್ಳುತ್ತದೆ. ಉದ್ಯೋಗವಿಲ್ಲದೆ ಇರುವ ಹಣವನ್ನು ಖರ್ಚುಮಾಡಿಕೊಂಡು ಮುಂದೆ ಕೂಳಿಗೂ ಗತಿಯಿಲ್ಲದೆ ಪರದಾಡ ಬೇಕಾದ ಪರಿಸ್ಥಿತಿ ಇವರಿಗೆ ಬರುತ್ತದೆ. ಒಂದು ಸಾರಿ ದೊಡ್ಡ ಮೊತ್ತದ ಹಣ ದೊರೆವಂತೆ ಕಂಡರೂ ಇದು ನಿಜದಲ್ಲಿ ಯಾವುದೇ ತರಹದ ಪರಿಹಾರ ವಾಗಲಾರದು.

ಆದರೆ ಉದಾರೀಕರಣ ಮನುಷ್ಯರ ನೋವುಗಳಿಗೆ ಗಮನ ನೀಡಲಾರದು. ಅಲ್ಲವೆ?

ಕೃಷಿ ವಲಯಕ್ಕೆ ಮಲತಾಯಿ ಪ್ರೀತಿ

ಕೃಷಿ ವಲಯದಲ್ಲಿ ಸ್ವಾವಲಂಬನೆ ಭಾರತಕ್ಕೆ ಅತ್ಯಂತ ಮಹತ್ವವಾದದ್ದು. ಆಹಾರದ ವಿಷಯದಲ್ಲಿ ಸ್ವಾವಲಂಬನೆ ಉಳಿದು ಬೆಳೆದರೆ ದೇಶದ ಆರ್ಥಿಕ ಪ್ರಗತಿಗೆ ಅದರಿಂದ ಬಹಳ ಒಳ್ಳೆಯದಾಗುತ್ತದೆ. ಆದ್ದರಿಂದಲೇ ಸ್ವಾತಂತ್ರ್ಯ ನಂತರದಲ್ಲಿ ಕೃಷಿ ವಲಯದ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಹಲವು ಬರಗಾಲಗಳೂ ಇಂತಹ ಪ್ರಯತ್ನಗಳಿಗೆ ಒತ್ತು ನೀಡಿ ಪ್ರೇರಣೆ ನೀಡಿದವು. ಸಾಮ್ರಾಜ್ಯಶಾಹಿಗಳ ಕೈ ತಿರುಚುವ ಪ್ರಯತ್ನಗಳಿಂದಲೂ ಇಂತಹ ಪ್ರೇರಣೆ ಗಟ್ಟಿಯಾಗಿತ್ತು.

ಅಭಿವೃದ್ಧಿಗೆ ಬೇಕಾದ ಬಂಡವಾಳದ ಕೊರತೆ ಕೃಷಿ ರಂಗದಲ್ಲಿ ಇದ್ದದ್ದರಿಂದ ಕೃಷಿ ವಲಯಕ್ಕೆ ಬ್ಯಾಂಕುಗಳು ಕನಿಷ್ಟ ಶೇ 18 ರಷ್ಟು ಸಾಲ ನೀಡಬೇಕೆಂಬ ನಿಯಮವನ್ನು ಹೇರಲಾಗಿತ್ತು. ಹೀಗೆ ಹೇರಿದ ಮೇಲೂ ಕೃಷಿ ವಲಯದ ಪೂರ್ಣ ಅವಶ್ಯಕತೆಗಳನ್ನು ಪೂರೈಸಲಾಯಿತೆಂದು ಹೇಳಲಾಗದು. ಆದರೆ ಆ ದಿಸೆಯಲ್ಲಿ ಪ್ರಯತ್ನವಂತೂ ನಡೆದೇ ಇತ್ತು. ಮತ್ತು ಗಣನೀಯ ಸಾಧನೆಯನ್ನು ಮಾಡಲಾಗಿತ್ತು.

ಈಗ ಉದಾರೀಕರಣದ ಆರ್ಥಿಕ ನೀತಿಗಳು ಜಾರಿಗೆ ಬಂದ ಮೇಲೆ ಕೃಷಿ ವಲಯಕ್ಕೆ ಆದ್ಯತೆಯೆಂಬುದು ಕಡಿಮೆಯಾಗುತ್ತಾ ಬಂದಿದೆ. ಕೃಷಿವಲಯಕ್ಕೆ ನಿರ್ದಿಷ್ಟ ಪಡಿಸಿದ ಶೇ 18 ರಷ್ಟು ಸಾಲ ನೀಡದೇ ಇದ್ದರೂ ಸರ್ಕಾರ ಶಿಕ್ಷೆ ವಿಧಿಸದು ಎಂಬ ಸಂದೇಶವನ್ನು ನೀಡಿರುವುದರಿಂದ ಬ್ಯಾಂಕುಗಳು ಈ ವಲಯಕ್ಕೆ ಸಾಲ ನೀಡಲು ಮುಂದಾಗುತ್ತಿಲ್ಲ.

ಆದ್ದರಿಂದ ಕೃಷಿ ವಲಯಕ್ಕೆ ನೀಡಿರುವ ಸಾಲ 1994-95 ರಲ್ಲಿ ಶೇ. 13.91 ರಷ್ಟಿದ್ದದ್ದು 1997-98 ರಲ್ಲಿ ಶೇ.15.72 ಕ್ಕೇರಿದೆ ಅಷ್ಟೇ.

ಈ ವಿಷಯದಲ್ಲಿ ಎಲ್ಲ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳಿಗೆ ಕನಿಷ್ಠ ಶೇ 18 ರಷ್ಟು ಸಾಲ ನೀಡಬೇಕೆಂಬ ಸಲಹೆ ನೀಡಿದೆ ಎಂದು ಸರ್ಕಾರ ಹೇಳುತ್ತದೆ. ಆದರೆ ಬ್ಯಾಂಕುಗಳ ದೃಷ್ಟಿಕೋನವೇ ಬದಲಾಗಿರುವುದರಿಂದ ಸರ್ಕಾರೀ ನೀತಿಗಳು ಅದಕ್ಕೆ ಅನುಗುಣವಾಗಿರುವುದರಿಂದ ಈ ಆದ್ಯತೆ ಕನಿಷ್ಟ ಸಾಲ ಎಂಬುದಲ್ಲ ಬರಿ ನಾಟಕಗಳಂತೆ ಕಾಣುತ್ತವೆ.

ಶ್ರೀಮಂತರಿಗೆ ಸಾಲ ನೀಡಿ ಲಾಭ ಮಾಡುವ ಮರೀಚಿಕೆಯನ್ನು ಬ್ಯಾಂಕುಗಳು ಬೆನ್ನಟ್ಟಿ ಹೋಗಲು ಹವಣಿಸುತ್ತಿವೆ. ಇದರ ಪರಿಣಾಮವನ್ನು ಮುಂಬರುವ ದಿನಗಳಲ್ಲಿ ನಾವು ಕಾಣಬೇಕಾಗುತ್ತದೆ. ಇದಲ್ಲವೆ ಉದಾರೀಕರಣ?

ಟಿಸ್ಕೊವನ್ನೂ ಬಿಡದ ಹಿಂಜರಿತ

ಅಶೋಕ ಲೆಯ್ಲಾಂಡ್ ಎಂಬ ಹಿಂದೂಜಾಗಳ ಕಂಪನಿ ನೆಲಕಚ್ಚಿದಂತೆ ಈಗ ಟಾಟಾಗಳ ಟಿಸ್ಕೊ ನೆಲ ಕಚ್ಚತೊಡಗಿದೆ. ಟಿಸ್ಕೊದ ಒಟ್ಟು ಮಾರಾಟ ಕುಸಿದಿದೆ. ಅದರ ಜೊತೆಗೆ ಅದರ ಲಾಭದ ಪ್ರಮಾಣವೂ ಇಳಿದಿದೆ. ಬೇಡಿಕೆಯೂ ಇಲ್ಲ. ಜೊತೆಗೆ ಬೆಲೆಗಳೂ ಕುಸಿದಿವೆ. ಆದ್ದರಿಂದಲೇ ಈ ಪರಿಸ್ಥಿತಿ ಎಂದು ಟಾಟಗಳು ಹೇಳುತ್ತಾರೆ.

ಉಕ್ಕು ಉದ್ಯಮದಲ್ಲಿ ಟಾಟಾಗಳ ಈ ಟಿಸ್ಕೊ ಬಹುಮುಖ್ಯ ಕಂಪನಿ. ಇಂತಹ ಕಂಪನಿಗೇ ಇಂತಹ ಪರಿಸ್ಥಿತಿ ಬಂದಿದೆಯೆಂದರೆ ಪರಿಸ್ಥಿತಿಯ ಗಂಭೀರತೆ ಅರ್ಥವಾದೀತು.

ಆಂತರಿಕ ಬೇಡಿಕೆ ತೀವ್ರವಾಗಿ ಕುಸಿದಿರುವುದರ ಜೊತೆಗೆ ಆಮದು ನೀತಿಯ ಉದಾರೀಕರಣವು ಈ ಉದ್ದಿಮೆಯನ್ನು ತಲ್ಲಣಗೊಳಿಸುತ್ತಿದೆ ಎಂದು ಹೇಳಲಾಗುತ್ತಿದೆ.

ಕರ್ನಾಟಕದಲ್ಲಿ ಕಳೆದವಾರ

ಜುಲೈ-24

★ ದೇವನಹಳ್ಳಿ ವಿಮಾನ ನಿಲ್ದಾಣ: ಟಾಟಾ-ಪಟೇಲ್ ಫಲಪ್ರದ ಮಾತುಕತೆ.

★ ಮೈಸೂರು ಜೈಲಿನಿಂದ ಬಾಗೂರು-ನವಿಲೆ ರೈತರ ಬಿಡುಗಡೆ.

ಜುಲೈ- 25

★ 32 ತಾಲ್ಲೂಕುಗಳಲ್ಲಿ ಮಳೆ ಅಭಾವ: ಕಡಿಮೆ ಬಿತ್ತನೆ.

★ ಗುಂಡಬಾಳ ನದಿಗೆ ಪ್ರವಾಹ: 15 ಗ್ರಾಮಗಳು ಜಲಾವೃತ್ತ.

★ ಕುಡಿಯುವ ನೀರಿನ ದರ ಶೇ 15 ರಷ್ಟು ಹೆಚ್ಚಳ.

★ ಕಾವೇರಿ ಪ್ರಾಧಿಕಾರ ವಿರೋಧಿಸಲು ರಾಜ್ಯ ನಿರ್ಧಾರ

ಜುಲೈ-26

★ ಪಂಕಜ, ವೈದೇಹಿ ಅವರಿಗೆ 1998 ನೇ ಸಾಲಿನ ಅತ್ತಿಮಬ್ಬೆ ಪ್ರಶಸ್ತಿ ಪ್ರದಾನ

★ ಗುಂಡ ಬಾಳ ಪ್ರವಾಹ:ತುರ್ತು ಪರಿಹಾರಕ್ಕೆ ಅದೇಶ.

★ ಪರ್ಯಾಯ ಭದ್ರಾ ಮೇಲ್ದಂಡೆ ಜಾರಿಗಾಗಿ ಹೋರಾಟ ಸಮಿತಿ ಅಸ್ತಿತ್ವಕ್ಕೆ.

★ ಎಲ್ಲಾ ತಾಲೂಕುಗಳಲ್ಲಿ ಕೃಷಿ ಅಧಿಕಾರಿಗಳ ತಂಡ ರಚನೆ

ಜುಲೈ- 27

★ ಕಾಡುಗೊಂಡನ ಹಳ್ಳಿಯಲ್ಲಿ ಮರುಕಳಿಸಿದ ಗಲಭೆ - ಗುಂಡೇಟಿನಿಂದ ಓರ್ವನಿಗೆ ಗಾಯ.

★ ಕೃಷ್ಣಾ ನೀರು ಬಳಕೆಗೆ 4900 ಕೋಟಿ ರೂ ಯೋಜನೆ.

★ ಸುವರ್ಣ ಸ್ವಾತಂತ್ರ್ಯೋತ್ಸವ ಜಾಥಾ ಆರಂಭ.

ಜುಲೈ -28

★ ಶಾಸಕ ಗುತ್ತೇದಾರ ಬಂಧನ, ಬಿಡುಗಡೆ.

★ ಧಾರವಾಡ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಮೇಲೆ ತೀವ್ರ ಹಲ್ಲೆ.

★ ವರ್ಗ ಮಾಡಿದ ಸ್ಥಳಕ್ಕೆ ಹೋಗದ 10 ಅಧಿಕಾರಿಗಳ ಅಮಾನತು.

ಜುಲೈ-29

★ ಕಾಫಿ ಕ್ಯೂರಿಂಗ್ ಕೆಲಸಗಾರರಿಗೆ ಪರಿಷ್ಕೃತ ವೇತನ ಅಧಿಸೂಚನೆ.

★ ರಾಜ್ಯದಲ್ಲಿ ನೈರುತ್ಯ ಮುಂಗಾರು ಚುರುಕು.

★ ಜಿ.ಪಂ ಅಧ್ಯಕ್ಷರ ಮೇಲೆ ಹಲ್ಲೆ - ಸದಸ್ಯತ್ವ ರದ್ದಿಗೆ ಶಿಫಾರಸು.

★ ವರ್ಗಮಾಡಿದ ಸ್ಥಳಕ್ಕೆ ಹೋಗದ 19 ಇಂಜಿನಿಯರ್‌ಗಳ ಅಮಾನತು.

ಜುಲೈ -30

★ ಸಚಿವ ಜಯಕುಮಾರ್ ಮೇಲೆ ಹಲ್ಲೆ, ಚಪ್ಪಲಿ ಎಸೆತ.

★ ರಾಜ್ಯದಲ್ಲಿ 6 ತಿಂಗಳಲ್ಲಿ 113 ವರದಕ್ಷಿಣೆ ಸಾವು.

★ ಮಸ್ಕಿಯಲ್ಲಿ ನೀರಾವರಿ ಸಚಿವರಿಗೆ ಘೇರಾವ್.

ಸಿ.ಪಿ.ಐ.(ಎಂ) ನ ರಾಜಕೀಯ ಪ್ರಚಾರಾಂದೋಲನ

ಕೋಲಾರ: ಜುಲೈ 26 ರಂದು ಗೌರಿಬಿದನೂರು ನಗರದಲ್ಲಿ ಸಿ.ಪಿ.ಐ.(ಎಂ)ನ ವತಿಯಿಂದ ರಾಜಕೀಯ ಪ್ರಚಾರಾಂದೋಲನದ ಅಂಗವಾಗಿ ಬೃಹತ್ ರ್‍ಯಾಲಿ ಮತ್ತು ಭಾರೀ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯುನ್ನು ಉದ್ದೇಶಿಸಿ ವಿ. ಶ್ರೀನಿವಾಸಕರ್ಣ ಮಾತನಾಡುತ್ತಾ ಈ ದೇಶದಲ್ಲಿ ತಿನ್ನಲು ಅನ್ನ ಇಲ್ಲ, ಇರಲು ಮನೆ ಇಲ್ಲ ಮಾಡಲು ಕೆಲಸವಿಲ್ಲ, ನಿರುದ್ಯೋಗ ತಾಂಡವಾಡುತ್ತಿದೆ, ಬಡತನ ತುಂಬಿ ತುಳುಕುತ್ತಿದೆ, ಇಂತಹ ಪರಿಸ್ಥಿತಿಯಲ್ಲಿ ಪೋಖ್ರಾನ್‌ನಲ್ಲಿ ಅಣುಬಾಂಬ್ ಪರೀಕ್ಷೆ ಅವಶ್ಯಕತೆ ಇರಲಿಲ್ಲ ಎಂದರು.

ಬಿ.ಜೆ.ಪಿ ತನ್ನ ಧೋರಣೆಗಳನ್ನು ಬದಲಾಯಿಸಿಕೊಳ್ಳದಿದ್ದರೆ ಸಿಪಿಐ(ಎಂ)ನಿಂದ ಉಗ್ರ ಹೋರಾಟ ನಡೆಸಲಾಗುವುದು. ಇತ್ತೀಚಿಗೆ ಕರ್ನಾಟಕ ರಾಜ್ಯ ಸರ್ಕಾರ ವಿದ್ಯುತ್ ದರ ಏರಿಸಿ ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಏರಿಸಿರುವ ದರವನ್ನು ಇಳಿಸದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಅವರು ಹೇಳಿದರು. ಗೌರಿಬಿದನೂರು ತಾಲ್ಲೂಕುನಲ್ಲಿ ಸರ್ಕಾರಿ ಕಛೇರಿಗಳಲ್ಲಿ ಲಂಚ ತಾಂಡವಾಡುತ್ತಿದೆ. ತಾಲ್ಲೂಕಿನಲ್ಲಿ ಸರ್ಕಾರಿ ಅಧಿಕಾರಿಗಳು ಲಂಚಕೋರತನ ನಿಲ್ಲಿಸದಿದ್ದರೆ ಹೋರಾಟ ನಡೆಸಲಾಗುವುದು ಎಂದು ಅವರು ಎಚ್ಚರಿಸಿದರು. ಸಿ.ಪಿ.ಐ(ಎಂ) ನ ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯ ಜಿ.ಸಿ.ಬಯ್ಯಾರೆಡ್ಡಿ ಮಾತನಾಡುತ್ತಾ ಅಣುಬಾಂಬು ಪರೀಕ್ಷೆ ಏತಕ್ಕಾಗಿ ನಡೆಸಿದರು, ವಿಶ್ವಶಾಂತಿಗಾಗಿ ಹೋರಾಟ ನಡೆಸುತ್ತಿರುವ ಭಾರತ ದೇಶ ಅಣುಬಾಂಬು ಪರೀಕ್ಷೆ ನಡೆಸಿದ್ದರ ಹಿನ್ನೆಲೆ ಏನು ಎಂದು ವಿವರಿಸುತ್ತಾ ಸ್ಥಿರ ಸರ್ಕಾರ ನೀಡುತ್ತವೆಂದು ಬಿಜೆಪಿ ಪ್ರತಿದಿನವನ್ನು ಅಸ್ಥಿರತೆಯ ನೆರಳಲ್ಲಿ ನೂಕುತ್ತಿದೆ ಎಂದರು.



ಸಭೆಯ ಅಧ್ಯಕ್ಷತೆಯನ್ನು ಸಿದ್ದಗಂಗಪ್ಪ ವಹಿಸಿದ್ದರು. ಮೊದಲಿಗೆ ಎನ್.ಎಸ್. ಪ್ರೇಮಲತಾ ಸ್ವಾಗತ ಕೋರಿದ್ದರು, ಕೆ.ಎನ್. ಮೂರ್ತಿ ವಂದನಾರ್ಪಣೆ ಮಾಡಿದರು.

ಬಿಜಾಪುರ ಜಿಲ್ಲಾ ರೈತರ ಜಂಟೀ ಬೃಹತ್ ಸಮಾವೇಶ



ಕರ್ನಾಟಕ ರಾಜ್ಯದ ಏಕೀಕರಣದ ನಂತರ ಇದುವರೆಗೆ ರಾಜ್ಯದಲ್ಲಿ ಆಳಿಹೋದ 10 ಮುಖ್ಯಮಂತ್ರಿಗಳ ಪೈಕಿ ಎಸ್.ನಿಜಲಿಂಗಪ್ಪ, ಬಿ.ಡಿ.ಜತ್ತಿ, ಎಸ್.ಆರ್.ಕಂಠಿ, ವೀರೇಂದ್ರ ಪಾಟೀಲ, ಎಸ್.ಆರ್.ಬೊಮ್ಮಾಯಿ ಹೀಗೆ ಐವರು ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರದೇಶದವರೇ ಆಗಿದ್ದರು. ಇದುವರೆಗೂ ಬಿಜಾಪುರ ಜಿಲ್ಲೆಯಿಂದ 9 ಜನ ಎಂ.ಡಿ.ಗಳು 119 ಜನ ಶಾಸಕರು ಹಲವು ಜನ ಜಿಲ್ಲಾ-ತಾಲೂಕು ಪಂಚಾಯತ್ ಸದಸ್ಯರ, ವಿಧಾನ ಪರಿಷತ್ ಸದಸ್ಯರು ಆಯ್ಕೆಯಾದರೂ ಇನ್ನೂ ಕೂಡಾ ಬರಗಾಲದಿಂದ ತತ್ತರಿಸುವ ಭವಣೆ ತಪ್ಪಲಿಲ್ಲ. ಸಾಗುವಳಿಗೆ ಯೋಗ್ಯವಾದ ಭೂಮಿಯು ಪಂಚ ನದಿಗಳು ಹೊಂದಿದ. ಸಮರ್ಪಕ ನೀರಾವರಿ ಯೋಜನೆಯಿಂದ ವಿಜಾಪುರ ಜಿಲ್ಲೆ ಮತ್ತೊಂದು ಪಂಜಾಬ್ ಆಗುವ ಬದಲು ಆಳುವ ಜನರ ನಿರ್ಲಕ್ಷ್ಯಕ್ಕೊಳಗಾಗಿ ಕರ್ನಾಟಕ ರಾಜ್ಯದ ಮತ್ತೊಂದು 'ಕಾಲಹಂದಿ' ಯಾಗಿಯೇ ಉಳಿಯಿತೆಂದು ಜುಲೈ 20 ರಂದು ಬಿಜಾಪುರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ - ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಕರ್ನಾಟಕ ಕಿಸಾನ್ ಸಭಾಗಳು ಜಂಟಿಯಾಗಿ ಏರ್ಪಡಿಸಿದ 500 ಕ್ಕೂ ಹೆಚ್ಚು ರೈತರ ಬೃಹತ್ ಸಮಾವೇಶವು ತನ್ನ ನಿರ್ಣಯದಲ್ಲಿ ಕಟುವಾಗಿ ಟೀಕಿಸಿದೆ. ಜಿಲ್ಲೆಯನ್ನು ಬರಗಾಲದಿಂದ ಪಾರು ಮಾಡಲು ಬಚಾವತ್ ತೀರ್ಪಿನಂತೆ 2000 ವರ್ಷದೊಳಗೆ ಕೃಷ್ಣಾ ಮೇಲ್ದಂಡೆಯಡಿಯಲ್ಲಿ ಆಲಮಟ್ಟಿ ಆಣೆಕಟ್ಟು ಮತ್ತು ಕಾಲುವೆಗಳು ನಾರಾಯಣಪುರ ಆಣೆಕಟ್ಟು ಅದಕ್ಕೆ ಎಡ-ಬಲ ಕಾಲುವೆಗಳು ಗುತ್ತಿ ಬಸವಣ್ಣ, ಚಿಮ್ಮಲಗಿ, ಅಡಿಹುಡಿ ಮೊದಲಾದ ಏತ ನೀರಾವರಿ ಯೋಜನೆಗಳು, ಭೀಮಾ ನದಿಯ ಬ್ಯಾರೇಜ್‌ಗಳ ಹಾಗೂ ಬಿಜಾಪುರ, ಸಿಂಧಗಿ, ಇಂಡೀ ತಾಲೂಕುಗಳ ನೀರಾವರಿ ಮತ್ತು ಕುಡಿಯುವ ನೀರಿನ ಜೀವನಾಡಿ ಮುಳವಾಡ ಯಾತ ನೀರಾವರಿ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಪೂರೈಸುವಂತೆ ನಿರ್ದಯ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ಸದರಿ ನಿರ್ಣಯವನ್ನು ರಾಜ್ಯರೈತ ಸಂಘದ ಅಧ್ಯಕ್ಷರಾದ ಬಿ.ಎಸ್.ಜೋಗೂರ್ ಮಂಡಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಅಣ್ಣರಾಯ ಈಳಿಗೇರ ಅನುಮೋದಿಸಿದರೆ, ಪ್ರಚಂಡ ಕರತಾಡನದ ಮೂಲಕ ಹೋರಾಟವನ್ನು ಮುನ್ನಡೆಸಲು ಸಮಾವೇಶ ಒಪ್ಪಿಗೆ ನೀಡಿತು.

ಈ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ - ಪ್ರಾಂತ ರೈತ ಸಂಘದ ವಿಜಾಪುರ ಜಿಲ್ಲಾ ಅಧ್ಯಕ್ಷರಾದ ಭೀಮಸಿ ಕಲಾದಗಿ ವಹಿಸಿದ್ದರು.

ಕರ್ನಾಟಕ ರಾಜ್ಯ ರೈತ ಸಂಘದ ಮಹಾ ಪ್ರಧಾನ ಕಾರ್ಯದರ್ಶಿಗಳು, ಶಾಸಕರು ಆದ ಕೆ.ಎಸ್.ಪುಟ್ಟಣ್ಣಯ್ಯ ಅಧಿವೇಶನವನ್ನು ಉದ್ಘಾಟಿಸಿದರು. ಉತ್ತರ ಕರ್ನಾಟಕದ ಜಿಲ್ಲೆಗಳ ನೀರಿನ ಅಭಾವವನ್ನು ನೀಗಿಸುವ ಕೃಷ್ಣೆಯ ಮಗ್ಗುಲಲ್ಲೇ ಇದ್ದರೂ ರಾಜ್ಯ ಕೇಂದ್ರ ಸರ್ಕಾರ ಜನವಿರೋಧಿ ನೀತಿಯಿಂದಾಗಿ ಅವು ಬರವನ್ನು ಎದುರಿಸಬೇಕಾಗಿ ಬಂದಿದೆ ಎಂದರು.

ರೈತ ಸಂಘಗಳು ಒಂದೆಡೆ ಒಗ್ಗೂಡಿ ಹೋರಾಟ ನಡೆಸೋಣ ಮತ್ತೊಂದೆಡೆ ವಿಧಾನಸಭೆಯುಲ್ಲಿ ನಾನು ಮತ್ತು ಜಿ.ವಿ.ಶ್ರೀರಾಮರೆಡ್ಡಿ ಅಭಿವೃದ್ಧಿ ಕೆಲಸಗಳಿಗಾಗಿ ಹೋರಾಡುತ್ತೇವೆಂದು ಆಶ್ವಾಸನೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನಪಡೆ ಬರಗಾಲದ ರಾಜಕೀಯವನ್ನು ವಿವರಿಸಿದರಲ್ಲದೆ ರೈತರ ಆತ್ಮಹತ್ಯೆ ಹಿಂದೆ ಇರುವ ಕೇಂದ್ರ - ರಾಜ್ಯ ಸರಕಾರಗಳ ನೀತಿಯನ್ನು ಬಯಲಿಗೆಳೆದರು. ನೀರಾವರಿ ಕುರಿತು ವಿಳಂಬ ನೀತಿ ಹಾಗೂ ಗುತ್ತಿಗೆದಾರರ ಬೃಹತ್ ಪ್ರಮಾಣದ ಭ್ರಷ್ಟಾಚಾರವನ್ನು ಎಳೆ - ಎಳೆಯಾಗಿ ಬಿಡಿಸಿ ಸಮಾವೇಶದ ಮುಂದಿಟ್ಟರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಸಿಪಿಐ(ಎಂ) ಧುರೀಣರು-ಕಾರ್ಮಿಕ ಮುಂದಾಳುಗಳು ಆದ ಎನ್.ಕೆ.ಉಪಾಧ್ಯಾಯರು ರೈತರು ತೀವ್ರ ರೀತಿಯ ಹೋರಾಟ ನಡೆಸಿ ನ್ಯಾಯ ಪಡೆಯಬೇಕೆಂದರು. ಕರ್ನಾಟಕ ಪ್ರಾಂತ ರೈತ ಸಂಘದ ಸಹಕಾರ್ಯದರ್ಶಿ ಯು.ಬಸವರಾಜ್ ಅತಿಥಿಯಾಗಿ ಭಾಗವಹಿಸಿದ್ದರು.

ರಾಜ್ಯ ರೈತಸಂಘದ ಅಪ್ಪಾ ಸಾಹೇಬ್ ಪಾಟೀಲ, ಪ್ರಧಾನ ಕಾರ್ಯದರ್ಶಿ ಎಸ್.ಆರ್. ಏಳಗಿ, ವೆಂಕಟೇಶ್ ಕೊಲಕಾರ ಹಾಗೂ ಎ.ಎಂ.ಇಟಗಿ ಮತ್ತು ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷರಾದ ಡಿ.ಎಸ್.ಗುಡ್ಡೋಡಗಿ ಮತ್ತು ಕರ್ನಾಟಕ ಕಿಸಾನ್ ಸಭಾದ ಎಲ್.ಕೆ.ಚಂಚಲಕರ ಮಾತನಾಡಿದರು.

ಹಲವು ನಿರ್ಣಯಗಳನ್ನು ಅಂಗೀಕರಿಸಿದ ಸಮಾವೇಶವು ಸಂಜೆ 4 ಗಂಟೆಗೆ ವಿಜಾಪುರ ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ವಿದ್ಯುತ್ ದರ ವಿರೋಧಿಸಿ ಹಾಗೂ ನೀರಾವರಿಗಾಗಿ ಒತ್ತಾಯಿಸುವ ಇತರ ಬೇಡಿಕೆಗಳ ಮನವಿಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿತು.

ವೀರ ರೈತರ ಹುತಾತ್ಮ ದಿನಾಚರಣೆ ಸಮಾವೇಶ

ನರಗುಂದ - ನವಲಗುಂದ ರೈತ ಬಂಡಾಯದ ವೀರಹುತಾತ್ಮ ದಿನಾಚರಣೆ ಅಂಗವಾಗಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಪ್ರಾಂತ ಕೃಷಿ ಕೂಲಿಕಾರರ ಸಂಘದಿಂದ ಜುಲೈ 24 ರಂದು ಜಂಟಿ ಬಹಿರಂಗ ಸಭೆ ನರಗುಂದದಲ್ಲಿ ನಡೆಯಿತು.

ರೈತರಿಗೆ ರಾಜಕೀಯ ಬೇಡ ಎಂದು ಹೇಳುವ ಸರಕಾರದ ಹೆಚ್ಚಿನ ಮಂತ್ರಿಗಳಲ್ಲೆಲ್ಲಾ ರೈತರಿಗೆ ಸಂಬಂಧಿಸಿ ಇಲಾಖೆಗಳ ನಡೆಸುತ್ತಿದ್ದಾರೆ. ಹಾಗಿದ್ದ ಮೇಲೆ ರೈತರೇಕೆ ರಾಜಕೀಯ ಮಾಡಲಾರರು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಮಹಾ ಪ್ರಧಾನ ಕಾರ್ಯದರ್ಶಿಗಳು, ಶಾಸಕರೂ ಆದ ಪುಟ್ಟಣ್ಣಯ್ಯನವರು ಪ್ರಶ್ನಿಸಿದರು.

ಕರ್ನಾಟಕ ರಾಜ್ಯದಾದ್ಯಂತ 4 ಮಹಾ ಚಳುವಳಿಗಳು ಒಗ್ಗೂಡಿ ಕೆಲಸ ಮಾಡಲು ತೀರ್ಮಾನಿಸಿವೆ. ಈಗ ನಾವು ಪ್ರತ್ಯೇಕ ವಲ್ಲ ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಮತ್ತು ಕರ್ನಾಟಕ ರಾಜ್ಯ ರೈತ ಸಂಘ(ಎಐಕೆಎಸ್) ಗಳು ಕರ್ನಾಟಕ ರಾಜ್ಯದ ರೈತ-ಕೂಲಿಕಾರರ ಪರವಾಗಿ ಜಂಟಿಯಾಗಿ ಧ್ವನಿ ಎತ್ತಲಿವೆ. ಇದನ್ನು ಮತ್ತಷ್ಟು ಬಲಪಡಿಸಿ ಹೋರಾಡಿ" ಎಂದು ಕರೆ ನೀಡಿದರು.

ಈಗ್ಗೆ ಸುಮಾರು 17-18 ವರ್ಷಗಳ ಹಿಂದೆ ಗುಂಡೂರಾಯರ ರೈತ-ವಿರೋಧಿ ಸರ್ವಾಧಿಕಾರಿ ಆಡಳಿತದ ವಿರುದ್ಧ ಹಾಗೂ ರೈತರ ಮೇಲೆ ಹೇರಿದ ಬೆಟರ್‌ಮೆಂಟ್ ಲೆವಿ ವಿರೋಧಿಸಿ ನಡೆದ ಸಮರಧೀರ ರೈತರ ಬಂಡಾಯದಲ್ಲಿ ಪೋಲಿಸರ ಗುಂಡಿಗೆ ಬಲಿಯಾದ ನೂರಾರು ರೈತರ ಹುತಾತ್ಮ ಮುಂದಾಳುಗಳ ಸ್ಮರಣೆಯಲ್ಲಿ ಹೊಸ ಸ್ಫೂರ್ತಿಯಿಂದ ಚಳುವಳಿಯನ್ನು ಮುಂದೆ ಕೊಂಡೊಯ್ಯಲು ಕರೆ ನೀಡಿದರು. ಕೆಂಬಾವುಟ, ಹಸಿರು ಶಾಲುಗಳು ಮೆರೆದಾಡಿದ ಈ ಅಧಿವೇಶನದ ಅಧ್ಯಕ್ಷತೆಯನ್ನು ಸುನಂದಾ ಜಯರಾಂ ವಹಿಸಿದ್ದರು.

ಸ್ವಾತಂತ್ರ್ಯ ಬಂದು 50 ವರ್ಷಗಳು ಕಳೆದು ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವಾಗಲೇ ದೇಶದಾದ್ಯಂತ 500 ಕ್ಕೂ ಹೆಚ್ಚು ರೈತರು ವಿಷ ಕುಡಿದು ಮಾನವಂತರಾಗಿ ಬಾಳಲಾರವೆಂದು ಆತ್ಮಹತ್ಯೆಗಿಳಿದಿರುವುದು ವಿಪರ್ಯಾಸವೆಂದು ಕರ್ನಾಟಕ ಪ್ರಾಂತ ರೈತ ಸಂಘದ ಅದ್ಯಕ್ಷ ಮಾರುತಿ ಮಾನಪಡೆ ವಿಷಾದ ವ್ಯಕ್ತಪಡಿಸುತ್ತಾ ಕಳೆದ 10-12 ವರ್ಷಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿ ಮಾಡುತ್ತಿರುವ ಹೊಸ ಆರ್ಥಿಕ ನೀತಿ, ಉದಾರ ನೀತಿ, ಸಾರ್ವಜನಿಕ ರಂಗ ಖಾಸಗೀಕರಣ ನೀತಿಯೇ ಕಾರಣವಾಗಿದೆಯೆಂದು, ರೈತ-ಕೂಲಿಕಾರರೆಲ್ಲಾ ಸಂಘ ಬೇಧ ಮರೆದು ಒಗ್ಗೂಡಿ ಸೆಣಸಬೇಕೆಂದು ಈ ದಿಕ್ಕಿನಲ್ಲಿ ಕರ್ನಾಟಕ ರಾಜ್ಯದ ನಾಲ್ಕು ರೈತರ ಚಳುವಳಿಗಳು ಒಗ್ಗೂಡಿ ಮುನ್ನಡೆಯುವುದು ಹೊಸ ಸ್ಫೂರ್ತಿಯೊಂದಿಗೆ ಐಕ್ಯ ಹೋರಾಟವನ್ನು ಬಲಪಡಿಸಿ ಮುನ್ನಡೆಯುವಂತೆ ನೆರೆದ ಜನಸ್ತೋಮಕ್ಕೆ ಕರೆ ನೀಡಿದರು.

ಈ ಬೃಹತ್ ಜನ ಸಮಾವೇಶ ರಾಜ್ಯ ಸರ್ಕಾರವು ಇತ್ತೀಚಿಗೆ ವಿದ್ಯುತ್ ದರ ಏರಿಕೆ ಮಾಡಿದ ಕ್ರಮ ಬಲವಾಗಿ ಖಂಡಿಸಿ ವಾಪಸು ಪಡೆಯಲು ಒತ್ತಾಯಿಸಿ ನಿರ್ಣಯವೊಂದನ್ನು ಕೈಗೊಂಡಿತು. ಅದೇ ರೀತಿ ನವಿಲೆ-ಬಾಗೂರುನಲ್ಲಿ ನಡೆಯುತ್ತಿರುವ ರೈತರ ಆಂದೋಲನಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು. ಕೃಷಿ ಕೂಲಿಕಾರರಿಗೆ ಐಆರ್‌ಡಿಪಿ ಯೋಜನೆಯಡಿ 18 ಸಾವಿರ ರೂಪಾಯಿಗಳ ಪೂರ್ಣ ಸಾಲ ನೀಡುವಂತೆ ಹಾಗೂ ಇತರೆ ರೈತ ಕೂಲಿಕಾರರನ್ನು ಬಾಧಿಸುವ ಹಲವು ನಿರ್ಣಯಗಳನ್ನು ಸಮಾವೇಶವು ಕೈಗೊಂಡು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳನ್ನು ಒತ್ತಾಯಿಸಿದೆ. ಮಹಾತ್ಮ ಗಾಂಧಿಯವರ ವ್ಯಕ್ತಿತ್ವವನ್ನು ಅವಹೇಳನಮಾಡುವ 'ಮೈಂ ನಾಥೂರಾಂ ಬೋಲ್ತೆ' ನಾಟಕ ನಿಷೇಧಿಸುವಂತೆ ಕೂಡ ಒತ್ತಾಯಿಸಿತು.

ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಾಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಹಲವು ಜಿಲ್ಲೆಗಳ ಮುಂದಾಳುಗಳು ಮಾತ್ರವಲ್ಲ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮಸಿ ಕಲಾದಗಿ, ಕಾರ್ಯದರ್ಶಿ ಯು.ಬಸವರಾಜ್, ವಿ.ಪಿ.ಕುಲಕರ್ಣಿ, ಜನವಾದಿ ಮಹಿಳಾ ಸಂಘದ ಬಿಜಾಪುರ ಜಿಲ್ಲಾ ಅಧ್ಯಕ್ಷರಾದ ಸುರೇಖಾ ಮುಂತಾದವರು ಸಮಾವೇಶದಲ್ಲಿ ಮಾತನಾಡಿದರು.

ಹಲವು ಮುಂದಾಳುಗಳು ಕರ್ನಾಟಕ ರಾಜ್ಯ ರೈತ ಸಂಘವನ್ನು ಒಡೆದು ಬಿಜೆಪಿ ಜೊತೆ ಸೇರಿ ರೈತ ವಿರೋಧಿ ಕೆಲಸ ನಿರ್ವಹಿಸುವಾಗಲೇ ಹಸಿರು ಶಾಲು ಹಾಕಿಕೊಂಡು ಹುತಾತ್ಮರ ಸಭೆ ನಡೆಸುವ ಕೇಂದ್ರದ ಮಂತ್ರಿಗಳಾದ ಬಾಬಾ ಗೌಡ ಪಾಟಿಲ್ ಕ್ರಮವನ್ನು ಬಲವಾಗಿ ಖಂಡಿಸಿದರು. ಹರ್ಯಾಣ, ರಾಜಸ್ತಾನ, ಉತ್ತರ ಪ್ರದೇಶ, ಮಹಾರಾಷ್ಟ್ರಗಳಲ್ಲಿ ರೈತರ ಚಳುವಳಿಯನ್ನು ಪೋಲಿಸ್ ಬಲದಿಂದ ದಮನ ಮಾಡಿ ಹುತಾತ್ಮರನ್ನಾಗಿಸಿದ ಅಲ್ಲಿನ ಬಿಜೆಪಿ. ಇಲ್ಲೀ ರೈತರ ಪರ ಸೋಗು ಹಾಕುವ ಬಿಜೆಪಿ ಯಡಿಯೂರಪ್ಪ ಇತರರ ಕ್ರಮವನ್ನು ಪ್ರತಿಭಟಿಸುವಂತೆ ಕರೆ ನೀಡಿದರು.



'ಈ ಬಾರಿ ಅಟಲ್ ಬಿಹಾರಿ' ಎಂದವರು ನಾಲ್ಕು ತಿಂಗಳಲ್ಲಿ ಜನರಿಗೆ ಕೊಟ್ಟಿರುವುದು ಸಂಕಷ್ಟಗಳ ಸರಮಾಲೆಯಷ್ಟೆ. ಈ ನಾಲ್ಕು ತಿಂಗಳಲ್ಲಿ ಮಹತ್ವದ ಒಂದೂ ಕಾನೂನು ಪಾಸಾಗಿಲ್ಲ. ಇಂದು ಪ್ರಸ್ತಾವಿಸಿದ್ದನ್ನು ನಾಳೆ ಬದಲಿಸುವ ಹಣಕಾಸು ಮಂತ್ರಿಗಳ ಬಜೆಟ್‌ಗೊಂದು ಔಪಚಾರಿಕತೆ ಒದಗಿಸಿದ್ದು ಬಿಟ್ಟರೆ ಜನರಿಗೆ ಸಿಕ್ಕಿದ್ದಂತೂ ಹಿಂದೆಂದೂ ಕಾಣದ ಬೆಲೆಯೇರಿಕೆ. ಏಕಿದು? ಈ ಸನ್ನಿವೇಶದಲ್ಲಿ ಏನು ಮಾಡಬೇಕು? ಸಿಪಿಐ(ಎಂ) ಪ್ರಧಾನಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ವಿಶ್ಲೇಷಿಸಿದ್ದಾರೆ.

ಸಂಕಷ್ಟವನ್ನು ತಂದೊಡ್ಡಿದ ನಾಲ್ಕು ತಿಂಗಳು

ಐದು ತಿಂಗಳ ಹಿಂದೆ ಭಾರತೀಯ ಜನತಾ ಪಕ್ಷದ ಗೋಡೆ ಬರಹ ಬ್ಯಾನರ್‌ಗಳು ಮತ್ತು ಘೋಷಣೆಗಳ ಮೂಲಕ ಬಾರೀ ಪ್ರಮಾಣದ ಪ್ರಚಾರವನ್ನೇ ದೇಶಾದ್ಯಂತ ಹರಿಯಬಿಟ್ಟಿತ್ತು. ಪ್ರಚಾರದ ಅಬ್ಬರದ ಅಂಶ ಒಂದೇ ಆಗಿತ್ತು. 'ಅಬ್ ಕೀ ಬಾರಿ ಅಟಲ್ ಬಿಹಾರಿ' (ಈ ಬಾರಿ ಅಟಲ್ ಬಿಹಾರಿ) ಎಂಬುದೇ ಆ ಘೋಷಣೆ. ಒಂದು ಪಕ್ಷಕ್ಕಿಂತ ಒಬ್ಬ ವ್ಯಕ್ತಿಯನ್ನು ಹೆಚ್ಚಾಗಿ ಅದು ಪ್ರತಿಬಿಂಬಿಸುತ್ತಿತ್ತು. ಅಟಲ್ ಬಿಹಾರಿ ವಾಜಪೇಯಿಯಂಥ ನಾಯಕರು ಇನ್ನಾವುದೇ ಪಕ್ಷದಲ್ಲಿ ಇಲ್ಲ ಎಂದು ಅದು ಬಡಾಯಿ ಕೊಚ್ಚಿಕೊಳ್ಳುತ್ತಿತ್ತು. ಜನತೆಯ ಕೆಲವು ವಿಭಾಗಗಳ ಮೇಲೆ ಇದು ಪ್ರಭಾವ ಬೀರಿತ್ತು. ಒಂದು ಸರಕಾರವನ್ನು ಹಾಗೂ ಹೀಗೂ ಮಾಡಿ ರಚಿಸಲು ಬಿಜೆಪಿ ಯಶಸ್ವಿಯಾಯಿತು.

ಆದರೆ ಬಿಜೆಪಿ ಆಡಳಿತದ ನಾಲ್ಕು ತಿಂಗಳ ನಂತರ ಬೇರೆ ಯಾವುದೇ ಘೋಷಣೆ ಹೊರಹೊಮ್ಮಿಲ್ಲ. ವಾಜಪೇಯಿ ಸರಕಾರ ಬಿಕ್ಕಟ್ಟಿನಿಂದ ಬಿಕ್ಕಟ್ಟಿಗೆ ಸಾಗುತ್ತಿರುವ ದಯನೀಯ ದೃಶ್ಯವಷ್ಟೆ ನಮ್ಮ ಕಣ್ಣ ಮುಂದಿದೆ. ಅದು ಕುರುಡು ದೇಶಾಭಿಮಾನವನ್ನು ಪ್ರಚೋದಿಸಿ ಹಿಂದುತ್ವದ ಮೇಲೆಯೇ ಗಮನ ಕೇಂದ್ರೀಕರಿಸುತ್ತಿರುವಾಗಲೇ ದೇಶದ ಆರ್ಥಿಕತೆ ಪ್ರಪಾತಕ್ಕೆ ಇಳಿಯುತ್ತಿದೆ. ಜನರು ಬೆನ್ನು ಮೂಳೆ ಮುರಿಯುವ ಬೆಲೆಯೇರಿಕೆಯಿಂದ ತತ್ತರಿಸುತ್ತಿದ್ದಾರೆ.

ಸದಾಸಂಕಟ

ಸಂಯುಕ್ತರಂಗ ಸರಕಾರ ಒಂದು ಮಿಸಳ ಬಾಜಿ ಕೂಟ ಎಂದು ಬಿಜೆಪಿ ಸತತವಾಗಿ ಟೀಕಿಸುತ್ತಿತ್ತು. ಸಮರ್ಥ ಪ್ರಧಾನಿ ನೇತೃತ್ವದಲ್ಲಿ ಸ್ಥಿರ ಸರಕಾರ ಕೊಡುವ ಆಶ್ವಾಸನೆಯನ್ನು ಕೊಡುತ್ತಿತ್ತು. ಆದರೆ ಇಂದು ಬಿಜೆಪಿ ಸದಾ ಸಂಕಟದಲ್ಲಿರುವ ಸಮ್ಮಿಶ್ರ ಕೂಟದ ನೇತೃತ್ವ ವಹಿಸಿದೆ. ಕೂಟದ ಒದಲ್ಲ ಒಂದು ಭಾಗೀದಾರ ಪಕ್ಷ ಒಂದಲ್ಲ ಒಂದು ಬಿಕ್ಕಟ್ಟನ್ನು ಸೃಷ್ಟಿಸದ ದಿನವೇ ಇಲ್ಲ. ಕೂಟದ ಒಗ್ಗಟ್ಟನ್ನು ಕಾಪಾಡಿಕೊಳ್ಳಲೆಂದೇ ದೂತರ ಮೇಲೆ ದೂತರನ್ನು ಕಳಿಸುವುದೇ ವಾಜಪೇಯಿಯವರ ಕೆಲಸವಾಗಿಬಿಟ್ಟಿದೆ. ದಕ್ಷಿಣದಿಂದ ಬರುವ ಸಂಕೇತಗಳಂತೂ ವಾಜಪೇಯಿಯ ನಿದ್ದೆಯನ್ನೇ ಕೆಡಿಸುತ್ತಿವೆ.

ಸಂಯುಕ್ತರಂಗದ ಮಿತಿಗಳು ಏನೇ ಇದ್ದರೂ ಅದು ಯಾವತ್ತೂ ಆಂತರಿಕ ಬಿಕ್ಕಟ್ಟನ್ನು ಎದುರಿಸಲೇ ಇಲ್ಲ. ರಂಗವನ್ನು ಒಡೆಯಲು ಕಾಂಗ್ರೆಸ್ ಪ್ರಯತ್ನಿಸಿದರೂ ಯಾವುದೇ ಭಿನ್ನಾಭಿಪ್ರಾಯಗಳಿಲ್ಲದ ಸಂಯುಕ್ತರಂಗ ಒಂದು ಪ್ರಬಲ ಘಟಕವಾಗಿ ಉಳಿದಿತ್ತು. ಆದರೆ ಬಿಜೆಪಿ ನೇತೃತ್ವದ ಕೂಟದ ಚಿತ್ರವೇ ಬೇರೆ. ಅದರ ಪಾಲುದಾರರಲ್ಲಿ ಸಮಾನ ಅಂಶಗಳೆಂಬುದೇ ಇಲ್ಲ. ಕೇವಲ ಅಧಿಕಾರಕ್ಕಾಗಿ ಅವು ಒಂದಾಗಿವೆ. ಅವುಗಳು ತತ್ವರಹಿತ ರಾಜಿಗಳನ್ನು ಮಾಡಿಕೊಂಡಿರುವುದು ಮಾತ್ರವೇ ಅಲ್ಲ, ತಾನೊಂದು 'ತತ್ವ ಬದ್ಧ' ಪಕ್ಷ ಎಂಬ ಹೆಗ್ಗಳಿಕೆಯನ್ನು ಬಿಜೆಪಿ ಗಾಳಿಗೆ ತೂರಿದೆ. ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗಿರುವ ವ್ಯಕ್ತಿಗಳನ್ನು ಮಂತ್ರಿಗಳನ್ನಾಗಿ ಮಾಡಲಾಗಿದೆ.

ಜೆ.ಎಂ.ಎಂ. ಲಂಚ ಪ್ರಕರಣಕ್ಕೆ ಸಂಬಂಧಿಸಿ ಆರೋಪ ಪಟ್ಟಿ ಸಲ್ಲಿಕೆಯಾದಾಗ ಬೂಟಾಸಿಂಗ್‌ರನ್ನು ಮಂತ್ರಿ ಮಂಡಳದಿಂದ ಕೈಬಿಡಲಾಯಿತು. ಈ ಸಂದರ್ಭದಲ್ಲಿ 'ನಾನು ನರಸಿಂಹರಾವ್‌ರಿಗಾಗಿ ಏನು ಮಾಡಿದ್ದೇನೋ ಅದನ್ನು ವಾಜಪೇಯಿ ಗಾಗಿಯೂ ಮಾಡಿದ್ದೇನೆ" ಎಂದು ಹೇಳಿದರು. ಇದಕ್ಕೆ ವಾಜಪೇಯಿಯಿಂದ ಉತ್ತರವೇ ಇಲ್ಲ !

ನಾಲ್ಕು ತಿಂಗಳು ಕಳೆದಿವೆ. ಸಂಸತ್ತಿನ ಎರಡು ಅಧಿವೇಶನಗಳು ಸೇರಿದ್ದು ಬಜೆಟ್ ಅಧಿವೇಶನ ಇನ್ನೂ ನಡೆಯುತ್ತಿದೆ. ಇಷ್ಟಾದರೂ ಮಹತ್ವದ ಕಾನೂನೇನೇನ್ನೂ ಸಂಸತ್ತು ಅಂಗೀಕರಿಸಿಲ್ಲ. ಬಜೆಟ್‌ಗೆ ಔಪಚಾರಿಕತೆ ಒದಗಿಸಿದ್ದೊಂದೇ ಸಾಧನೆ. ಅದು ಕೂಡ ಅಡ್ಡಿಗಳಿಂದ ಹೊರತಾಗಿರಲಿಲ್ಲ. ಬಜೆಟ್‌ನಲ್ಲಿ ಸೂಚಿಸಲಾಗಿದ್ದ ಕೆಲವು ಕ್ರಮಗಳನ್ನು ಮರುದಿನವೇ ಹಿಂತೆಗೆದುಕೊಳ್ಳುವ ಮೂಲಕ ಸರಕಾರ ಹಾಸ್ಯಾಸ್ಪದವಾಯಿತು.

ಮಹಿಳಾ ಮೀಸಲಾತಿ ವಿಧೇಯಕ ಸಹಿತ ಇನ್ನೂ ಹಲವು ವಿಚಾರಗಳಲ್ಲಿಯೂ ಸರಕಾರ ದೊಡ್ಡ ಬಡಾಯಿ ಕೊಚ್ಚಿಕೊಂಡಿತು. ಆದರೆ ಈ ಮಸೂದೆಗೆ ಭಾರೀ ಪ್ರಮಾಣದ ಬಹುಮತದ ಬಹಿರಂಗ ಘೋಷಣೆ ಹೊರಬಿದ್ದರೂ ಅದನ್ನು ನಿಸ್ತೇಜಗೊಳಿಸಲು ಸರಕಾರ ಯತ್ನಿಸಿತು.

ಸಾಂಸ್ಕೃತಿಕ ವೈವಿಧ್ಯದ ನಿರಾಕರಣೆ

ದೇಶವನ್ನು ಕಾಡುತ್ತಿರುವ ಮೂಲಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಬಿಜೆಪಿ ಸರಕಾರ ಸಣ್ಣ ರಾಜ್ಯಗಳ ರಚನೆ ನಿರ್ಧಾರಕ್ಕೆ ಬಂದಿದೆ ಬಿಜೆಪಿಗೆ ಇದೇನೂ ಹೊಸ ಘೋಷಣೆಯಲ್ಲ ಯಾಕೆಂದರೆ ರಾಜ್ಯಗಳ ಭಾಷಾವಾರು ಪುನರ್ ವಿಂಗಡನೆಯನ್ನು ಆರ್.ಎಸ್.ಎಸ್. ಮೊದಲಿನಿಂದಲೂ ವಿರೋಧಿಸುತ್ತ ಬಂದಿದೆ. ಆರೆಸ್ಸೆಸ್‌ನ ಪರಿ ಕಲ್ಪನೆ ಭಾರತದ ಏಕತೆಯ ಮೂಲ ಸಿದ್ಧಾಂತಗಳಿಗೆ ವಿರುದ್ಧವಾದುದಾಗಿದೆ. ಭಾರತ ಅನೇಕ ಪಂಥಗಳ ಜನರಿಂದ ಕೂಡಿದ ದೇಶ. ಶೇಕಡ 18 ಕ್ಕಿಂತ ಕಡಿಮೆ ಯಿದ್ದರೂ ಅಲ್ಪಸಂಖ್ಯಾತರು ದೇಶದ ಜನಸಂಖ್ಯೆಯ ಒಂದು ಮಹತ್ವದ ಭಾಗವಾಗಿದ್ದಾರೆ. ಆದ್ದರಿಂದಲೇ ಸಂವಿಧಾನ ಕರ್ತರು ಸಮಾಜದ ಜಾತ್ಯಾತೀತ ಮೂಲಾ ಧಾರಕ್ಕೆ ಒತ್ತು ಕೊಟ್ಟಿದ್ದರು. ಅದು ಮಾತ್ರವೇ ದೇಶದ ಏಕತೆಯನ್ನು ರಕ್ಷಿಸಬಲ್ಲದು.

ಎರಡನೆದಾಗಿ ಭಾರತ ನಾನಾ ರಾಷ್ಟ್ರೀಯತೆಗಳನ್ನೊಳಗೊಂಡ ದೇಶ ಅನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಈ ಪರಿಕಲ್ಪನೆ ಬಿಜೆಪಿಗೆ ಬಾಹ್ಯವಾದುದು. ದೀರ್ಘ ಐತಿಹಾಸಿಕ ಹಿನ್ನೆಲೆಯುಳ್ಳ ವೈವಿಧ್ಯಮಯ ಭಾಷಾ ಹಾಗೂ ಸಾಂಸ್ಕೃತಿಕ ಅನನ್ಯತೆಯುಳ್ಳ ಅನೇಕ ಗುಂಪುಗಳು ಭಾರತದಲ್ಲಿವೆ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು. ವಿವಿಧ ಪ್ರದೇಶಗಳ ಎಲ್ಲಾ ನಾನಾ ಸಂಸ್ಕೃತಿಗಳು ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಕೊಡುಗೆ ನೀಡಿವೆ. ಆದರೆ ಬಿಜೆಪಿಯ ಹಿಂದೂ ರಾಷ್ಟ್ರ ಘೋಷಣೆ ಈ ಅನನ್ಯತೆಗಳಿಗೆ ವಿರುದ್ಧವಾಗಿದೆ.

'ಒಂದು ದೇಶ, ಒಂದೇ ಜನ, ಒಂದೇ ಸಂಸ್ಕೃತಿ ಇದು ಆರೆಸ್ಸೆಸ್ ಘೋಷಣೆಯಾಗಿದೆ. ಸಣ್ಣ ರಾಜ್ಯಗಳನ್ನು ರಚಿಸುವ ಮೂಲಕ ಈ ಪರಿಕಲ್ಪನೆಯನ್ನು ಹೇರಲು ಬಿಜೆಪಿ ಭಾರೀ ಪ್ರಯತ್ನ ನಡೆಸಿದೆ.

ಹಿಂದೂ ರಾಷ್ಟ್ರದ ಗುರಿಯನ್ನು ಸಾಧಿಸಲು ಅವರಿಗೆ ಇದೊಂದೇ ದಾರಿಯಲ್ಲ. ಭಾರತದ ಸಂವಿಧಾನದಲ್ಲಿ ಮೂಲಭೂತ ಬದಲಾವಣೆಗಳನ್ನು ತರಬೇಕೆಂದು ಅವರು ಬಹಿರಂಗವಾಗಿಯೇ ಒತ್ತಾಯಿಸತೊಡಗಿದ್ದಾರೆ. ಸಂಸದೀಯ ವ್ಯವಸ್ಥೆ ಬದಲು ಅಧ್ಯಕ್ಷೀಯ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಿದ್ದಾರೆ. ಅವರು ಭಾರತೀಯ ಸಮಾಜದ ವರ್ಗ ಸ್ವರೂಪವನ್ನು ಮತ್ತು ಭಾರತೀಯ ಸಮಾಜದ ಸಂಕೀರ್ಣತೆಯನ್ನು ಗುರುತಿಸುವುದಿಲ್ಲ. ಸಂಸದೀಯ ಪ್ರಜಾಪ್ರಭುತ್ವ ಮತ್ತು ಪಕ್ಷವ್ಯವಸ್ಥೆಯಲ್ಲಿ ಇವೆರಡೂ ಪ್ರತಿಬಿಂಬಿತವಾಗುತ್ತದೆ.

ಅಂಧಾಭಿಮಾನ


ಹಿಂದುತ್ವ ಪ್ರತಿಪಾದನೆಯ ಅಂಗವಾಗಿ ಅವರು ಅಂಧ ದೇಶಾಭಿಮಾನವನ್ನು ನಮ್ಮ ಜನರಲ್ಲಿ ಪ್ರೇರೇಪಿಸುತ್ತಿದ್ದಾರೆ. ಅಣುಶಕ್ತಿ ಪರೀಕ್ಷೆಯ ಉದ್ದೇಶವೇ ಅದಾಗಿದೆ. ಈ ಸ್ಫೋಟಗಳಿಂದಾಗಿ ನೆರೆಹೊರೆಗಳೊಂದಿಗಿನ ನಮ್ಮ ಸಂಬಂಧಗಳಲ್ಲಿ ಹಿನ್ನಡೆ ಆಗಿದ್ದಲ್ಲದೆ ಇಡೀ ವಲಯದಲ್ಲಿ ಬಿಗುವಿನ ವಾತಾವರಣ ಉಂಟಾಗಿದೆ.

ನಮ್ಮಲ್ಲಿ ಪರಮಾಣು ಬಾಂಬ್ ಇರುವುದರಿಂದ ಕಾಶ್ಮೀರ ವಿವಾದವನ್ನು ನಾವೀಗ ಬಗೆಹರಿಸಬಹುದು ಎಂಬ ಗೃಹಮಂತ್ರಿ ಎಲ್.ಕೆ. ಅಡ್ವಾಣಿಯ ಅತಿರೇಕದ ದೇಶಾಭಿಮಾನದ ಹೇಳಿಕೆ ಕಾಶ್ಮೀರ ವಿವಾದವನ್ನು ಅಂತರ್‌ರಾಷ್ಟ್ರೀಯಗೊಳಿಸುವಲ್ಲಿ ನೆರವಾಗಿದೆ ಅಷ್ಟೆ.

ಇಷ್ಟಕ್ಕೆ ತೃಪ್ತರಾಗದೆ ವಿಶ್ವಹಿಂದೂ ಪರಿಷತ್ (VHP) ಮತ್ತು ಆರೆಸ್ಸೆಸ್‌ಗಳು ಅಯೋಧ್ಯೆಯಲ್ಲಿ ಮಂದಿರ ನಿರ್ಮಿಸಲು ಸಿದ್ಧತೆಗಳನ್ನು ಆರಂಭಿಸಿದ್ದಾರೆ. ನ್ಯಾಯಾಲಯ ಅನುಕೂಲಕರ ತೀರ್ಪನ್ನು ಕೊಡದಿದ್ದರೆ ಸಂಸತ್ತಿನಲ್ಲಿ ಒಂದು ಕಾನೂನನ್ನು ರಚಿಸುವುದಾಗಿಯೂ, ಏನೇ ಆದರೂ ಮಂದಿರವನ್ನು ನಿರ್ಮಿಸುವುದಾಗಿಯೂ ಬಿಜೆಪಿ ಉಪಾಧ್ಯಕ್ಷ ಕೆ.ಎಲ್.ಶರ್ಮ ಹೇಳಿದ್ದಾರೆ. ಅವರಿಗೆ ನ್ಯಾಯಾಲಯಗಳ ಬಗ್ಗೆ ಗೌರವವೇ ಇಲ್ಲ.

ಅವರ ರಾಜಕೀಯ ಮತ್ತು ಪ್ರತಿಪಾದನೆಗಳಿಂದಾಗಿ ದೇಶದ ಅಲ್ಪಸಂಖ್ಯಾತ ಸಮುದಾಯದಲ್ಲಿ ಪ್ರತ್ಯೇಕತೆಯ ಭಾವನೆ ಬಲಗೊಳ್ಳುತ್ತಿದೆ. ಆರೆಸ್ಸೆಸ್, ವಿ.ಎಚ್.ಪಿ, ಭಜರಂಗದಳದಂಥ ಹಿಂದುತ್ವ ಶಕ್ತಿಗಳು ರಾಮಮಂದಿರ ನಿರ್ಮಾಣ ವಿಚಾರವನ್ನು ಬಲವಾಗಿ ಪ್ರತಿಪಾದಿಸುತ್ತಿವೆ. ಆದ್ದರಿಂದ ಬಿಜೆಪಿ ಮತ್ತದರ ಮಿತ್ರಪಕ್ಷಗಳು ಅಂಗೀಕರಿಸಿದ ರಾಷ್ಟ್ರೀಯ ಕಾರ್ಯಕ್ರಮ ಪಟ್ಟಿ (National Agenda) ಬಿಜೆಪಿಗೆ ಅರ್ಥಹೀನವಾಗಿದೆ.

ಹಿಂದಿನ ತಂತ್ರವನ್ನೇ ಅವರು ಈಗಲೂ ಅನುಸರಿಸುತ್ತಿದ್ದಾರೆ. ರಾಮಜನ್ಮ ಭೂಮಿ ಪ್ರಚಾರ ಪರಾಕಾಷ್ಠೆಯಲ್ಲಿದ್ದಾಗ ವಿಹೆಚ್‌ಪಿ ಮತ್ತು ಆರೆಸ್ಸೆಸ್ ಎಲ್ಲಾ ತಳಮಟ್ಟದ ಕೆಲಸವನ್ನು ಮಾಡಿದವು. ಅನಂತರ ಅಡ್ವಾಣಿ ಬಿಜೆಪಿಯ ಚಿಹ್ನೆ ಕಮಲವುಳ್ಳ ರಥ ವೇರಿ ಚಳುವಳಿಗೆ ಧುಮುಕಿದರು. ಅದೇ ರೀತಿಯಲ್ಲಿ ವಿ.ಎಚ್.ಪಿ ಮತ್ತು ಆರೆಸ್ಸೆಸ್ ಮಂದಿರ ನಿರ್ಮಾಣ ಯೋಜನೆಯನ್ನು ಮುಂದುವರಿಸಲಿದ್ದು ಅನಂತರ ಬಿಜೆಪಿ ಅದನ್ನು ಸೇರಿಕೊಳ್ಳಲಿದೆ. ಭಾರತೀಯ ಜನತಾ ಪಕ್ಷ ಯಾವತ್ತೂ ಜಾತ್ಯಾತೀತತೆ ಬಗ್ಗೆ ಮಾತಾಡುವುದಿಲ್ಲ. ವಾಸ್ತವವಾಗಿ ರಾಜಕೀಯದಿಂದ ಧರ್ಮವನ್ನು ಪ್ರತ್ಯೇಕಿಸುವುದೇ ಜಾತ್ಯಾತೀತತೆ ಎಂದು ಸುಪ್ರಿಂಕೋರ್ಟ್ ತೀರ್ಪು ಕೊಟ್ಟ ನಂತರವೂ ಅದನ್ನು ಹುಸಿ ಜಾತ್ಯಾತೀತತೆ ಎಂದು ಹೇಳುವುದನ್ನು ಬಿಜೆಪಿ ಬಿಟ್ಟಿಲ್ಲ. ಹಿಂದುತ್ವವೇ ಇಡೀ ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ ಎಂದು ಹೇಳುವುದನ್ನು ಮುಂದುವರಿಸಿದೆ.



"ಎಡರಂಗ ಸರಕಾರಗಳನ್ನು ಹೊರತು ಪಡಿಸಿ ಉಳಿದೆಲ್ಲಾ ಸರಕಾರಗಳು ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ಜನರ ಮೇಲೆ ಹೇರುತ್ತಿವೆ. ವಿದ್ಯುತ್ ದರ, ಬಸ್ ಪ್ರಯಾಣ ದರಗಳನ್ನು ನಿಯಮಿತವಾಗಿ ಏರಿಸಲಾಗುತ್ತಿದೆ. ಕೇಂದ್ರ ಸರಕಾರದ ಬಗ್ಗೆ ಹೇಳುವುದಾದರೆ ಅದಕ್ಕೆ ಜನಸಾಮಾನ್ಯರ ಸಂಕಷ್ಟಗಳ ಬಗ್ಗೆ ಕಾಳಜಿಯೇ ಇಲ್ಲವಾಗಿದೆ. ಕಾಳಸಂತೆಕೋರರಿಗೆ ಸುಗ್ಗಿಯಾಗಿದೆ. ಜಯಲಲಿತಾ ಆಗಾಗ ಹಾಕುವ ಬೆದರಿಕೆಗಳನ್ನು ಎದುರಿಸಿ ಸರಕಾರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ವಾಜಪೇಯಿ ನಿರತರಾಗಿದ್ದಾರೆ. ದೇಶ ಹಾಗೂ ಜನತೆ ಎದುರಿಸುತ್ತಿರುವ ಕಷ್ಟಗಳ ಪರಿವೆಯೇ ಅವರಿಗಿಲ್ಲ"

ಈಗ ರಾಜ್ಯಾಧಿಕಾರವೇ ಕೈಗೆ ಬಂದಿರುವ ಬಿಜೆಪಿ ಮೂರು ಮುಖ್ಯ ಖಾತೆಗಳನ್ನು ನಿಯಂತ್ರಿಸುತ್ತಿದೆ. ಗೃಹ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ವಾರ್ತೆ ಮತ್ತು ಪ್ರಸಾರ ಖಾತೆ ಇವೇ ಆ ಮೂರು ವಿಭಾಗಗಳು. ಈ ಸಚಿವ ಖಾತೆಗಳ ಮೂಲಕ ತಮ್ಮ ಸಿದ್ಧಾಂತವನ್ನು ಪ್ರಸಾರ ಮಾಡುವುದು ಅವರ ಬಯಕೆಯಾಗಿದೆ. ಈಗಾಗಲೇ ತಾವು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿ ಶಾಲಾ ಕಾಲೇಜುಗಳ ಪಠ್ಯಗಳನ್ನು ಅವರು ಬದಲಾಯಿಸಿದ್ದಾರೆ. ಈಗ ಇತಿಹಾಸ ಸಂಶೋಧನೆಯ ಭಾರತೀಯ ಮಂಡಳಿ (I.C.H.R) ಆರೆಸ್ಸೆಸ್ ದೃಷ್ಟಿಕೋನದ ಜನರಿಂದ ತುಂಬಿ ಹೋಗಿದೆ.

ಬೆಲೆಗಳ ತೀವ್ರ ಏರಿಕೆ

ಬಿಜೆಪಿ ಆಡಳಿತದ ಈ ನಾಲ್ಕು ತಿಂಗಳಲ್ಲಿ ಗಂಭೀರ ಆರ್ಥಿಕ ಬಿಕ್ಕಟ್ಟು ಅಡಿಯಿಟ್ಟಿದೆ. ಉದಾರೀಕರಣ ಮತ್ತು ಜಾಗತೀಕರಣದ ಪರಿಣಾಮದ ಜತೆಗೆ ಭೂಮಾಲಿಕರು ಹಾಗೂ ವ್ಯಾಪಾರಿ ಸಮುದಾಯದ ಹಿತ ಕಾಪಾಡುವ ಬಿಜೆಪಿ ಸರಕಾರದ ನೀತಿಗಳಿಂದಾಗಿ ಆರ್ಥಿಕ ಬಿಕ್ಕಟ್ಟು ಬಿಗಡಾಯಿಸಿದೆ. ಹೆಚ್ಚುತ್ತಿರುವ ಹಣದುಬ್ಬರ ಕುಂಠಿತ ಆರ್ಥಿಕ ಬೆಳವಣಿಗೆ, ರೂಪಾಯಿ ಮೌಲ್ಯದ ಕುಸಿತ, ಹೆಚ್ಚುತ್ತಿರುವ ನಿರುದ್ಯೋಗ, ಕಾರ್ಖಾನೆಗಳ ಮುಚ್ಚುವಿಕೆ, ವಾಣಿಜ್ಯ ಕೊರತೆಯ ಹೆಚ್ಚಳ ಮತ್ತು ಜನತೆಯ ಬೆನ್ನೆಲುಬು ಮುರಿಯುತ್ತಿರುವ ಬೆಲೆ ಯೇರಿಕೆ ಇವೇ ಮೊದಲಾದವು ಬಿಕ್ಕಟ್ಟಿಗೆ ಸಾಕ್ಷಿಗಳಾಗಿವೆ.

ದೇಶದ ಆಹಾರ ಉತ್ಪಾದನೆ ಈಗಿನದ್ದಕ್ಕಿಂತ ಕಡಿಮೆಯಿದ್ದ ಅವಧಿಯಲ್ಲಿ ನಾವು ಆಹಾರ ವಸ್ತುಗಳ ಬೆಲೆಗಳಲ್ಲಿ ಇಷ್ಟೊಂದು ಪ್ರಮಾಣದ ಏರಿಕೆಯನ್ನು ಕಂಡಿರಲಿಲ್ಲ.

ತರಕಾರಿಗಳೂ ಜನಸಾಮಾನ್ಯರ ಕೈಗೆಟುಕದಂತಾಗಿವೆ. ಟೊಮೊಟೊ ಬೆಲೆ ಕೆಜಿಗೆ 40 ರೂ ಆಗಿದೆ. ಈರುಳ್ಳಿ, ಬಟಾಣಿಗಳೂ ಕೆಜಿಗೆ 14 ರೂ.ಗೆ ಕಡಿಮೆಯಿಲ್ಲದಂತೆ ಮಾರಾಟವಾಗುತ್ತಿವೆ. ದೇಶದ ಬಹುತೇಕ ಜನರ ಪೌಷ್ಟಿಕತೆಗೆ ಮುಖ್ಯ ಮೂಲವಾದ ಬೇಳೆಗಳು ಕೂಡ ಬೆಲೆಯೇರಿಕೆಯ ದಾಳಿಗೆ ತುತ್ತಾಗಿವೆ. ಬೇಳೆಗಳ ಬೆಲೆಗಳು ಶೇಕಡ 30 ರಿಂದ 60 ರಷ್ಟು ಏರಿವೆ.

ಎಡರಂಗ ಸರಕಾರಗಳನ್ನು ಹೊರತು ಪಡಿಸಿ ಉಳಿದೆಲ್ಲಾ ಸರಕಾರಗಳು ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ಜನರ ಮೇಲೆ ಹೇರುತ್ತಿವೆ. ವಿದ್ಯುತ್ ದರ, ಬಸ್ ಪ್ರಯಾಣ ದರಗಳನ್ನು ನಿಯಮಿತವಾಗಿ ಏರಿಸಲಾಗುತ್ತಿದೆ.

ಕೇಂದ್ರ ಸರಕಾರದ ಬಗ್ಗೆ ಹೇಳುವುದಾದರೆ ಅದಕ್ಕೆ ಜನಸಾಮಾನ್ಯರ ಸಂಕಷ್ಟಗಳ ಬಗ್ಗೆ ಕಾಳಜಿಯೇ ಇಲ್ಲವಾಗಿದೆ. ಕಾಳಸಂತೆಕೋರರಿಗೆ ಸುಗ್ಗಿಯಾಗಿದೆ. ಅವರ ವಿರುದ್ಧ ಸರಕಾರ ಕ್ರಮವನ್ನೇ ಕೈಗೊಳ್ಳುತ್ತಿಲ್ಲ. ಪಡಿತರ ಪದ್ಧತಿಯನ್ನು ಬಲಪಡಿಸುವ ಬದಲು ಸಕ್ಕರೆ ಮೇಲಿನ ನಿಯಂತ್ರಣ ತೆಗೆದು ಹಾಕಲು ಅದು ಯೋಚಿಸುತ್ತಿದೆ. ಇದರಿಂದ ಲಾಭವಾಗುವುದು ವ್ಯಾಪಾರಿಗಳಿಗೆ. ಜಯಲಲಿತಾ ಆಗಾಗ ಹಾಕುವ ಬೆದರಿಕೆಗಳನ್ನು ಎದುರಿಸಿ ಸರಕಾರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ವಾಜಪೇಯಿ ನಿರತರಾಗಿದ್ದಾರೆ. ದೇಶ ಹಾಗೂ ಜನತೆ ಎದುರಿಸುತ್ತಿರುವ ಕಷ್ಟಗಳ ಪರಿವೆಯೇ ಅವರಿಗಿಲ್ಲ.

ದುರಾಡಳಿತವನ್ನು ಪ್ರತಿರೋಧಿಸಿ

ಆರ್ಥಿಕ ಬಿಕ್ಕಟ್ಟು ಹಾಗೂ ಭಾರೀ ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ ಅಲೆ ಏಳತೊಡಗಿದೆ. ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ದೇಶಾದ್ಯಂತ ಪ್ರಚಾರಾಂದೋಲನ ಕಾರ್ಯಕ್ರಮವನ್ನು ರೂಪಿಸಿದೆ. ಇದಲ್ಲದೆ ರಾಷ್ಟ್ರವ್ಯಾಪಿಯಾಗಿ ಬೆಲೆಯೇರಿಕೆ ವಿರುದ್ಧ ಸ್ವತಂತ್ರವಾಗಿ ಚಳುವಳಿ ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ. ಜನಜೀವನದ ಮೇಲೆ ನಡೆಯುತ್ತಿರುವ ದಾಳಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಆಂದೋಲನದ ಉದ್ದೇಶ.

ಬಿಜೆಪಿ ಸರಕಾರದ ವಿನಾಶಕಾರಿ ಆರ್ಥಿಕ ನೀತಿಗಳು ಮತ್ತು ಅದರ ಛಿದ್ರಕಾರಿ ಕೋಮು ವಾದಿ ಅಜೆಂಡಾವನ್ನು ಎದುರಿಸುವ ಸಾಮರ್ಥ್ಯ ಇರುವುದು ಸಾಮೂಹಿಕ ಹೋರಾಟ ಹಾಗೂ ಚಳುವಳಿಗೆ ಮಾತ್ರ. ಆ ಪ್ರತಿರೋಧವನ್ನು ಬಲಪಡಿಸಬೇಕು ಈ ಕಾರ್ಯದಲ್ಲಿ ಇಡೀ ಪಕ್ಷ ತನ್ನನ್ನು ತಾನು ತೊಡಗಿಸಿಕೊಳ್ಳಬೇಕು. ○



"ಸಂಯುಕ್ತರಂಗದ ಮಿತಿಗಳು ಏನೇ ಇದ್ದರೂ ಅದು ಯಾವತ್ತೂ ಆಂತರಿಕ ಬಿಕ್ಕಟ್ಟನ್ನು ಎದುರಿಸಲೇ ಇಲ್ಲ. ರಂಗವನ್ನು ಒಡೆಯಲು ಕಾಂಗ್ರೆಸ್ ಪ್ರಯತ್ನಿಸಿದರೂ ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೆ ಸಂಯುಕ್ತರಂಗ ಒಂದು ಪ್ರಬಲ ಘಟಕವಾಗಿ ಉಳಿದಿತ್ತು. ಆದರೆ ಬಿಜೆಪಿ ನೇತೃತ್ವದ ಕೂಟದ ಚಿತ್ರವೇ ಬೇರೆ. ಅದರ ಪಾಲುದಾರರಲ್ಲಿ ಸಮಾನ ಅಂಶಗಳೆಂಬುದೇ ಇಲ್ಲ. ಕೇವಲ ಅಧಿಕಾರಕ್ಕಾಗಿ ಅವು ಒಂದಾಗಿವೆ"

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಈ ಪುಟದಲ್ಲಿ ಪ್ರಕಟವಾದ ಲೇಖನದ ಆರಂಭಿಕ ಪ್ಯಾರಾದಲ್ಲಿ 'ಆಗಸ್ಟ್ 6, 1995' ಹಾಗೂ 'ಆಗಸ್ಟ್ 9, 1995' ಎಂದು ತಪ್ಪಾಗಿ ಮುದ್ರಣಗೊಂಡಿದೆ. ಇದು ನೀವು ಈಗಾಗಲೇ ನಿರೀಕ್ಷಿಸರಬಹುದಾದಂತೆ 'ಆಗಸ್ಟ್ 6, 1945 ಮತ್ತು ಆಗಸ್ಟ್ 9, 1945' ಎಂದಿರಬೇಕಾಗಿತ್ತು. ಈ ತಪ್ಪಿಗಾಗಿ ವಿಷಾದಿಸುತ್ತೇವೆ.

ಇದೀಗ ಸಂಘ ಪರಿವಾರದ ನಿಜ ಸ್ವರೂಪ

'ಗುಜರಾತಿನಲ್ಲಿ ಉನ್ಮಾದ'

ಇದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಜುಲೈ 30,1998 ರ ಪ್ರಮುಖ ಸಂಪಾದಕೀಯದ ಶಿರೋನಾಮೆ. ಬಿಜೆಪಿ ತನ್ನ ಹೆಸರು ಉಳಿಸಿಕೊಳ್ಳಲು ದಾಂಧಲೆಕೋರರನ್ನು ಹತೋಟಿಯಲ್ಲಿಡಬೇಕು' ಎಂದು ಶಿರೋನಾಮೆಯಲ್ಲೇ ಈ ಸಂಪಾದಕೀಯ ಆಗ್ರಹಿಸುತ್ತದೆ. ತನ್ನ ಬಗ್ಗೆ ಒಲವು ಇದ್ದವರೂ ಹೌಹಾರುವಂತೆ ಸಂಘ ಪರಿವಾರ ವರ್ತಿಸುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದಲ್ಲವೇ? ಈ ಸಂಪಾದಕೀಯವನ್ನು ಹಾಗೂ ಇನ್ನೊಂದು ಬಿಜೆಪಿ ಆಳ್ವಿಕೆಯ ರಾಜ್ಯದಲ್ಲಿನ ಇನ್ನೊಂದು ಘಟನೆಯ ವರದಿ ಇಲ್ಲಿದೆ ನಮ್ಮ ಓದುಗರಿಗಾಗಿ. ಬಿಜೆಪಿಗೆ ಅವಕಾಶ ಕೊಡುವುದೆಂದರೆ ಬೇರೆ ಯಾವುದೇ ಪಕ್ಷಕ್ಕೆ ಅವಕಾಶ ಕೊಟ್ಟಂತೆ ಅಲ್ಲ ಎಂದು ಈಗ ಹಲವರಿಗೆ ಮನವರಿಕೆಯಾಗುತ್ತಿದೆ.



ವಿಶ್ವ ಹಿಂದು ಪರಿಷತ್ ಕಾನೂನನ್ನು ತನ್ನ ಕೈಗಳಲ್ಲಿ ತಗೊಳ್ಳಬಹುದು ಎಂದು ಭಾವಿಸಿದಂತಿದೆ. ಗುಜರಾತಿನಲ್ಲಿ ಈ ವಾರ ವರದಿಯಾದ ಎರಡು ಘಟನೆಗಳಲ್ಲಿ ಯಾರನ್ನು ಎಲ್ಲಿ ಹೂಳಬೇಕು, ಯಾರು ಯಾರನ್ನು ಮದುವೆಯಾಗಬೇಕು ಎಂಬುದನ್ನು ನಿರ್ಧರಿಸುವುದನ್ನು ವಿಹೆಚ್‌ಪಿ ಕಾರ್ಯಕರ್ತರು ತಾವೇ ವಹಿಸಿಕೊಂಡಿದ್ದಾರೆ. ಯಾವುದು ಸೂಕ್ತ ಎಂಬ ಬಗ್ಗೆ ಪ್ರತಿಪಾದಿಸುವುದಕ್ಕೇ ನಿಲ್ಲದೆ ಅದನ್ನು ಕಾರ್ಯಾಚರಣೆಗೂ ಅವರು ಇಳಿಸಿದರು. ಖೇಡಾ ಜಿಲ್ಲೆಯ ಕಪದ್ವಂಜ್ ಪಟ್ಟಣದಲ್ಲಿ ಒಬ್ಬ ವಯಸ್ಸಾದ ಕ್ರಿಶ್ಚಿಯನ್‌ನ ಶವಪೆಟ್ಟಿಗೆಯನ್ನು ಅಗೆದು ತೆಗೆದರು ಮತ್ತು ಮಧ್ಯ ಗುಜರಾತಿನ ರಾಧಿಕಾಪುರದ ಗ್ರಾಮದಲ್ಲಿ ಎರಡು ಹಿಂದೂ-ಮುಸ್ಲಿಂ ಮದುವೆಗಳ ನಂತರ ಮುಸ್ಲಿಮರನ್ನು ಹಳ್ಳಿಯಿಂದ ಹೊರಗಟ್ಟಿದರು. ಈ ಎರಡೂ ಸ್ಥಳಗಳಲ್ಲಿ ಈ ಇಡೀ ಆಘಾತಕಾರಿ ವ್ಯವಹಾರಗಳಲ್ಲಿ ಆಡಳಿತ ಸೋಮಾರಿಯಾಗಿ ನಿಂತಿತ್ತು. ಅಥವಾ ಈ ಹೊಲಸು ಕೆಲಸದಲ್ಲಿ ನಿಜವಾಗಿ ವಿಹೆಚ್‌ಪಿಗೆ ನೆರವು ನೀಡಿತು. ಈ ಬರ್ಬರ ಘಟನೆಗಳು ಬಿಜೆಪಿ ಆಳ್ವಿಕೆಯ ಗುಜರಾತಿನಲ್ಲಿ ಮತ್ತು ಇತರೆಡೆ ಕೂಡಾ ಸಾಮಾನ್ಯವಾಗುತ್ತಿರುವ ಒಂದು ವರ್ತನೆಯನ್ನು ಹೊರಗೆಡಹಿವೆ. ಆದ್ದರಿಂದ ಗುಜರಾತ ಮತ್ತು ಮಹಾರಾಷ್ಟ್ರದಲ್ಲಿ ಅಲ್ಪಸಂಖ್ಯಾತರ ಮೇಲೆ ಅತ್ಯಾಚಾರಗಳ ಪ್ರಕರಣಗಳು ಹೆಚ್ಚುತ್ತಿವೆ ಎಂಬ ಮಾತು ಸಂಸತ್ತಿನಲ್ಲಿ ಕೇಂದ್ರ ಸಾಮಾಜಿಕ ಕಲ್ಯಾಣ ರಾಜ್ಯ ಮಂತ್ರಿಗಳಿಂದ ಕೇಳಿಬಂದರೆ ಆಶ್ಚರ್ಯವಿಲ್ಲ.

ಇದಕ್ಕೆ ಕಾರಣ ಹುಡುಕುವುದು ಕಷ್ಟವೇನಲ್ಲ. ತಮಗೆ ದೇಶದ ಹಲವು ಭಾಗಗಳಲ್ಲಿ ಮುಕ್ತ ಓಟಕ್ಕೆ ಅವಕಾಶವಿದೆ ಎಂದು ಹಿಂದೂ ಪ್ರಾಬಲ್ಯವಾದಿಗಳು ಭಾವಿಸಿರುವುದು ಸ್ಪಷ್ಟ. ಕಿಡಿಗೇಡಿತನವನ್ನು ತಡೆಯಲು ಯಾರೂ ಇಲ್ಲದ ಹಳ್ಳಿಗಳು, ಸಣ್ಣ ಪಟ್ಟಣಗಳು ಮತ್ತು ಬುಡಕಟ್ಟು ಪ್ರದೇಶಗಳಲ್ಲಂತೂ ಪರಿಸ್ಥಿತಿ ಇನ್ನಷ್ಟು ಆತಂಕಕಾರಿ. ಧಾರ್ಮಿಕ ದ್ವೇಷಗಳನ್ನು ಉದ್ರೇಕಿಸಲಾಗುತ್ತಿದೆ, ಅಲ್ಪಸಂಖ್ಯಾತರ ಮೇಲೆ ಭಯೋತ್ಪಾದನೆ ನಡೆಸಲಾಗುತ್ತಿದೆ. ಈ ಸಮಾಜಘಾತುಕರು 'ಎಷ್ಟು ಭಂಡರಾಗಿದ್ದಾರೆಂದರೆ ಎಂತಹ ನಂಬಲನರ್ಹ ಅಥವಾ ಅಸಂಬದ್ಧ ನೆವವೂ ಅವರಿಗೆ ಸಾಕು. ಗುಜರಾತಿನಲ್ಲಿ ಪಾಕಿಸ್ತಾನದ ಐ.ಎಸ್.ಐ. ಯ ದುಷ್ಟ ತಂತ್ರಗಳನ್ನು ತೋರಿಸಿ ಮುಸಲ್ಮಾನರಿಗೆ ಕಿರುಕುಳ ಕೊಡಲಾಗುತ್ತಿದೆ. ಮಹಾರಾಷ್ಟ್ರದಲ್ಲಿ ಕಾನೂನುಬಾಹಿರ ವಲಸೆಗಾರರ ವಿರುದ್ಧ ತಾರತಮ್ಯ ಜ್ಞಾನವಿಲ್ಲದ ಪ್ರಹಾರ. ಇಡೀ ರಾಜಕೀಯ ವಾತಾವರಣವೇ ಸಂಕುಚಿತ ಗುರಿಸಾಧನೆ ಹಾಗೂ ಕಾರ್ಯಕ್ರಮಗಳಿಗೆ ಆಗರವಾಗಿರುವಂತಿದೆ. ಕಾನೂನು ವ್ಯವಸ್ಥೆಯನ್ನು ಬೆಳೆಸುವಲ್ಲಿ ಪೊಲೀಸ್, ಸ್ಥಳೀಯ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಕ್ರಿಮಿನಲಾಯಿಸುತ್ತಿರುವ ಸಂಗತಿ ಈಗ ಅಪರೂಪವೇನಲ್ಲ. ಕಪದ್ವಂಜ್‌ನಲ್ಲಿ ಉದಾಹರಣೆಗೆ, ಬಿಜೆಪಿ ಕಾರ್ಪೊರೇಟರುಗಳು ಮತ್ತು ಸಹಕಾರಿ ಬ್ಯಾಂಕ್ ಅಧಿಕಾರಿಗಳು ಆರೋಪಿಗಳೆಂದು ಹೆಸರಿಸಲ್ಪಟ್ಟಿದ್ದಾರೆ. ರಾಧಿಕಾಪುರದಲ್ಲಿ ಪೋಲೀಸರು ಒಂದು ಸುಳ್ಳು 'ಐಎಸ್‌ಐ ಪಿತೂರಿ' ಯಲ್ಲಿ ಶಂಕಿತರನ್ನು ದಿನಗಟ್ಟಳೆ ಚಿತ್ರಹಿಂಸೆಗೊಳಪಡಿಸಿದ್ದಾರೆಂಬ ಆಪಾದನೆಯಿದೆ.

ತಾನು ಆಳ್ವಿಕೆ ನಡೆಸುವ ರಾಜ್ಯಗಳಲ್ಲಿ ಕೋಮುಸೌಹಾರ್ದ ಕಾಪಾಡಿಕೊಂಡು ಬಂದ ಪಕ್ಷ ತಮ್ಮದು ಎಂಬ ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಬಿಜೆಪಿ ಈ ಬಗ್ಗೆ ಆತಂಕಿತವಾಗಬೇಕಿದೆ. ಕೆಲವು ಸ್ಥಳೀಯ ಕಾರ್ಯಕರ್ತರ ಹಾಗೂ ಮಿತ್ರಪಕ್ಷಗಳ ಇಂತಹ ಅಲ್ಪಸಂಖ್ಯಾತ-ವಿರೋಧಿ ಚಟುವಟಿಕೆಗಳು ಅವರ ಈ ಹೆಮ್ಮೆಯ ಮುಂದೆ ಪ್ರಶ್ನೆ ಚಿಹ್ನೆ ಇಟ್ಟಿವೆ. ಬಿಜೆಪಿ ಮುಖಂಡರು ಹಿಂದೂವೇತರರ ಮೇಲೆ ಹೆಚ್ಚುತ್ತಿರುವ ಹಲ್ಲೆಗಳ ಬಗ್ಗೆ ಗಂಭೀರ ಯೋಚನೆ ಹರಿಸಿ ಹದಗೆಡುವ ಮೊದಲು ಅದನ್ನು ನಿಲ್ಲಿಸುವ, ವಿಧಾನಗಳನ್ನೂ ರೂಪಿಸುವುದೊಳ್ಳೆಯದು.

ಗುಜರಾತಿನಲ್ಲಿ ನಡೆಯುತ್ತಿರುವುದು ದಾರಿತಪ್ಪಿದ ಕೆಲವರ ತಪ್ಪಿನಿಂದಾಗಿ ಎಂದು ನಟಿಸುವುದು ತಪ್ಪಾದೀತು. ಇಲ್ಲಿ ಕಾನೂನು-ವ್ಯವಸ್ಥೆಯ ಪ್ರಶ್ನೆಯಷ್ಟೇ ಅಲ್ಲ, ರಾಜಕೀಯ ಮತ್ತು ನಾಗರೀಕ ಹಕ್ಕುಗಳ ಪ್ರಶ್ನೆಯೂ ಇದೆ. ಪ್ರತಿಬಾರಿಯೂ ವಿ.ಹೆಚ್.ಪಿ. ಯಂತಹ ಅದರ ಸಂಘಟನೆಗಳು ವಿಷಯವನ್ನು ತಮ್ಮ ಕೈಗೆ ತೆಗೆದುಕೊಂಡು ಅದನ್ನು ಹಿಂದುತ್ವದ ಹೆಸರಿನಲ್ಲಿ ಸಮರ್ಥಿಸಿಕೊಳ್ಳುತ್ತಿವೆ. ಇದರಿಂದ ಈ ತತ್ವವನ್ನು ಒಪ್ಪುವವರೆಲ್ಲರ ವಿಶ್ವಾಸಾರ್ಹತೆಗೆ ಆಘಾತ ಬರುತ್ತದೆ. ಸಂಘ ಪರಿವಾರದ ಸದಸ್ಯರಿಗೆ ಕಾನೂನು ಅನ್ವಯವಾಗುವುದಿಲ್ಲವೆಂದೋ, ರಾಷ್ಟ್ರೀಯ ಭಾವನೆಯ ಗುತ್ತೇದಾರರೆಂದೋ ಯಾರೂ ಹೇಳುವಂತಿಲ್ಲ. ಒಂದು ನಾಗರಿಕ ಸಮಾಜದಲ್ಲಿ ಪ್ರತಿಯೊಬ್ಬರಿಗೂ ಸ್ಥಾನವಿದೆ. ಭಿನ್ನಾಭಿಪ್ರಾಯಗಳನ್ನು ಸ್ನೇಹಯುತವಾಗಿ ಪರಿಹರಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೆ ಅವನ್ನು ಕಾನೂನಿನ ಮೂಲಕ ಇತ್ಯರ್ಥಗೊಳಿಸಬೇಕು. ತರ್ಕಬದ್ಧತೆ ಮತ್ತು ಸಹಿಷ್ಣುತೆ ಭಾರತೀಯ ಸಮಾಜದ ದಾರಿದೀಪಗಳು. ಇದು ಸರಿಯಲ್ಲವೆಂದು ಭಾವಿಸುವವರನ್ನೆಲ್ಲಾ ಸರಿಪಡಿಸಬೇಕಾಗಿದೆ.

ಅಂದು ಎನ್.ಎಸ್.ಯು.ಐ. ಇಂದು ಎ.ಬಿ.ವಿ.ಪಿ.

ಒಂದು ದಶಕದ ಹಿಂದೆ ಕಾಂಗ್ರೆಸ್(ಐ)ನ ವಿದ್ಯಾರ್ಥಿ ವಿಭಾಗ ಎನ್.ಎಸ್.ಯು.ಐ.(ಐ)ನ ನಾಗಪುರ ಸಮ್ಮೇಳನದ ಸಂದರ್ಭದಲ್ಲಿ ಈ ಸಂಘಟನೆಗೆ ಸೇರಿದ ವಿದ್ಯಾರ್ಥಿಗಳ ಅಸಭ್ಯ ವರ್ತನೆ ದೇಶದಲ್ಲೆಲ್ಲಾ ಜನರ ಖಂಡನೆಗೆ ಗುರಿಯಾದದ್ದು ನೆನಪಿದೆಯೆ? ಈಗ ಅಂತಹ ಖಂಡನೆಗೆ ಭಾಗಿಯಾಗಿರುವಂತದ್ದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಅಥವಾ ಎಬಿವಿಪಿ - ಆಳುವ ಪಕ್ಷ ಬಿಜೆಪಿಯ ವಿದ್ಯಾರ್ಥಿ ವಿಭಾಗ. ಶಿಮ್ಲಾದಲ್ಲಿ ಈ ಸಂಘಟನೆಯ ಸುವರ್ಣ ಮಹೋತ್ಸವ ಆಚರಣೆಗೆ ಬಂದ ಕಾರ್ಯ ಕರ್ತರ ಅಸಭ್ಯ ವರ್ತನೆಗೆ ಶಿಮ್ಲಾ ಹಾಗೂ ಹಿಮಾಚಲ ಪ್ರದೇಶದ ಇತರ ಭಾಗಗಳಲ್ಲಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆಲವು ಎಬಿವಿಪಿ ಯುವಜನ ಶಿಮ್ಲಾದ ಮಿಡ್ಲ್‌ಬಝಾರ್ ಪ್ರದೇಶದಲ್ಲಿ ಒಂದು ಮನೆಯ ಮುಂದೆ ಕೂತು ಒಂದು ಹುಡುಗಿಯತ್ತ ದಿಟ್ಟಿಸಿ ನೋಡುತ್ತಾ ಹೊಲಸು ಮಾತುಗಳನ್ನಾಡಲಾರಂಭಿಸಿದರಂತೆ. ಅದನ್ನು ಕಂಡ ಮನೆಯ ಆಳು ಬಾಗಿಲು ಮುಚ್ಚಲು ಹೋದಾಗ 'ನಾವು ಯುವತಿಯನ್ನು ನೋಡಬೇಕು, ಬಾಗಿಲು ಮುಚ್ಚಬೇಡ' ಎಂದು ತಾಕೀತು ಮಾಡಿದರು. ಕುಟುಂಬದ ಸದಸ್ಯರಿಗೆ ಇದು ತಿಳಿದು ಈ ಯುವಕರೇಕೆ ಹೀಗೆ ವರ್ತಿಸುತ್ತಿದ್ದಾರೆ ಎಂದು ಕೇಳಿದಾಗ ಅವರಿಗೆ ಮುಷ್ಟಿ ಪ್ರಹಾರ, ಬೈಗುಳ.

ಇದನ್ನು ಕಂಡು ಜನ ಸೇರಿದಾಗ ಹುಡುಗರು ಇಂದಿರಾಗಾಂಧಿ ಸ್ಪೋರ್ಟ್ ಕಾಂಪ್ಲೆಕ್ಸ್‌ನಲ್ಲಿರುವ ಸಮಾರಂಭದ ಆವರಣದತ್ತ ಓಡಿದರು. ಜನ ಅವರ ಬೆನ್ನಟ್ಟಿದರು. ಜನ ಕಾಂಪ್ಲೆಕ್ಸ್ ಬಳಿ ತಲುಪಿದಾಗ ಸುಮಾರು 150-200 ಎಬಿವಿಪಿ ಕಾರ್ಯಕರ್ತರು ದೊಣ್ಣೆ, ಕಬ್ಬಿಣ ಸಲಾಕೆಗಳನ್ನು ಹಿಡಿದು ಹೊರಬಂದರು. ಪ್ರತ್ಯುತ್ತರವಾಗಿ ಜನ ಕೆಲವು ಎಬಿವಿಪಿ ಕಾರ್ಯಕರ್ತರನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ಆದರೆ ಈ ಇಡೀ

ಪುಟ 6 ನೋಡಿ

ದೂರ ಸಂಪರ್ಕ ಕಾರ್ಪೋರೇಶನ್ ಯಾವ ಘನೋದ್ದೇಶಕ್ಕಾಗಿ?

ದೂರ ಸಂಪರ್ಕ ಇಲಾಖೆಯನ್ನು ಒಂದು ಪ್ರತ್ಯೇಕ ಕಂಪನಿಯಾಗಿ ಮಾಡಲು ನಿರ್ಧರಿಸಿರುವುದನ್ನು ಟೆಲಿಕಾಂ ನೌಕರರು ವಿರೋಧಿಸುರುವ ಸುದ್ದಿ 'ಐಕ್ಯರಂಗ'ದ ಓದುಗರಿಗೆ ತಿಳಿದಿದೆ. ಏಕೆ ಈ ವಿರೋಧ, ಇದೇಕೆ ಒಂದು ಜನ-ವಿರೋಧಿ ಕ್ರಮ ಎಂಬುದನ್ನು ವಿವರಿಸಿರುವ ಅಖಿಲ ಭಾರತ ಟೆಲಿಕಾಂ ನೌಕರರ ಸಂಘ(ದರ್ಜೆ-೩) ದ ಪ್ರಧಾನ ಕಾರ್ಯದರ್ಶಿ ವಿ.ಎ.ಎನ್. ನಂಬೂದರಿಯವರ ಈ ಲೇಖನವನ್ನು ಕರ್ನಾಟಕ ರಾಜ್ಯ ಟೆಲಿಕಾಂ ನೌಕರರ ಸಂಘಟನಾ ಕಾರ್ಯದರ್ಶಿ ಪಿ.ಮುಕುಂದ ನಮ್ಮ ಓದುಗರಿಗಾಗಿ ಅನುವಾದಿಸಿ ಕಳಿಸಿಕೊಟ್ಟಿದ್ದಾರೆ.

ಭಾರತ ಸರಕಾರದ ದೂರ ಸಂಪರ್ಕ ಇಲಾಖೆಯನ್ನು 'ಇಂಡಿಯನ್ ಟೆಲಿಕಾಂ ಕಾರ್ಪೋರೇಶನ್' ಎಂಬ ಹೆಸರಿನಲ್ಲಿ ಪರಿವರ್ತಿಸಿ ನಂತರ ಅದರ ಶೇರುಗಳನ್ನು ಮಾರಾಟ ಮಾಡುವ ಕಾರ್ಯಕ್ರಮ ಕೇಂದ್ರದ ಆಳುವ ಬಿ.ಜೆ.ಪಿ. ಸರಕಾರದ ಚುನಾವಣಾ ಪ್ರಣಾಳಿಕೆಯಲ್ಲಿದೆ. ಟೆಲಿಕಾಂ ಕಮಿಷನ್ ಇಲಾಖೆಯನ್ನು ಕಾರ್ಪೋರೇಶನ್ ಅಂದರೆ ಕಂಪನಿ ಮಾಡುವ ಶಿಫಾರಸು ಸರಕಾರಕ್ಕೆ ನೀಡಿದೆ. ಹಣಕಾಸು ಮಂತ್ರಾಲಯ ಕಳೆದ ವಾರ ಅನುಮತಿ ನೀಡಿದೆ. ಬಹಳಷ್ಟು ಪ್ರಮುಖವಾದ ಈ ಇಲಾಖೆಯನ್ನು ಯಾವುದೇ ವಿವೇಚನೆ ಮಾಡದೆ ತರಾತುರಿಯಿಂದ ಕಾರ್ಪೋರೇಶನ್ ಆಗಿ ಪರಿವರ್ತಿಸಲು ಸರಕಾರ ಹೊರಟಿದೆ. ಕಾರ್ಪೋರೇಶನ್ ರೂಪೀಕರಣದ ಬಗ್ಗೆ ಸರಕಾರಿ ವಕ್ತಾರರು ಹೇಳುವ ಕೆಲವು ವಾದಗಳು ಹೀಗಿವೆ

1. ಟೆಲಿಕಾಂ ಅಭಿವೃದ್ಧಿಗೆ ಬೇಕಾಗುವ ಬಂಡವಾಳ ನಮ್ಮಲ್ಲಿಲ್ಲ. ಸಾಲ ತೆಗೆದುಕೊಳ್ಳಲು ಸರಕಾರಿ ಇಲಾಖೆಯಿಂದ ಕಾನೂನು ಅಡಚಣೆಗಳಿವೆ.
2. ಖಾಸಗಿ ಕಂಪನಿಗಳೊಂದಿಗೆ ಸ್ಪರ್ಧಿಸಲು ಸರ್ಕಾರಿ ಇಲಾಖೆಗೆ ಬಹಳಷ್ಟು ಸಮಸ್ಯೆಗಳಿವೆ. ಕಂಪನಿಗಳಿಗೆ ಅಥವಾ ಕಾರ್ಪೋರೇಶನ್‌ಗಳಿಗೆ ಅಂತಹ ಯಾವುದೇ ಸಮಸ್ಯೆಗಳಿಲ್ಲ.
3. ಆಧುನಿಕ ತಂತ್ರಜ್ಞಾನ ಅಳವಡಿಸಲಿಕ್ಕೆ ಮತ್ತು ಜಾಗತೀಕರಣ ಮಾಡಲು ಕಾರ್ಪೋರೇಶನ್ ಒಳ್ಳೆಯದು.

ಟೆಲಿಕಾಂ ಇಲಾಖೆಯನ್ನು ಪುನ: ಸಂಘಟಿಸಲು ಸರಿನ್ ಕಮಿಟಿ, ಅತ್ರೇಯ ಕಮಿಟಿ ಡಿ.ಕೆ. ಗುಪ್ತ ಕಮಿಟಿ ಇವೇ ರೀತಿ ಹಲವಾರು ನಿರ್ದೇಶನಗಳನ್ನು ನೀಡಿವೆ. 1985 ರಲ್ಲಿ ಅಂಚೆ ಮತ್ತು ತಂತಿಯನ್ನು ವಿಂಗಡಣೆ ಮಾಡಿದ ಮೂಲ ಉದ್ದೇಶ ಕೂಡ ಇದೇ ಆಗಿದೆ. 'ಉದಾರ' ಆರ್ಥಿಕ ನೀತಿ ಮತ್ತು ಆ ನೀತಿಯ ಪರಿಣಾಮವಾಗಿ ಖಾಸಗೀಕರಣ ಶ್ರೀಮಂತ ದೇಶಗಳ ಒತ್ತಡದಿಂದ ನಡೆಯುತ್ತಿದೆ. ಮಾಜಿ ಪ್ರಧಾನಿ ನರಸಿಂಹ ರಾವ್ ಮತ್ತು ಮಾಜಿ ಹಣಕಾಸು ಮಂತ್ರಿ ಮನಮೋಹನ್ ಸಿಂಗ್ ಅವರ ಹೊಸ ಆರ್ಥಿಕ ನೀತಿ ನಮ್ಮ ಸ್ವಾವಲಂಬನೆಗೆ ಧಕ್ಕೆಯುಂಟುಮಾಡಿದೆ. ನಮ್ಮ ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆದಿದೆ.

ದಿನಕ್ಕೆ 20 ಕೋಟಿಯಷ್ಟು ಆದಾಯ ದೂರಸಂಪರ್ಕ ಇಲಾಖೆಯಲ್ಲಿದೆ. ಇದರ ಮೇಲೆ ಬಹುರಾಷ್ಟ್ರೀಯ ಕಂಪನಿಗಳು ಕಣ್ಣು ಹಾಕಿದ್ದರಲ್ಲಿ ಆಶ್ಚರ್ಯಪಡುವಂತಹದ್ದೇನಿಲ್ಲ. ಅಭಿವೃದ್ಧಿ ಹೊಂದಿರುವ ದೇಶದಲ್ಲಿ 40 ರಿಂದ 70 ಶೇಕಡಾ ಟೆಲಿಫೋನ್ ಉಪಯೋಗಿಸುತ್ತಿದ್ದಾರೆ. ಆದರೆ ಆರ್ಥಿಕವಾಗಿ ಹಿಂದುಳಿದಿರುವ ದೇಶದಲ್ಲಿ ಈ ಸೌಲಭ್ಯ ತೀರಾ ಕಮ್ಮಿಇದೆ. ಭಾರತದಲ್ಲಿ ಶೇಕಡಾ 1.5 ಮಾತ್ರ ಸಂಪರ್ಕ ಇದೆ.

ಟೆಲಿಫೋನ್ ಉಪಕರಣಗಳ ಉತ್ಪಾದನೆ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀ, ಹಿಂದುಸ್ತಾನ ಟೆಲಿಪ್ರಿಂಟರ್ಸ್, ಹಿಂದುಸ್ಥಾನ ಕೇಬಲ್ಸ್, ಟೆಲಿಕಾಂ ಫ್ಯಾಕ್ಟರಿ ಇವುಗಳ ಹಿಡಿತದಲ್ಲಿತ್ತು. ಹೊಸ ಆರ್ಥಿಕ ನೀತಿ ಜಾರಿ ಮಾಡಿದ ನಂತರ ಟೆಲಿಕಾಂನಲ್ಲೂ 'ಉದಾರ' ಆರ್ಥಿಕ ನೀತಿ ಜ್ಯಾರಿಯಾಗಿದೆ.

ದೂರ ಸಂಪರ್ಕಕ್ಕೆ ಬೇಕಾಗುವ ಉಪಕರಣಗಳ ತಯಾರಿಕೆಗೆ ಖಾಸಗಿಯವರಿಗೆ ಅವಕಾಶ ನೀಡಿದೆ. 1988 ರಲ್ಲಿ ಸೀಡಾಟ್ ಎಕ್ಸ್‌ಚೇಂಜ್‌ಗಳನ್ನು ತಯಾರು ಮಾಡಲು ಖಾಸಗಿಯವರಿಗೆ ಅನುಮತಿ ನೀಡಿದೆ. 25 ರಷ್ಟು ಕಂಪನಿಗಳು ಈಗ ಸೀಡಾಟ್ ಎಕ್ಸ್‌ಚೇಂಜ್‌ಗಳನ್ನು ನಿರ್ಮಾಣ ಮಾಡುತ್ತಿವೆ. ಐಟಿಐ, ಟೆಲಿಕಾಂ ಫ್ಯಾಕ್ಟರಿ ಈ ಕಂಪನಿಗಳಿಗೆ ಟೆಂಡರು ಕೊಡದೆ ಖಾಸಗಿ ಕಂಪನಿಗಳಿಗೆ ಟೆಂಡರು ಕೊಡುವ ಹೊಸ ದಾರಿ ಕಂಡುಹಿಡಿದಿವೆ.

ಪಾರ್ಲಿಮೆಂಟ್ ಒಳಗೆ ಮತ್ತು ಹೊರಗೆ ಬಹಳಷ್ಟು ಚರ್ಚೆ ನಡೆಸದೆ ಹೊಸ ಟೆಲಿಕಾಂ ಕಾಯಿದೆಯನ್ನು 1994 ರಲ್ಲಿ ದೂರ ಸಂಪರ್ಕ ಮಂತ್ರಿ ಸುಖರಾಂ ಅವರು ಜ್ಯಾರಿ ಮಾಡಿಸಿದರು. ಅದರ ಉದ್ದೇಶ ಹೀಗೆಂದು ಹೇಳಲಾಗಿತ್ತು-

1. ಟೆಲಿಫೋನ್ ಬೇಕಾದವರಿಗೆ ಕೂಡಲೇ ಸಂಪರ್ಕ ಒದಗಿಸುವುದು.
2. ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಸಂಪರ್ಕ ನೀಡುವುದು.
3. ಟೆಲಿಫೋನ್‌ಗೆ ಬರುವ ಸೇವಾ ವೆಚ್ಚ ಕಮ್ಮಿ ಮಾಡುವುದು.
4. ಟೆಲಿಫೋನ್ ಸಂಪರ್ಕ ವ್ಯವಸ್ಥೆಯನ್ನು ಜಾಗತೀಕರಣ ಮಾಡುವುದು.

ಇದನ್ನು ಜ್ಯಾರಿ ಮಾಡಲು ನಮಗೆ ಸಾಧ್ಯವಾಗದ ಕಾರಣ ಖಾಸಗಿಯವರಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರವೇಶ ನೀಡುವುದು ತಮ್ಮ ಉದ್ದೇಶ ಎಂಬುದಾಗಿ ಅವರು ಸಾರಿದರು. ನಿಜವಾಗಿ ಅಭಿವೃದ್ಧಿಯಾಗಲೀ ವೆಚ್ಚ ಕಡಿತ ಮಾಡುವುದಾಗಲೀ ಇವರ ಉದ್ದೇಶವಲ್ಲ. ಬಹುರಾಷ್ಟ್ರೀಯರಿಗೆ ಹೆಚ್ಚು ಲಾಭ ಗಳಿಸಲು ಅವಕಾಶ ನೀಡುವ ತಂತ್ರ ಎಂದು ಎಲ್ಲರಿಗೂ ತಿಳಿದಿದೆ. ಆರ್ಥಿಕ ಬೇಡಿಕೆ ಇಲ್ಲದೇ ಟೆಲಿಕಾಂ ನೌಕರರು ಟೆಲಿಕಾಂ ಖಾಸಗೀಕರಣ ವಿರುದ್ಧ 5 ದಿನ ನಡೆಸಿದ ಚಾರಿತ್ರಿಕ ಮುಷ್ಕರಕ್ಕೆ ದೇಶದ ಎಲ್ಲಾ ಕಾರ್ಮಿಕ ಸಂಘಟನೆಗಳು ಬೆಂಬಲ ನೀಡಿವೆ. ದೇಶದ ಜನರ ಹಿತವಾಗಲೀ, ಇಲಾಖೆಯ ನೌಕರರ ಹಿತಾಸಕ್ತಿಯನ್ನಾಗಲೀ ನೋಡದೆ ಇಲಾಖೆಯನ್ನು ಖಾಸಗೀಕರಣ ನಡೆಸುವ ತಂತ್ರ ಸುಖರಾಂ ನಡೆಸಿದ್ದರು.

5 ವರ್ಷದ ಟೆಲಿಫೋನ್ ಸೇವೆ ಸಲ್ಲಿಸಿದ ಕಂಪನಿಯವರಿಗೆ ಮಾತ್ರ ಲೈಸೆನ್ಸ್ ಕೊಡುವ ನೀತಿಯನ್ನು ತರಲಾಯಿತು. ಇದರಲ್ಲಿ ಭಾರತದ ಯಾವ ಕಂಪನಿಯೂ ಇರದಿದ್ದುದ್ದರಿಂದ ಬಹುರಾಷ್ಟ್ರೀಯ ಕಂಪನಿಯೊಂದಿಗೆ ಸಹಯೋಗ ನಡೆಸಬೇಕಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ಖಾಸಗೀ ಕಂಪನಿಯವರು ಹೆಚ್ಚು ಸಂಪರ್ಕ ನೀಡುವಲ್ಲಿ ವಿಫಲರಾಗಿದ್ದಾರೆ. ಸೆಲ್ಯೂಲರ್ ಫೋನ್, ರೇಡಿಯೋ ಪೇಜಿಂಗ್ ಈ ಸೇವೆಗಳಿಗೆ ಖಾಸಗೀಯವರಿಗೆ ಅನುಮತಿ ನೀಡಿದೆ. ಆದರೆ ಇಲಾಖೆಯವರನ್ನು ಇದರಿಂದ ಹೊರಗಟ್ಟಿತ್ತು.

ಸೇವೆ ನೀಡುತ್ತಿರುವ ಕಂಪನಿಗಳು ಮತ್ತು ಇಲಾಖೆಯಲ್ಲಿ ಯಾವುದಾದರೂ ವ್ಯಾಜ್ಯ ಬಂದಲ್ಲಿ ಇತ್ಯರ್ಥ ಮಾಡಲು ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ (ಟಿ.ಆರ್.ಎ.ಐ)ವನ್ನು 1997 ರಲ್ಲಿ ರೂಪಿಸಲಾಯಿತು. ಇಷ್ಟರವರೆಗೆ ಖಾಸಗಿಯವರ ಸಂರಕ್ಷಕರಾಗಿ ಈ ಸಂಸ್ಥೆ ಕೆಲಸ ಮಾಡಿದೆ; ಇಲಾಖೆಗೆ ವಿರುದ್ಧವಾಗಿ ಹಲವಾರು ತೀರ್ಪು ನೀಡಿದೆ. ಡೆಲ್ಲಿ ಮತ್ತು ಬೊಂಬಾಯಿ ಮಹಾನಗರಗಳಲ್ಲಿ ಸೆಲ್ಯೂಲರ್ ಫೋನ್ ನಡೆಸಲಿಕ್ಕೆ ಟೆಲಿಕಾಂ ಇಲಾಖೆಗೆ (ಎಂ.ಟಿ.ಎನ್.ಎಲ್) ಗೆ ತಡೆ ನೀಡಿದೆ. ಈ ತೀರ್ಪಿನ ವಿರುದ್ಧ ಡಿ.ಒ.ಟಿ., ಎಂ.ಟಿ.ಎನ್.ಎಲ್ ಹೈಕೋರ್ಟಿನಲ್ಲಿ ಅಪೀಲು ಹೋಗಿವೆ.

ಬಹುರಾಷ್ಟ್ರೀಯ ಕಂಪನಿಯವರಿಗೆ ಮತ್ತು ಭಾರತದ ಖಾಸಗಿ ಕಂಪನಿಯವರಿಗೆ ಬಹಳಷ್ಟು ರಿಯಾಯಿತಿ ನೀಡಿದರೂ ಸೇವೆ ನೀಡಲು ಸಾಧ್ಯವಾಗಲಿಲ್ಲ. ಟೆಲಿಕಾಂ ಇಲಾಖೆ ಇರುವಾಗ ಬಹುರಾಷ್ಟ್ರೀಯ ಹಾಗೂ ಖಾಸಗಿ ಕಂಪನಿಯವರಿಗೆ ಅಡಚಣೆ ಆಗುವುದರಿಂದ ಟೆಲಿಕಾಂ ಇಲಾಖೆಯನ್ನು ಇಲ್ಲವಾಗಿಸುವ ತಂತ್ರಕ್ಕೆ ಸರಕಾರ ಹೊರಟಿದೆ.

ಖಾಸಗಿಯವರ ಸಹಾಯವಿಲ್ಲದೇ ನಮ್ಮ ದೇಶದಲ್ಲಿ ಹಿಂದಿನ 3 ವರ್ಷದಲ್ಲಿ 80 ಲಕ್ಷ ಟೆಲಿಫೋನ್ ಸಂಪರ್ಕ ಇಲಾಖೆ ನೀಡಿದೆ. ಡಿಲ್ಲಿ ಕಲ್ಕತ್ತ ಮಹಾನಗರಗಳಲ್ಲಿ 10 ರಿಂದ 15 ದಿನದೊಳಗೆ ಸಂಪರ್ಕ ನೀಡುವ ವ್ಯವಸ್ಥೆ ಇದೆ. ಡಿಲ್ಲಿ ಬೊಂಬಾಯಿಗಳಲ್ಲಿ ಖಾಸಗಿಯವರಿಗಿಂತಲೂ ಕಮ್ಮಿ ದರದಲ್ಲಿ ಸೆಲ್ಯೂಲರ್ ಫೋನ್ ನೀಡಲು ಎಂ.ಟಿ.ಎನ್.ಎಲ್ ತಯಾರಾಗಿದೆ. ಖಾಸಗಿಯವರಿಗಿರುವ ಒಪ್ಪಂದದಲ್ಲಿ ಶೇ. 10 ಟೆಲಿಫೋನ್ ಗ್ರಾಮಾಂತರ ಪ್ರದೇಶಕ್ಕೆ ಕೊಡಬೇಕೆಂದಿದೆ. ಆದರೆ ಒಂದೇ ಒಂದು ಕನೆಕ್ಷನ್ ನೀಡುತ್ತಿಲ್ಲ. ಗ್ರಾಮಾಂತರ ಪ್ರದೇಶಕ್ಕೆ ಡಿ.ಒ.ಟಿ. ಸಂಪರ್ಕ ನೀಡಬೇಕಾದ ಅನಿವಾರ್ಯತೆ ಒದಗಿದೆ.

ಒಂದು ಸರಕಾರಿ ಇಲಾಖೆಯೊಂದಿಗೆ ಸಂಸತ್ತು ಮತ್ತು ಜನತೆಗೆ ಕೆಲವು ಭಿನ್ನತೆಗಳಿರುತ್ತವೆ. ಆದರೆ ಕಾರ್ಪೋರೇಶನ್‌ಗಳು ಭ್ರಷ್ಟಾಚಾರದಲ್ಲಿ ಮುಳುಗಿದೆ. ಕೆಲವು ಕಾರ್ಪೋರೇಶನ್‌ಗಳು ಬಹಳಷ್ಟು ಕೋಟಿಗಳ ನಷ್ಟದಲ್ಲಿವೆ. ಪ್ರತಿ ದಿನ 20 ಕೋಟಿ ಲಾಭ ಮಾಡುವ ಟೆಲಿಕಾಂ ಇಲಾಖೆಯನ್ನು ಕಾರ್ಪೋರೇಶನ್ ಆಗಿ ಮಾಡಿದ ನಂತರ ಖಾಸಗಿಯವರಿಗೆ ಒಪ್ಪಿಸುವ ಮೊದಲನೇ ಹೆಜ್ಜೆ ಇದು. ಇದು ಎಲ್ಲರಿಗೂ ತಿಳಿದಿದೆ.

ಕಳೆದ 50 ವರ್ಷಗಳಲ್ಲಿ ನಮ್ಮ ಸರಕಾರಿ ಖಜಾನೆಯಿಂದ ಸಹಾಯ ಪಡೆಯದೇ ಇಲಾಖೆ ಲಾಭದಲ್ಲಿಯೇ ಅಭಿವೃದ್ಧಿ ಮಾಡುತ್ತಿದೆ. ಖಾಸಗೀಕರಣ, ಕಾರ್ಪೋರೇಶನ್ ಇವೆಲ್ಲವೂ ಈಗಿರುವ ನೌಕರರನ್ನು ನಿರುದ್ಯೋಗಿಗಳಾಗಿಸುವ ದಾರಿಯಾಗಬಹುದು. ಈಗ ಕೊಡುವ ಎಲ್ಲಾ ಆಶ್ವಾಸನೆಗಳು ನಂತರ ನಿರರ್ಥಕವಾಗಬಹುದು. ದೇಶದ ರಕ್ಷಣೆಗೆ ಟೆಲಿಕಾಂ ಇಲಾಖೆ ಬಹಳ ಮಹತ್ವದ್ದಾಗಿದೆ. ಅದರಿಂದಲೇ ಜರ್ಮನಿ, ಫ್ರಾನ್ಸ್, ಇಂತಹ ಶ್ರೀಮಂತ ದೇಶಗಳು ಖಾಸಗೀಕರಣ ಮಾಡದೇ ಸರಕಾರದ ಹಿಡಿತದಲ್ಲಿ ಇಟ್ಟುಕೊಂಡಿವೆ.

ತಿರುಗುಬಾಣವಾದ ಅತ್ಯಾಚಾರ ಆರೋಪ: ಮಮತಾ ಬ್ಯಾನರ್ಜಿಗೆ ಮಹಿಳೆಯರ ಛೀಮಾರಿ

ಮಹಿಳೆಯೊಬ್ಬರ ಮೇಲೆ 'ಅತ್ಯಾಚಾರ' ನಡೆದಿದೆ ಎಂದು ಆರೋಪಿಸಿ ಈ ಪ್ರಕರಣದಲ್ಲಿ ಆರೋಪಿಗಳನ್ನಾಗಿ ಹೆಸರಿಸಲಾದ ಐದು ಗಂಡಸರ ಪತ್ನಿಯರು ನಡೆಯದೇ ಇದ್ದ ಅತ್ಯಾಚಾರ ಪ್ರಕರಣವನ್ನು ಹುಟ್ಟು ಹಾಕಿದ 'ಹುಟ್ಟು ಹೋರಾಟಗಾರ್ತಿ'(!) ಮಮತಾ ಬ್ಯಾನರ್ಜಿ ವಿರುದ್ಧ ಮೊಕದ್ದಮೆ ಹೂಡಲು ಮುಂದಾಗಿದ್ದಾರೆ.

ಪಶ್ಚಿಮ ಬಂಗಾಳದ 24 ದಕ್ಷಿಣ ಪರಗಣ ಜಿಲ್ಲೆಯ ಅಶ್ವಥಬೆರಿಯಾ ಗ್ರಾಮದ ಶೈಲಾರೊದಾಸ್, ಮಿನಾರ್ ಬೀಬಿ, ಸುಪ್ರೀತಿ ಮಂಡಲ್, ಮನೋವರ ಬೀಬಿ ಮತ್ತು ಮಮ್ತಾ ಬೀಬಿ ಅವರೇ ಈ ಐದು ಮಹಿಳೆಯರು.

ಮೇ ತಿಂಗಳಲ್ಲಿ ನಡೆದ ಪಂಚಾಯತ್ ಚುನಾವಣೆ ವೇಳೆ ಈ ಕಪೋಲಕಲ್ಪಿತ ಪ್ರಕರಣವನ್ನು ಮಮತಾ ಬ್ಯಾನರ್ಜಿ ಹೇಗೆ ತನ್ನ ಪ್ರಚಾರಕ್ಕೆ ಬಳಸಿಕೊಂಡರು ಎಂಬ ಬಗ್ಗೆ ತನಿಖೆ ನಡೆಸುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೂ ದೂರು ಸಲ್ಲಿಸಲು ಈ ಐದು ಜನರು ದೃಢ ಸಂಕಲ್ಪ ಮಾಡಿದ್ದಾರೆ.

ತೃಣಮೂಲ ಕಾಂಗ್ರೆಸ್‌ನ ಅಭ್ಯರ್ಥಿ ಚಂಪಲಾ ಸರ್ದಾರ್ ಅವರ ಮೇಲೆ ಸಿಪಿಐ(ಎಂ)ನ ಕೆಲವು ಕಾರ್ಯಕರ್ತರು ಅತ್ಯಾಚಾರ ನಡೆಸಿದರು. ಚಂಪಲಾರ ಬೆಂಬಲಿಗರನ್ನು ಬೆದರಿಸುವುದು ಇದರ ಉದ್ದೇಶವಾಗಿತ್ತು ಎಂದು ಪಂಚಾಯತ್ ಚುನಾವಣೆಗಳಿಗೆ ಕೆಲವು ದಿನಗಳ ಮುಂಚೆ ತೃಣಮೂಲ ನಾಯಕಿ ಮಮತಾ ಬ್ಯಾನರ್ಜಿ ಆಪಾದಿಸಿದ್ದರು. ಸಿಪಿಐ(ಎಂ)ಗೆ ಕಳಂಕ ಹಚ್ಚಲು ಸದಾ ತುದಿಗಾಲಲ್ಲಿ ನಿಂತಿರುವ ಮಾಧ್ಯಮಗಳಿಗೆ ಇದು ಗ್ರಾಸವೊದಗಿಸಿತ್ತು. ಈ ಆರೋಪ ದೇಶಾದ್ಯಂತ ಪತ್ರಿಕೆಗಳಲ್ಲಿ ಭಾರೀ ಪ್ರಚಾರ ಪಡೆಯಿತು.

ಈ 'ಪ್ರಕರಣವನ್ನು' ಬಳಸಿಕೊಂಡು ಬ್ಯಾನರ್ಜಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಾರ ನಡೆಸಿದ್ದರು. ಚಂಪಲಾ ಅವರ ಮೇಲೆ ಅತ್ಯಾಚಾರ ನಡೆದಿದೆಯೇ ಎಂಬುದನ್ನು ಪರಿಶೀಲಿಸಲು ಪರೀಕ್ಷೆ ನಡೆಸುವಂತೆ ಕೇಂದ್ರೀಯ ಅಪರಾಧ ಪತ್ತೆ ಪ್ರಯೋಗಾಲಯಕ್ಕೆ (C.F.L) ರಾಜ್ಯದ ಎಡರಂಗ ಸರಕಾರ ಮನವಿ ಮಾಡಿತು.

ಅತ್ಯಾಚಾರದ ಆರೋಪ ಪೂರ್ಣ ನಿರಾಧಾರ ಎಂದು ಕೆಲವು ದಿನಗಳ ನಂತರ ನೀಡಿದ ವರದಿಯಲ್ಲಿ ಪ್ರಯೋಗಾಲಯ ಸ್ಪಷ್ಟಪಡಿಸಿತು. ತಿಂಗಳುಗಟ್ಟಲೆ ಜೈಲಿನಲ್ಲಿ ಕೊಳೆತ ಆಪಾದಿತರನ್ನು ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು.

ಹಳ್ಳಿ ಪ್ರದೇಶಕ್ಕೆ ಬಿಡೋಲ್ಲ:

ತಮ್ಮ ಗಂಡಂದಿರು ನಿರಪರಾಧಿಗಳು ಎಂದು ಪ್ರಯೋಗಾಲಯದ ಪರೀಕ್ಷೆಯಿಂದ ಸಾಬೀತಾಗಿದ್ದರಿಂದ ಧೈರ್ಯ ಪಡೆದ ಈ ಮಹಿಳೆಯರು ಮಮತಾ ಬ್ಯಾನರ್ಜಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಮಮತಾ ಬ್ಯಾನರ್ಜಿಗೆ ನಮ್ಮ ಹಳ್ಳಿ ಒಳಗೆ ಕಾಲಿಡಲು ಯಾವತ್ತೂ ಬಿಡುವುದಿಲ್ಲ' ಎಂದು ಈ ಮಹಿಳೆಯರು ಘೋಷಿಸಿದ್ದಾರೆ.

ಸ್ವತಃ ಒಬ್ಬ ಮಹಿಳೆಯಾಗಿ ಆಕೆ ಇಷ್ಟು ಕೀಳುಮಟ್ಟಕ್ಕೆ ಯಾಕೆ ಇಳಿದಳು ಎಂಬುದೇ ನಮಗೆ ಅರ್ಥವಾಗುತ್ತಿಲ್ಲ ಎಂದವರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಉತ್ತರ ತುಂಬಾ ಸರಳ. ರಾಜಕೀಯ ಲಾಭಕ್ಕಾಗಿ ಮಮತಾ ಬ್ಯಾನರ್ಜಿ ಈ ರೀತಿ ಮಾಡಿದ್ದರು ಎನ್ನುವುದು ಸ್ಪಷ್ಟ.

ಎಡಪಂಥೀಯರನ್ನು ವಿಶೇಷವಾಗಿ ಸಿಪಿಐ(ಎಂ)ನ್ನು ತನ್ನ ಬದ್ಧ ವೈರಿ ಎಂದು ಘೋಷಿಸಿಕೊಂಡಿರುವ 'ಜಾತ್ಯಾತೀತ' ಬ್ಯಾನರ್ಜಿ ತನ್ನ ಉದ್ದೇಶ ಸಾಧನೆಗಾಗಿ ಕೋಮುವಾದಿ ಬಿಜೆಪಿಯೊಂದಿಗೆ ಕೈಜೋಡಿಸುವ ಕೀಳು ಮಟ್ಟಕ್ಕೆ ಇಳಿದ 'ಮಹಾನಾಯಕಿ'. ಪಂಚಾಯತ್ ಚುನಾವಣೆಯಲ್ಲಿ ಲಾಭ ಪಡೆಯುವುದಕ್ಕಾಗಿ ಒಬ್ಬ ಮಹಿಳೆಯನ್ನೇ ಮುಂದಿಟ್ಟುಕೊಂಡು ಕೀಳು ಮಟ್ಟದ ಕಸರತ್ತು ನಡೆಸಿದರು. ಅದು ಯಾವುದೇ ಪ್ರಯೋಜನಕ್ಕೆ ಬಾರದೇ ಆಕೆಗೇ ತಿರುಗೇಟು ಹೊಡೆಯುತ್ತಿದೆ.

ಅತ್ಯಾಚಾರಕ್ಕೆ ಒಳಗಾದರೆಂದು ಹೇಳಲಾದ ಚಂಪಲಾ ಸರ್ದಾರ್ ಬಗ್ಗೆ ನಮ್ಮ ವಿರೋಧವೇನೂ ಇಲ್ಲ ಎಂದು ಐವರು ಮಹಿಳೆಯರು ಸ್ಪಷ್ಟ ಪಡಿಸಿದ್ದಾರೆ. ರಾಜಕೀಯ ಲಾಭಕ್ಕಾಗಿ ಚಂಪಲಾರನ್ನು ಮಮತಾ ದುರುಪಯೋಗ ಪಡಿಸಿ ಕೊಂಡಿದ್ದಾರೆ ಎಂಬುದು ನಮ್ಮ ಭಾವನೆ ಎಂದಿದ್ದಾರೆ. ಆಗ ಚುನಾವಣೆಯಲ್ಲಿ ಚಂಪಲಾ ಸೋತಿದ್ದರು. ಈಗ ಈ ಇಡೀ ಪ್ರಕರಣದ 'ಖಳನಾಯಕಿ' ಮಮತಾ ರಾಜಕೀಯ ಸೋಲಿನ ಅಂಚಿನಲ್ಲಿದ್ದಾರೆ.

ರಾಜಕೀಯ ಲಾಭಕ್ಕಾಗಿ ಏನು ಮಾಡಿದರೂ ನಡೆಯುತ್ತದೆ ಎಂಬ ಭಾವನೆ ಯಾರಲ್ಲಾದರೂ ಇದ್ದರೆ ಈ ಪ್ರಕರಣದಿಂದ ಪಾಠ ಕಲಿತು ಅಂಥ ಭಾವನೆಯನ್ನು ಒದ್ದೋಡಿಸುವುದು ಕ್ಷೇಮಕರ.



ವಿಶ್ವ

ಶಿವಸೇನೆ ಮಂತ್ರಿಯ ಉಚ್ಚಾಟನೆಯೋ ರಾಜಿನಾಮೆಯೋ?

ಓದುಗರಿಗೆ ಈ ಶೀರ್ಷಿಕೆ ತೀರಾ ವಿಚಿತ್ರವಾಗಿ ಕಾಣಬಹುದು. ಆದರೆ ಮಹಾರಾಷ್ಟ್ರದಿಂದ ಬಂದಿರುವ ಒಂದು ವರದಿಯನ್ನು ಗಮನಿಸಿದರೆ ಈ ಗೊಂದಲ ಉಂಟಾಗುವುದು ಸಹಜವೇ ಆಗಿದೆ. ಆಳುವ ಶಿವಸೇನೆ-ಬಿಜೆಪಿ ಮೈತ್ರಿಕೂಟ ಸರಕಾರದ ನಾಯಕ ಪಕ್ಷವಾದ ಶಿವಸೇನೆಯ ಮಂತ್ರಿಯೊಬ್ಬರಿಗೆ ಸಂಬಂಧಿಸಿದ ವಿಚಾರ ಇದು.

ಇಂಧನ ಖಾತೆಯ ಸಹಾಯಕ ಸಚಿವ ಸುರೇಶ ನವಲೆ ಅವರನ್ನು ಮಂತ್ರಿ ಸ್ಥಾನದಿಂದ ತೆಗೆದು ಹಾಕಿರುವುದಾಗಿ 'ಶಿವಸೇನೆ' ಮುಖ್ಯಮಂತ್ರಿ ಮನೋಹರ ಜೋಷಿ ವಿಧಾನ ಸಭೆಯಲ್ಲಿ ಪ್ರಕಟಿಸಿದಾಗ ಭಾರೀ ಗದ್ದಲವೇ ಉಂಟಾಯಿತು. ಅದು ವಿಧಾನ ಪರಿಷತ್ತಿನಲ್ಲಿ ಕೂಡ ಪ್ರತಿಧ್ವನಿಸಿತು.

ಮಂತ್ರಿಯನ್ನು ವಜಾ ಮಾಡಿರುವುದಾಗಿ ಮುಖ್ಯಮಂತ್ರಿ ಹೇಳಿದರಾದರೂ ಸುರೇಶ ನವಲೆ ರಾಜೀನಾಮೆ ಕೊಟ್ಟಿದ್ದಾರೆ ಎಂಬುದು ಪ್ರತಿಪಕ್ಷ ನಾಯಕರ ವಾದವಾಗಿತ್ತು.

ಸುಮಾರು 200 ಜನರಿದ್ದ ಒಂದು ಗುಂಪು ತಮ್ಮ ಅಧಿಕೃತ ನಿವಾಸಕ್ಕೆ ನುಗ್ಗಿ ತಮಗೆ ಬೆದರಿಕೆ ಹಾಕಿತು ಎಂದು ಮುಂಚಿನ ದಿನವಷ್ಟೇ ನವಲೆ ವಿಧಾನ ಸಭೆಯಲ್ಲಿ ದೂರಿದ್ದರು. ಈ ಜನರು ಶಿವಸೇನೆಯವರು ಆಗಿದ್ದಿರಬೇಕು ಎಂದೂ ಅವರು ಹೇಳಿದ್ದರು.

ನನ್ನನ್ನು ಪದಚ್ಯುತಿ ಮಾಡಿಲ್ಲ ನಾನೇ ಪದತ್ಯಾಗ ಮಾಡಿದ್ದೇನೆ ಎಂದು ಸ್ವತಃ ನವಲೆ ಸದನಕ್ಕೆ ತಿಳಿಸಿದರು.

ಬೆದರಿಕೆ ಹಾಕಲಾದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿದಕ್ಕಾಗಿ ಶಿಸ್ತು ಉಲ್ಲಂಘನೆ ಆರೋಪದ ಮೇಲೆ ನವಲೆಯವರನ್ನು ಮಂತ್ರಿ ಸ್ಥಾನದಿಂದ ತೆಗೆದು ಹಾಕಲಾಯಿತು ಎಂದು ಮುಖ್ಯಮಂತ್ರಿ ಜೋಷಿ ವಿವರಣೆ ನೀಡಿದ್ದಾರೆ!

ಮೇರೆ ಮೀರಿದ ಜಾತೀಯತೆ!

ಶಿವಸೇನೆಯಲ್ಲಿ ಜಾತೀಯತೆ ಮೇರೆ ಮೀರುತ್ತಿದೆ. ಅದನ್ನು ಸಹಿಸಲು ಅಸಾಧ್ಯವಾಗಿದೆ. ಹಾಗಾಗಿ ರಾಜೀನಾಮೆ ನೀಡುವ ನಿರ್ಧಾರಕ್ಕೆ ಬಂದೆ ಎಂದು ನವಲೆ ತಿಳಿಸಿದ್ದಾರೆ. ಮನೆಗೆ ನುಗ್ಗಿದ ಜನರು ಶಿವಸೇನೆಯನ್ನು ತೊರೆಯುವ ಯೋಚನೆಯನ್ನು ಬಿಡುವಂತೆ ತಮಗೆ ಬೆದರಿಕೆ ಹಾಕಿದರು ಎಂದು ಪೋಲೀಸರಿಗೆ ಸಲ್ಲಿಸಿರುವ ದೂರಿನಲ್ಲಿ ನವಲೆ ವಿವರಿಸಿದ್ದಾರೆ.

ಒಟ್ಟಾರೆ, ಇದು ರಾಜೀನಾಮೆಯೋ ಪದತ್ಯಾಗವೋ ಎಂಬುದು ಗೊತ್ತಿಲ್ಲ. ಆದರೆ ಸ್ವತಃ ಆಳುವ ಪಕ್ಷದ ಒಳಗಡೆಯೇ ಭಾರೀ ಸಂಘರ್ಷ ನಡೆಯುತ್ತಿರುವುದರ ಸೂಚನೆ ಇದಾಗಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಸರ್ಕಾರಿ ಅಧಿಕಾರಿಗಳಿಗೆ ಕಾವಿಪಡೆ ನಾಯಕನ ಉಪನ್ಯಾಸ !

ತಾನು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಹಾಗೂ ಕೇಂದ್ರ ಸರಕಾರದ ಮೂಲಕ ಕೋಮುವಾದದ ವಿಷಬೀಜ ಬಿತ್ತಲು ಸರ್ವ ಪ್ರಯತ್ನ ಮಾಡುತ್ತಿರುವ ಕಾವಿಪಡೆ ಇದೀಗ ನೇರವಾಗಿ ಅಧಿಕಾರಿಗಳಿಗೆ 'ಉಪನ್ಯಾಸ' ನೀಡುವ ಅಪಾಯಕಾರಿ ಪ್ರವೃತ್ತಿಗೆ ಕೈಹಾಕಿದೆ. ಸಂಘ ಪರಿವಾರದ ಈ ಅನಪೇಕ್ಷಿತ ದುಸ್ಸಾಹಸ ಉತ್ತರ ಪ್ರದೇಶದಿಂದ ವರದಿಯಾಗಿದೆ.

ರಾಜ್ಯದ ಐ.ಎ.ಎಸ್. ಅಧಿಕಾರಿಗಳ ಒಂದು ಸಭೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸರಸಂಘ ಚಾಲಕ ಪ್ರೊ. ರಾಜೇಂದ್ರ ಸಿಂಗ್ ಮಾತನಾಡಿದ್ದು ದೇಶಾದ್ಯಂತ ವಿವಾದದ ಅಲೆಯೆಬ್ಬಿಸಿದೆ. ಜಾತ್ಯಾತೀತ ಶಕ್ತಿಗಳು ಇದರಿಂದ ಕೆರಳಿರುವುದೇ ಅಲ್ಲದೆ ರಾಜ್ಯದ ಐ.ಎ.ಎಸ್. ಅಧಿಕಾರಿಗಳು ಈ ಸಭೆಯ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಅಧಿಕಾರಶಾಹಿಯಲ್ಲಿ ಇಂಥ ಪಂಥವಾದಿ ಸಿದ್ಧಾಂತವನ್ನು ತೂರುವ ಆರೆಸ್ಸೆಸ್ ಪ್ರಯತ್ನಗಳಿಂದ ಜಾತ್ಯಾತೀತತೆ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗಳೆರಡೂ ಅಪಾಯಕ್ಕೆ ಸಿಲುಕಿವೆ.

ಆರೆಸ್ಸೆಸ್ ಮುಖ್ಯಸ್ಥ ಸಿಂಗ್ ಉ.ಪ್ರ.ದ ಇತಿಹಾಸದಲ್ಲೆ ಮೊದಲ ಬಾರಿಗೆ ಜುಲೈ 25 ರಂದು ಸುಮಾರು 60 ಉನ್ನತ ಐ.ಎ.ಎಸ್ ಅಧಿಕಾರಿಗಳ ಸಭೆಯಲ್ಲಿ ಉಪನ್ಯಾಸ ನೀಡಿದರು. ರಾಜ್ಯದ ಉನ್ನತ ಶಿಕ್ಷಣ ಸಚಿವ ನರೇಂದ್ರ ಸಿಂಗ್ ಗೌರ್ ಮತ್ತು ಒಬ್ಬ ಹಿರಿಯ ಐ.ಎ.ಎಸ್. ಅಧಿಕಾರಿ ಎ.ಪಿ.ಸಿಂಗ್ ಈ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಿದ್ದರು.

ರಾಜೇಂದ್ರ ಸಿಂಗ್ ಉಪನ್ಯಾಸಕರಾಗಿದ್ದ ಅಲಹಾಬಾದ್ ವಿಶ್ವವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳನ್ನು ಒಂದೆಡೆ ಕಲೆಹಾಕುವುದು ಈ ಸಭೆಯ ಉದ್ದೇಶ ಎಂಬುದು ಸಂಘಟಕರ ಅಂಬೋಣ! ಆದರೆ ಸಂಘ ಪರಿವಾರದ ನಿಜವಾದ ಉದ್ದೇಶ ಏನೆಂಬುದು ಎಲ್ಲರಿಗೂ ಗೊತ್ತಿರುವಂಥದ್ದೇ.

ವಾಸ್ತವವಾಗಿ ಹೇಳಬೇಕೆಂದರೆ ಆಳುವ ಬಿಜೆಪಿ ಈ ರಾಜ್ಯ ಘಟಕದ ಅಧ್ಯಕ್ಷರಿಗೂ ಈ ರೀತಿಯ ಸಭೆ ಕರೆಯುವ ಅಧಿಕಾರ ವಿಲ್ಲ. ಅಂತದ್ದರಲ್ಲಿ ಆರೆಸ್ಸೆಸ್ ಮುಖ್ಯಸ್ಥನೇ ಸಭೆಯ ಅಧ್ಯಕ್ಷತೆ ವಹಿಸಿ ಭಾಷಣ ಮಾಡಿದ್ದು ದೇಶವನ್ನು ಫ್ಯಾಸಿಸ್ಟ್ ಶಕ್ತಿಗಳ ನಿಯಂತ್ರಣಕ್ಕೆ ತರುವ ಹುನ್ನಾರದ ಭಾಗವಾಗಿದೆ.

ಅಧಿಕಾರಿಗಳನ್ನು ಕೋಮುವಾದದ ಆಧಾರದಲ್ಲಿ ಒಡೆಯುವ ಈ ಕ್ರಮಕ್ಕೆ ರಾಜಕೀಯ ವಲಯದಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಅಧಿಕಾರಿಗಳಲ್ಲಿ, ಭಾರೀ ಪ್ರತಿಭಟನೆ ಉಂಟಾಗಿದೆ.

ಉತ್ತರ ಪ್ರದೇಶ ಐ.ಎ.ಎಸ್. ಅಧಿಕಾರಿಗಳ ಸಂಘ ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದೆ. ಆಗಸ್ಟ್‌ನಲ್ಲಿ ನಡೆಯಲಿರುವ ಸಂಘದ ಸಭೆಯಲ್ಲಿ ರಾಜೇಂದ್ರ ಸಿಂಗರ ಉಪನ್ಯಾಸದಲ್ಲಿ ಪಾಲ್ಗೊಂಡ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವ ನಿರೀಕ್ಷೆಯಿದೆ.

ಅಂತೂ ಹಿಂದೂ ಕೋಮುವಾದಿ ಶಕ್ತಿಗಳು ದೇಶದಲ್ಲಿ ಧರ್ಮದ ಆಧಾರದ ಮೇಲೆ ಜನರ ಭಾವನೆಗಳನ್ನು ಬಡಿದೆಬ್ಬಿಸಿ ಬಿಗುವಿನ ವಾತಾವರಣವನ್ನು ನಿರ್ಮಿಸಲು ಎಲ್ಲಾ ರೀತಿಯ ತಯಾರಿ ನಡೆಸಿದ್ದು, ಲಭ್ಯವಾದ ಪ್ರತಿಯೊಂದು ಅವಕಾಶವನ್ನು ಬಳಸಿಕೊಳ್ಳಲು ಕಾತುರವಾಗಿವೆ. ಇದರ ಬಗ್ಗೆ ಜನತೆ ಜಾಗೃತಿ ಬೆಳೆಸಿಕೊಳ್ಳುವುದು ಅಗತ್ಯವಾಗಿದೆ.

○

ಉತ್ತರ ಪ್ರದೇಶದ ಬಿಜೆಪಿ ಪಾಳಯದಲ್ಲಿ ಆತಂಕ

ಇತ್ತ ಮುಂಬೈಯಲ್ಲಿ ಈ ವಿದ್ಯಮಾನ ನಡೆಯುತ್ತಿದ್ದರೆ ಅತ್ತ ಲಖನೌದಲ್ಲಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ತಮ್ಮ 'ಸ್ನೇಹಿತರ' ಬಂಡಾಯದಿಂದ ಕಂಗಾಲಾಗಿದ್ದಾರೆ.

ಕಾಂಗ್ರೆಸ್, ಬಹುಜನ ಸಮಾಜಪಕ್ಷ ಮತ್ತು ಜನತಾದಳದಿಂದ ಪಕ್ಷಾಂತರ ಮಾಡಿಸಿ ಅಡ್ಡದಾರಿಯಿಂದ ಬಹುಮತ ಪಡೆದು ಸರಕಾರ ರಚಿಸಿದ ಭಾರತೀಯ ಜನತಾ ಪಕ್ಷದ ನಾಯಕ ಈಗ ಭಾರೀ ತಲೆನೋವುಗಳನ್ನು ಎದುರಿಸಬೇಕಾಗಿದೆ. ಸ್ವಂತಃ ತಾವೇ ಪ್ರೋತ್ಸಾಹ ನೀಡಿದ ಹಲವರು ತಿರುಗಿಬಿದ್ದಿರುವುದರಿಂದ ಅವರ ಮಂಡೆ ಬಿಸಿ ಇನ್ನಷ್ಟು ಹೆಚ್ಚಿದೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಮುಲಾಯಂಸಿಂಗ್ ಯಾದವರನ್ನು ಎದುರಿಸಲು ತಾವು ಬೆಂಬಲ ಕೊಟ್ಟಿದ್ದ ಡಿ.ಪಿ.ಯಾದವ್ ಇಂಥ ಅನಿರೀಕ್ಷಿತ ಸವಾಲುಗಾರರಲ್ಲಿ ಒಬ್ಬರಾಗಿರುವುದು ಉತ್ತರಪ್ರದೇಶ ಮುಖ್ಯಮಂತ್ರಿಯನ್ನು ಚಿಂತೆಗೀಡುಮಾಡಿದೆ.

ಜನ ಬಹುಜನ ಸಮಾಜ ಪಕ್ಷದ (ಜೆ.ಬಿ.ಎಸ್.ಪಿ) ರಾಜ್ಯಸಭೆ ಸದಸ್ಯರಾಗಿರುವ ಡಿ.ಪಿ.ಯಾದವ್ ತಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೆಂದು ಘೋಷಿಸಿಕೊಂಡಿದ್ದಾರೆ. ಪಕ್ಷದ ರಾಜ್ಯಘಟಕ ಅಧ್ಯಕ್ಷರೂ ಆಗಿರುವ ಸಚಿವ ನರೇಂದ್ರ ಸಿಂಗ್‌ರನ್ನು ತೆಗೆದು ಹಾಕಿ ಆ ಸ್ಥಾನಕ್ಕೆ ಬೇರೆಯವರನ್ನು ನೇಮಿಸಿದ್ದಾರೆ ಇದು ಇಷ್ಟಕ್ಕೇ ನಿಲ್ಲದೆ ನರೇಂದ್ರ ಸಿಂಗ್ ರನ್ನು ಸಚಿವ ಸಂಪುಟದಿಂದ ಕೈಬಿಡುವಂತೆ ಡಿ.ಪಿ.ಯಾದವ್ ಬೇಡಿಕೆ ಮುಂದಿಡುವ ಸಂಭವವಿದೆ.

ದೊಡ್ಡಣ್ಣ ನೀತಿಗೆ ಸವಾಲು

ಬಿಜೆಪಿಯ ದೊಡ್ಡಣ್ಣ ನೀತಿಗೆ ಡಿ.ಪಿ ಯಾದವ್ ಸವಾಲು ಹಾಕಿದ್ದು ಅಧಿಕಾರದಲ್ಲಿ ತಮ್ಮ ಪಕ್ಷಕ್ಕೆ ಹೆಚ್ಚಿನ ಪಾಲು ಕೊಡುವಂತೆ ಕೇಳಲು ಸಿದ್ಧತೆ ನಡೆಸಿದ್ದಾರೆ. ಇದರಿಂದ ಉತ್ತೇಜಿತರಾದ ಇತರ ಹಲವು ಮಿತ್ರ ಪಕ್ಷಗಳೂ ಬಿಜೆಪಿ ಮೇಲೆ ಒತ್ತಡ ತರಲು ಆರಂಭಿಸಿದೆ.

ಕಲ್ಯಾಣ್ ಸಿಂಗ್ ಅವರ ಒಡೆದು ಆಳುವ ನೀತಿಯ ಬಗ್ಗೆಯೂ ಭಾಗೀದಾರ ಪಕ್ಷಗಳು ಕ್ರೋಧಗೊಂಡಿವೆ. ಸಿಂಗ್ ತನ್ನ ನೆಚ್ಚಿನ ಸಚಿವರ ಮೂಲಕ ಜೆಬಿಎಸ್‌ಪಿ ಮತ್ತು ಲೋಕತಾಂತ್ರಿಕ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಭಿನ್ನಾಭಿಪ್ರಾಯಗಳನ್ನು ಹುಟ್ಟಿಸಲು ಯತ್ನಿಸುತ್ತಿದ್ದಾರೆ ಎಂಬ ದೂರು ಬಯಲಾಗಿದೆ.

ಲೋಕತಾಂತ್ರಿಕ ಕಾಂಗ್ರೆಸ್ ನಾಯಕ ನರೇಶ ಅಗರವಾಲ್ ಇದನ್ನು ಗಂಭೀರವಾಗಿ ಪರಿಗಣಿಸಿದ್ದು ಸಮಯವನ್ನು ಎದುರು ನೋಡುತ್ತಿದ್ದಾರೆ. ಬಹಿರಂಗವಾಗಿಯೇ ಬಂಡೆದ್ದಿರುವ ಡಿ.ಪಿ. ಯಾದವ್‌ರತ್ತ ಅವರು ಸ್ನೇಹ ಹಸ್ತ ಚಾಚಲಿದ್ದಾರೆ. ಈ ಎಲ್ಲಾ ವಿದ್ಯಮಾನಗಳು ಉತ್ತರ ಪ್ರದೇಶದ ಬಿಜೆಪಿ ಸರಕಾರಕ್ಕೆ ಆಘಾತ ಕೊಡುವ ಘಟನಾವಳಿಗಳನ್ನು ಸೃಷ್ಟಿಸುವ ಸಾಧ್ಯತೆಯಿದ್ದು ಬಿಜೆಪಿ ಪಾಳಯದಲ್ಲಿ ಆತಂಕ ಮಡುಗಟ್ಟಿದೆ.

ಸಾಲ ಮರುಪಾವತಿ ವಿರುದ್ಧ ಹಾನಗಲ್ ರೈತರ ಯಶಸ್ವಿ ಧರಣಿ ಸತ್ಯಾಗ್ರಹ

ಭೂಅಭಿವೃದ್ಧಿ ಬ್ಯಾಂಕಿನಿಂದ ಸಾಲಪಡೆದು ಈಗ ತೀವ್ರ ಬೆಳೆಹಾನಿಗೆ ತುತ್ತಾಗಿರುವ ರೈತರ ಸಾಲ ವಸೂಲಾತಿಯನ್ನು ತಕ್ಷಣದಿಂದಲೇ ಮುಂದೂಡಲು ಬ್ಯಾಂಕಿನ ಆಡಳಿತ ಮಂಡಳಿ ನಿರ್ಧರಿಸಿದೆ. ಜುಲೈ 21 ರ 'ರೈತ ಹುತಾತ್ಮರ ದಿನಾಚರಣೆ'ಯ ಭಾಗವಾಗಿ ಹಾವೇರಿ ಜಿಲ್ಲಾ ಹಾನಗಲ್ ತಾಲೂಕಿನ ಅಕ್ಕಿ ಆಲೂರಿನಲ್ಲಿ ಬ್ಯಾಂಕಿನ ಎದುರು ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ತಾಲೂಕಿನ ರೈತರಿಗೆ ಬ್ಯಾಂಕಿನ ಅಧ್ಯಕ್ಷರಾದ ಷಣ್ಮುಗಪ್ಪ ಸಿಂಧೂರ್ ಆಡಳಿತ ಮಂಡಳಿಯ ತೀರ್ಮಾನವನ್ನು ಪ್ರಕಟಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಹಾನಗಲ್ ತಾಲೂಕು ಸಂಚಾಲಕ ಸಮಿತಿಯು ಈ ಸತ್ಯಾಗ್ರಹ ಚಳುವಳಿಯನ್ನು ಸಂಘಟಿಸಿತ್ತು.

ಸತ್ಯಾಗ್ರಹ ನಿರತ ರೈತರನ್ನುದ್ದೇಶಿಸಿ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರು ರೈತರ ಭೂಮಿ ಹರಾಜು ಕ್ರಮವನ್ನು ಸದ್ಯಕ್ಕೆ ನಿಲ್ಲಿಸುವುದಾಗಿಯೂ, ರೈತರಿಂದ ಜಪ್ತಿ ಮಾಡಲಾದ ನೀರಾವರಿ ಪಂಪ್ ಸೆಟ್ಟುಗಳನ್ನು, ವಿದ್ಯುತ್ ಮೋಟಾರುಗಳನ್ನು, ಸ್ಟಾಟರುಗಳನ್ನು ರೈತರಿಗೆ ವಾಪಸ್ ಕೊಡುವುದಾಗಿ ಘೋಷಿಸಿದರು. ಕೃಷಿಯೇತರ ಉದ್ದೇಶಕ್ಕಾಗಿ ಸಾಲ ಪಡೆದು ಖರೀದಿ ಮಾಡಿಕೊಂಡ ಟ್ರ್ಯಾಕ್ಟರುಗಳ ಬಾಬತ್ತು ಸಾಧ್ಯವಿದ್ದಷ್ಟು ಹಣವನ್ನು ತುಂಬಿ ರೈತರು ಜಪ್ತಿ ಮಾಡಲಾದ ತಮ್ಮ ಟ್ರ್ಯಾಕ್ಟರುಗಳನ್ನು ಮರಳಿ ಪಡೆಯಬಹುದೆಂದು ಅವರು ಹೇಳಿದರು.

ಇದಕ್ಕೂ ಮೊದಲು ಬ್ಯಾಂಕಿನ ಆಡಳಿತ ಮಂಡಳಿ ಹಾಗೂ ರೈತ ಮುಖಂಡರ ನಡುವೆ ರೈತರ ಬೇಡಿಕೆಗಳ ಬಗ್ಗೆ ಸುದೀರ್ಘವಾದ ಚರ್ಚೆ ನಡೆಯಿತು. ಬ್ಯಾಂಕಿನ ನಿಯಮಗಳ ಆಧಾರದಲ್ಲಿ ಸಾಲ ವಸೂಲಾತಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಬ್ಯಾಂಕಿನ ಅಧಿಕಾರಿಗಳು ತಮ್ಮ ಸಾಲ ವಸೂಲಾತಿ ಕ್ರಮವನ್ನು ಸಮರ್ಥಿಸಲು ಪ್ರಯತ್ನಿಸಿದರು. ಬ್ಯಾಂಕ್ ಅಧಿಕಾರಿಗಳ ಧೋರಣೆಯನ್ನು ಒಕ್ಕೊರಲಿನಿಂದ ವಿರೋಧಿಸಿದ ರೈತ ಧುರೀಣರು ಭೂಮಿಯನ್ನು ಅಡವು ಹಾಕಿ ಸಾಲ ಪಡೆದುಕೊಂಡ ರೈತರ ನೀರಾವರಿ ಪಂಪ್ ಸೆಟ್ಟುಗಳನ್ನು ಬಲವಂತವಾಗಿ ಕಿತ್ತುಕೊಂಡು ಬರುವುದು ದೌರ್ಜನ್ಯದ ಕ್ರಮವಾಗಿದೆ ಎಂದು ಸ್ಪಷ್ಟಪಡಿಸಿದರು. ಸುಮಾರು ಎರಡು ಘಂಟೆಗಳ ಕಾಲ ನಡೆದ ಚರ್ಚೆಯ ಬಳಿಕ ರೈತರ ಬೇಡಿಕೆಗಳ ಬಗ್ಗೆ ಒಮ್ಮತಕ್ಕೆ ಬರುವುದು ಸಾಧ್ಯವಾಯಿತು.

ಧರಣಿ ಸತ್ಯಾಗ್ರಹಕ್ಕೆ ಮುನ್ನ ಬ್ಯಾಂಕಿನ ಎದುರು ಏರ್ಪಟ್ಟ ಪ್ರತಿಭಟನಾ ಸಭೆಯಲ್ಲಿ ರೈತ ಕಾರ್ಮಿಕ ಧುರೀಣರಾದ ನಿತ್ಯಾನಂದ ಸ್ವಾಮಿ, ಫಕೀರಪ್ಪ ಹೋತನಹಳ್ಳಿ, ಸಿ.ಆರ್.ಭಟ್, ವಿ.ಡಿ.ತುಪ್ಪದ್, ಹಕ್ಕಲಗೌಡ ಪಾಟೀಲ್, ಎಂ.ಜಿನ್ನಾ ಮಾತನಾಡಿದರು. ರೈತರಾದ ಚಂದ್ರಶೇಖರಯ್ಯ ಹಿರೇಮಠ, ಎಸ್.ಪೆಮ್ಮದ್ರಾಸರ, ಭಾಷಾಸಾಬ್ ನಂದಿಹಳ್ಳಿ, ಸಿದ್ದಪ್ಪ ಬಡಿಗದೇರ, ಬಸವಣೆಪ್ಪ ಕಂಗಲ್ ಮೊದಲಾದವರು ಮಾತನಾಡಿ ಬ್ಯಾಂಕಿನ ದೌರ್ಜನ್ಯದ ಸಾಲ ವಸೂಲಾತಿ ಕ್ರಮಗಳಿಂದ ತಮಗೆ ಆಗಿರುವ ಅನ್ಯಾಯವನ್ನು ವಿವರಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಸಂಚಾಲಕರಾದ ಸಿ.ಎಂ.ಪಾಟೀಲ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ತಿರ್ಕಪ್ಪ ಬಾರ್ಕಿ, ಕರಿಬಸಪ್ಪ ದೊಡ್ಡಮನಿ ಮತ್ತು ವಿಜಯ ಕುಮಾರ್ ಕ್ರಾಂತಿ ಗೀತೆಗಳನ್ನು ಹಾಡಿದರು.

○○○

...ಇಂದು ಎಬಿವಿಪಿ

ಪುಟ 5 ರಿಂದ

ಪ್ರಕರಣ ವನ್ನು ಮುಚ್ಚಿಹಾಕಲು ಹಿರಿಯ ಪೋಲೀಸ್ ಅಧಿಕಾರಿಗಳು ಮತ್ತು ಎಬಿವಿಪಿ ಮುಖಂಡರು ಪ್ರಯತ್ನಿಸುತ್ತಿದ್ದಾರೆಂದು ಸುದ್ದಿಯಾಗಿದೆ. ಎಸ್.ಎಫ್.ಐ. ಮತ್ತಿತರ ಸಂಘಟನೆ ಗಳು ಈ ಘಟನೆ ನಾಚಿಕೆಗೇಡು ಎಂದು ಖಂಡಿಸಿವೆ.

ಎ.ಬಿ.ವಿ.ಪಿ. ತಾನು ಹೇಳಿಕೊಳ್ಳುವಂತೆ ಪಕ್ಷ 'ರಾಜಕಾರಣದಲ್ಲಿ ಆಸಕ್ತಿಯಿಲ್ಲದ, ರಚನಾತ್ಮಕ ದೃಷ್ಟಿಕೋನದ ದೇಶಭಕ್ತ ವಿದ್ಯಾರ್ಥಿ ಅಭಿಯಾನ' ಅಲ್ಲ, ಅದು ಆರ್.ಎಸ್.ಎಸ್. ನ ಫ್ಯಾಸಿಸ್ಟ್ ಮಾದರಿ ದಾಂಧಲೆ ಪಡೆಯೆನ್ನುವುದೇ ಅದರ ನಿಜರೂಪ, ಅದೀಗ ಬಿಜೆಪಿ ಹಲವು ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ ಎಂದು ಈ ಸಂಘಟನೆಗಳು ಖಂಡಿಸಿವೆ.

ಲೋಕಸಂಚಾರ

ಕೆಂಬೋಡಿಯಾದಲ್ಲಿ ಪೀಪಲ್ಸ್ ಪಾರ್ಟಿಗೆ ವಿಜಯ

ಶರತ್ ಚಂದ್ರ

ಇತ್ತೀಚಿಗೆ ನಡೆದ ಕೆಂಬೋಡಿಯಾದ ಚುನಾವಣೆಗಳಲ್ಲಿ ಪ್ರಸ್ತುತ ಎರಡನೇ ಪ್ರಧಾನಿ ಹನ್‌ಸೆನ್‌ರವರ ನಾಯಕತ್ವದ ಕೆಂಬೋಡಿಯನ್ ಪೀಪಲ್ಸ್ ಪಾರ್ಟಿ ನಿಚ್ಚಳ ಬಹುಮತ ಪಡೆದು ಜಯಗಳಿಸಿದೆ. ವಿಶ್ವ ಸಂಸ್ಥೆ ಮತ್ತು ಆಸಿಯನ್ (ASEAN ದಕ್ಷಿಣಪೂರ್ವ ಏಶ್ಯದ ದೇಶಗಳ ಸಂಘಟನೆ) ದೇಶಗಳ ಅಂತರ್ರಾಷ್ಟ್ರೀಯ ವೀಕ್ಷಕರ ಸಮಕ್ಷಮದಲ್ಲಿ ನಡೆದ ಚುನಾವಣೆ ಮುಕ್ತ ಹಾಗೂ ನ್ಯಾಯಯುತವಾಗಿತ್ತು ಎಂದು ಈ ವೀಕ್ಷಕರು ಹೇಳಿದ್ದಾರೆ. ಚುನಾವಣೆಗಳಲ್ಲಿ ಜನ ಉತ್ಸಾಹದಿಂದ ದೊಡ್ಡ ಪ್ರಮಾಣದಲ್ಲಿ ಮತ ಚಲಾಯಿಸಿದ್ದಾರೆ ಎಂಬುದಂತೂ ನಿರ್ವಿವಾದಿತವಾಗಿದೆ. 122 ಸೀಟುಗಳ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಹನಸೆನ್ ನಾಯಕತ್ವದ ಪ್ರಗತಿಪರ ಪ್ರಜಾಸತ್ತಾತ್ಮಕ ಪೀಪಲ್ಸ್ ಪಾರ್ಟಿ 61 ರಿಂದ 67 ರ ವರೆಗೆ ಸೀಟುಗಳನ್ನು ಗೆದ್ದಿದೆ. ಆದರೂ ವಿರೋಧ ಪಕ್ಷಗಳು ಚುನಾವಣೆ ನ್ಯಾಯಯುತವಾಗಿಲ್ಲ, ಆದ್ದರಿಂದ ತಾವು ಹನ್‌ಸೆನರ ಹೊಸ ಸರ್ಕಾರಕ್ಕೆ ಮಾನ್ಯತೆ ನೀಡುವುದಿಲ್ಲ, ನ್ಯಾಶನಲ್ ಅಸೆಂಬ್ಲಿಗೆ ಬಹಿಷ್ಕಾರ ಹಾಕುತ್ತೇವೆ ಎಂದಿವೆ. ಈ ಬೆದರಿಕೆಯನ್ನು ವಿರೋಧ ಪಕ್ಷಗಳು ಜಾರಿಗೊಳಿಸಿದರೆ, ಕೆಂಬೋಡಿಯಾ ಇನ್ನೊಂದು ಸಂವಿಧಾನಿಕ ರಾಜಕೀಯ ಬಿಕ್ಕಟ್ಟನ್ನು ಎದುರಿಸಲಿದೆ.

ಕೆಂಬೋಡಿಯನ್ ಪೀಪಲ್ಸ್ ಪಾರ್ಟಿ ಆ ದೇಶದ ಪ್ರಮುಖ ಪ್ರಗತಿಪರ ಪ್ರಜಾಸತ್ತಾತ್ಮಕ ಪಕ್ಷ. ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ನಡೆದ ಚುನಾವಣೆಯಲ್ಲಿ ರಾಜ ಸಿಂಹನೌಕ್‌ರ ಮಗ ರಣರಿಧ್‌ನ ನಾಯಕತ್ವದ ಫುನ್‌ಸಿನ್‌ಪೆಕ್ ಜತೆ ರಾಷ್ಟ್ರೀಯ ಸರ್ಕಾರ ನಡೆಸಿದ್ದರು. ರಣರಿಧ್ ಪ್ರಥಮ ಪ್ರಧಾನಿ ಯಾದರೆ, ಹನ್‌ಸೆನ್ ದ್ವಿತಿಯ ಪ್ರತಿನಿಧಿ ಯಾಗಿದ್ದರು. ಆದರೆ ಒಂದು ವರ್ಷದ ಹಿಂದೆ ರಣರಿಧ್ ಸೈನ್ಯದ ಒಂದು ವಿಭಾಗದ ಜತೆ ಪಿತೂರಿ ನಡೆಸಿ ಸರ್ಕಾರದ ವಿರುದ್ಧ ದಂಗೆ ಎಬ್ಬಿಸಿ ಹನ್‌ಸೆನ್ ಪದಚ್ಯುತ ಗೊಳಿಸಲು ನಡೆಸಿದ ದಂಗೆ ವಿಫಲ ವಾಗಿತ್ತು ಎಂದು ಇಲ್ಲಿ ಸ್ಮರಿಸಿಕೊಳ್ಳಬಹುದು. ಆ ದಂಗೆ ವಿಫಲವಾಗಿದ್ದರಿಂದ ರಾಜದ್ರೋಹದ ಆಪಾದನೆ ತಪ್ಪಿಸಿಕೊಳ್ಳಲು ರಾಜಕುಮಾರ ರಣರಿಧ್ ದೇಶ ಬಿಟ್ಟು ಓಡಿಹೋಗಿದ್ದ. ಆ ಮೇಲೆ ಅಂತರ್ರಾಷ್ಟ್ರೀಯ ಬೆಂಬಲ ಮತ್ತು ತಂದೆ ರಾಜ ಸಿಂಹನೌಕ್ ರಾಜದ್ರೋಹದ ಆಪಾದನೆಯಲ್ಲಿ ಕ್ಷಮೆ ಕೊಟ್ಟದ್ದರಿಂದ, ರಾಜಕುಮಾರ್ ರಣರಿಧ್ ದೇಶಕ್ಕೆ ಮರಳಿ, ಪುನಃ ಚುನಾವಣೆಯಲ್ಲಿ ಭಾಗವಹಿಸಲು ಸಾಧ್ಯವಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ರಾಜಸೊತ್ತಿಗೆಗೆ ಪರವಾದ ರಣರಿಧ್‌ರ ಪಕ್ಷ ಜನಪ್ರಿಯವಾಗಿರಲಿಲ್ಲ ಎಂದು ಹಲವು ಅಂತರ್ರಾಷ್ಟ್ರೀಯ ವೀಕ್ಷಕರೂ ಹೇಳಿದ್ದಾರೆ. ದೇಶದ ರಾಜಕೀಯವನ್ನು ಅಸ್ಥಿರ ಗೊಳಿಸಿದ್ದು ರಾಷ್ಟ್ರೀಯ ಸರ್ಕಾರ ಜನಪರ ಕಾರ್ಯಕ್ರಮ ನಡೆಸದಂತೆ ಅಡ್ಡಿ ಒಡ್ಡಿದ್ದು ಮಾತ್ರ ರಣರಿಧ್ ಸಾಧನೆ. ಈ ಹಿನ್ನೆಲೆಯಲ್ಲಿ ರಣರಿಧ್ ಪಕ್ಷ ಸೋತಿದ್ದು ಸ್ವಾಭಾವಿಕವೇ. ರಣರಿಧ್ ಆಪಾದಿಸಿದಂತೆ ಚುನಾವಣೆ ಮುಕ್ತ ಮತ್ತು ನ್ಯಾಯಯುತವಾಗಿಲ್ಲ ಎನ್ನುವುದರಲ್ಲಿ ಹುರುಳಿಲ್ಲ.

ಒಬುಚಿ ಜಪಾನಿ ಪ್ರಧಾನಿ

ಜಪಾನಿನ ಪ್ರಧಾನಿಯಾಗಿ ಒಬುಚಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ವಿದೇಶ ಮಂತ್ರಿ ಹಾಗೂ ಆಳುವ ಪಕ್ಷ LDP ಯ ಪ್ರಮುಖ ಗುಂಪಿನ ನಾಯಕರೂ ಆಗಿದ್ದಾರೆ. ಲಿಬರಲ್ ಡೆಮೊಕ್ರಾಟಿಕ್ ಪಕ್ಷದ ಅಧ್ಯಕ್ಷರಾಗಿ ಅವರು ಆಯ್ಕೆಯಾಗಿದ್ದಾರೆ. ಪಾರ್ಲಿಮೆಂಟಿನ ಎರಡು ಸದಸ್ಯರ LDP ಸದಸ್ಯರಲ್ಲಿ (411) ಒಬುಚಿ 225 ಮತಗಳಿಸಿ ಆಯ್ಕೆಯಾಗಿದ್ದಾರೆ. ಕಾಜಿಯಾಮಾ ಮತ್ತು ಕೊಯಿಜುಮಿ ಸಹ ಚುನಾವಣೆಗೆ ಸ್ಪರ್ಧಿಸಿದ್ದು ತಲಾ 102 ಮತ್ತು 84 ಮತಗಳನ್ನು ಗಳಿಸಿದ್ದರು. ಈ ಪ್ರಧಾನಿ ಬದಲಾವಣೆ LDP ಮೇಲ್ಮನೆಯ ಚುನಾವಣೆಗಳಲ್ಲಿ ಬಹುಮತ ಕಳೆದು ಕೊಂಡದ್ದರಿಂದ ಹಿಂದಿನ ಪ್ರಧಾನಿ ರಾಜೀನಾಮೆ ಕೊಟ್ಟಿದ್ದರಿಂದ ಅಗತ್ಯವಾಗಿತ್ತು. ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ದುಡಿಯುವ ಜನರ ಮೇಲೆ ಹೊರಿಸುವ LDP ನೀತಿಯ ವಿರುದ್ಧ ಪ್ರತಿಭಟಿಸಿ ಜನ ಮತ ನೀಡಿದ್ದರು. ಆದರೆ ಜನರ ಪ್ರತಿಭಟನೆಗೆ ಪ್ರಧಾನಿ ಚುನಾವಣೆ ಯಾವುದೇ ಬೆಲೆ ನೀಡಿಲ್ಲ. LDP ಯ ಬೊಕ್ಕ ತುಂಬಿಸುವ ಕೈಗಾರಿಕಾ ದೈತ್ಯರ ಲಾಬಿಗಳ ನಡುವೆ ಸಮತೋಲನವೇ ಈ ಆಯ್ಕೆಯ ಮುಖ್ಯ ನೆಲೆಯಾಗಿತ್ತು. ಎಲ್ಲಾ ಲಾಬ್ಬಿಗಳನ್ನು ಸಂತೃಪ್ತಿಪಡಿಸುವುದು LDP ಯ ಮುಖ್ಯ ಉದ್ದೇಶ. ಇನ್ನು ಎರಡೇ ವರ್ಷದಲ್ಲಿ ಇರುವ ಚುನಾವಣೆಗಳನ್ನು ಎದುರಿಸುವುದು ಹೇಗೆ ಎಂಬುದಷ್ಟೇLDP ಯ ನಾಯಕರ ತಲೆ ನೋವಾಗಿತ್ತು. ಎಲ್ಲಾ ಪ್ರಧಾನಿ ಅಭ್ಯರ್ಥಿಗಳು ಆದಾಯ ತೆರಿಗೆ, ಆಸ್ತಿ ತೆರಿಗೆ ಕಡಿಮೆ ಮಾಡುವ ಬಗ್ಗೆ ಮಾತನಾಡಿದ್ದರು.

ಹಿಂದೆ ರಿಕ್ರೂಟ್ ಹಗರಣದಲ್ಲಿ ಆಪಾದಿತರಾಗಿದ್ದ 71 ವರ್ಷದ ಒಬುಚಿ ಪಾರ್ಲಿಮೆಂಟಿನ ಎರಡೂ ಸದನಗಳಲ್ಲಿ ಬಹುಮತ ಗೆಲ್ಲ ಬೇಕಾಗಿದೆ. ಮೇಲ್ಮನೆಯಲ್ಲಿ LDP ಗೆ ಬಹುಮತ ಇಲ್ಲ. ಅಲ್ಲಿ ಇತರ ಪಕ್ಷಗಳ ಬೆಂಬಲ ಗೆದ್ದುಕೊಳ್ಳಬೇಕಿದೆ. ಕೆಳ ಸದನದಲ್ಲಿ LDP ಯ ಬಂಡುಗಾರ ಯುವ ಸದಸ್ಯರ ಬೆಂಬಲ ಸಿಗುವಂತೆ ಶ್ರಮಿಸಿದರೆ ಮಾತ್ರ ಸರ್ಕಾರ ಉಳಿಯಲು ಸಾಧ್ಯ. ಇಂತಹ ಒಮ್ಮತ್ರ ಸಾಧಿಸುವ ಜಣ್ಮ ಒಬುಚಿಗೆ ಇದೆ ಎಂದು ಆತನ ಆಯ್ಕೆಯ ಮುಖ್ಯ ಕಾರಣ ಎನ್ನಲಾಗಿದೆ.

ಅಂತರ್ರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ ಸ್ಥಾಪನೆಗೆ ವಿಶ್ವಸಂಸ್ಥೆ ನಿರ್ಧಾರ

ಅಮೇರಿಕದ ತೀವ್ರ ವಿರೋಧವಿದ್ದಾಗ್ಯೂ ವಿಶ್ವಸಂಸ್ಥೆಯು ಬಹುಮತದಿಂದ ಅಂತರ್ರಾಷ್ಟ್ರೀಯ ಕ್ರಿಮಿನಲ್ ಕೋರ್ಟ್ ಸ್ಥಾಪಿಸಲು ನಿರ್ಧರಿಸಿದೆ. ಐದುವಾರಗಳ ತೀವ್ರ ಚರ್ಚೆಯ ನಂತರ ರೋಮ್‌ನಲ್ಲಿ ನಡೆದ ಸಮ್ಮೇಳನದಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ನರಮೇಧ, ಯುದ್ಧ ಅಪರಾಧಗಳು, ಚಿತ್ರಹಿಂಸೆ ಮುಂತಾದ ಅಪರಾಧಗಳು ಅಂತರ್ರಾಷ್ಟ್ರೀಯ ವ್ಯಾಪ್ತಿಯಲ್ಲಿದ್ದಾಗ ಈ ಕೋರ್ಟ್ ಅದರ ಬಗ್ಗೆ ವಿಚಾರಣೆ ಮಾಡಿ ತೀರ್ಪು ಕೊಡುವುದು.


ಅಮೇರಿಕ ಮೊದಲಿನಿಂದಲೂ ಈ ಕೋರ್ಟನ್ನು ವಿರೋಧಿಸುತ್ತಾ ಅಥವಾ ಅದರ ಅಧಿಕಾರವನ್ನು ಮೊಟಕುಗೊಳಿಸಲು ಅಥವಾ ಅದನ್ನು ಭದ್ರತಾ ಸಮಿತಿಯ ನಿಯಂತ್ರಣದಲ್ಲಿಡುವ ಶತಪ್ರಯತ್ನ ಮಾಡಿದರೂ ಎಲ್ಲಾ ವಿಫಲವಾದವು. ಕೋರ್ಟು ಸ್ಥಾಪಿಸುವ ಬಗ್ಗೆ ನಡೆದ ಮತದಾನದಲ್ಲಿ 120 ದೇಶಗಳು ಕೋರ್ಟ್ ಪರವಾಗಿ ಮತದಾನ ಮಾಡಿದರೆ, ಅಮೇರಿಕಾ ಸೇರಿದಂತೆ ಆರು ದೇಶಗಳು ಅವರ ವಿರುದ್ಧ ಮತ ನೀಡಿದವು. ಭಾರತ ಸೇರಿದಂತೆ 21 ದೇಶಗಳು ಮತದಾನದಲ್ಲಿ ಭಾಗವಹಿಸಿಲ್ಲ. ಈ ಕೋರ್ಟಿನ ಸುಪರ್ದಿಗೆ ಬರುವ ಅಪರಾಧಗಳು ಅದರ ಅಧಿಕಾರದ ಮೇಲೆ ಇತಿಮಿತಿಗಳಿದ್ದರೂ, ಇದೊಂದು ಚಾರಿತ್ರಿಕ ನಿರ್ಣಯವೆನ್ನಬಹುದು. ಸುಮಾರು 800 ಮಾನವ ಹಕ್ಕು ಗುಂಪುಗಳು ಇಂತಹ ಒಂದು ಒಪ್ಪಂದಕ್ಕಾಗಿ ಪ್ರಚಾರ ನಡೆಸಿದ್ದವು.

ತಮಾಷೆಯೆಂದರೆ ಯುಗೋಸ್ಲಾವಿಯಾ, ರ್‍ವಾಂಡಾದಲ್ಲಿ ಯುದ್ಧ ಅಪರಾಧಗಳ ಅಂತರ್ರಾಷ್ಟ್ರೀಯ ಕ್ರಿಮಿನಲ್ ವಿಚಾರಣೆ ನಡೆಸುವುದರ ಬಗ್ಗೆ ಒತ್ತುಕೊಡುತ್ತಿದ್ದ ಅಮೇರಿಕಾ ಅಂತಹುದೇ ಶಾಶ್ವತ ವ್ಯವಸ್ಥೆಯನ್ನು ವಿರೋಧಿಸಿದ್ದು. ಅದಕ್ಕೆ ಕಾರಣ ಈ ಹೊಸ ಕೋರ್ಟಿಗೆ ಯಾರೂ ದೂರು ಕೊಡಬಹುದು ಹಾಗೂ ಯಾವುದೇ ದೇಶದವರ ವಿರುದ್ಧ ದೂರು ಕೊಡಬಹುದು. ಯಾರದೂ ಯಜಮಾನಿಕೆ ಇಲ್ಲ. ಯಾರಿಗೂ ವೀಟೋ ಪವರ್ ಇಲ್ಲ. ಅಂತರ್ರಾಷ್ಟ್ರೀಯ ಶಾಂತಿಪಾಲನಾ ಕಾರ್ಯದಲ್ಲಿ ತೊಡಗಿರುವುದರಿಂದ (ಎಲ್ಲರನ್ನು ವಿನಾಕಾರಣ ಬೆದರಿಸುವ ಪೋಲೀಸ್ ಕೆಲಸ ಮಾಡುವುದರಿಂದ ಎಂದು ಓದಿಕೊಳ್ಳಿ) ತನ್ನ ಸೈನ್ಯದ ಸಿಬ್ಬಂದಿ ವಿರುದ್ಧ ಸುಳ್ಳು ಮೊಕದ್ದಮೆಗಳು ಬರಬಹುದು ಎಂದು ಅಮೇರಿಕದ ಆತಂಕ. ಅಮೇರಿಕದ ಸೈನ್ಯದ ಕಾರ್ಯಾಚರಣೆಗಳು ನಿಜವಾಗಿಯೂ ಈ ಕ್ರಿಮಿನಲ್ ಕೋರ್ಟಿನ ವಿಚಾರಣೆಗೆ ಯೋಗ್ಯವಾದವು ಎಂಬುದು ನಿಜಸಂಗತಿ. ಉದಾಹರಣೆಗೆ ಇರಾಕ್ ಮೇಲೆ 1991 ರ ಕೊಲ್ಲಿ ಯುದ್ಧ, ಇತ್ತೀಚಿನ ಆಕ್ರಮಣಗಳನ್ನು ಇರಾಕ್ ಈ ಕೋರ್ಟಿಗೆ ಎಳೆಯಬಹುದು ಎಂದು ಅಮೇರಿಕಾಕ್ಕೆ ಭಯ.

ಮೊದಲಿಗೆ ಅಮೇರಿಕದ ನಾಟೋದ ಯುರೋಪಿಯನ್ ಸಹಚರರು ಅದರ ನಿಲುವನ್ನು ಬೆಂಬಲಿಸಿದರು. ಕೊನೆಗೆ ಒಪ್ಪಂದದ ಪರ ಮತದಾನ ಮಾಡಿ ಅಮೇರಿಕಕ್ಕೆ ಮುಖಭಂಗ ಆಗುವಂತೆ ಮಾಡಿದವು. ಈ ಒಪ್ಪಂದಕ್ಕೆ ಸಹಿ ಹಾಕಿದ ದೇಶದ ನಾಗರಿಕರು, ಈ ಕೋರ್ಟಿಗೆ ದೂರು ತರದಂತೆ ಅಮೇರಿಕ ತಂದ ತಿದ್ದುಪಡಿ ಸಹ ಅವಮಾನಕಾರಿ ಪ್ರಮಾಣದಲ್ಲಿ (115 ವಿರುದ್ಧ, 17 ಪರ) ತಿರಸ್ಕರಿಸಲ್ಪಟ್ಟಿತು. ಅಮೇರಿಕ ತನ್ನ ಎಂದಿನ ಉದ್ಧಟತನ ಪ್ರದರ್ಶಿಸಿ ತಾನು ಆ ಕೋರ್ಟಿಗೆ ಮಾನ್ಯತೆ ಕೊಡದೆ ಹೋಗಬಹುದು, ಭದ್ರತಾ ಸಮಿತಿಯ ವ್ಯಾಪ್ತಿಗೆ ಬರುವ ವಿಚಾರಗಳನ್ನು ಈ ಕೋರ್ಟಿಗೆ ತೆಗೆದುಕೊಂಡು ಹೋಗುವುದನ್ನು ಒಪ್ಪುವುದಿಲ್ಲ ಎಂದು ಹೇಳಿದೆ. ಅಪರಾಧಿ, ವಕೀಲ, ನ್ಯಾಯಾಧೀಶ ಪೋಲಿಸ್, ಜೈಲರ್-ಎಲ್ಲವೂ ಆಗಬಯಸುವ ಅಮೇರಿಕಕ್ಕೆ ಈ ನಿರ್ಧಾರ ತೀರಾ ಮುಜುಗರ ತಂದಿದೆ. ಭಾರತ ಈ ಕೋರ್ಟಿನ ವ್ಯಾಪ್ತಿಗೆ ಯುದ್ಧದಲ್ಲಿ ಸಾಮೂಹಿಕ ಹತ್ಯೆಯ ಶಸ್ತ್ರಾಸ್ತ್ರಗಳನ್ನು (ಅಣು ರಾಸಾಯನಿಕ, ಜೈವಿಕ) ಬಳಸುವುದನ್ನು ಅಪರಾಧಗಳ ಪತ್ತೆಗೆ ಸೇರಿಸಬೇಕೆಂದು ಒತ್ತಾಯಿಸಿತ್ತು. ಕೋರ್ಟಿನ ಮೂಲಭೂತ ಉದ್ದೇಶಕ್ಕೆ ವಿರೋಧ ಇರಲಿಲ್ಲ. ಆದರೆ ಈ ತಿದ್ದುಪಡಿ ತಿರಸ್ಕೃತವಾದ್ದರಿಂದ ಭಾರತ ಮತದಾನದಲ್ಲಿ ಭಾಗವಹಿಸದಿರಲು ನಿರ್ಧರಿಸಿತು.

ನೆದರ್‌ಲ್ಯಾಂಡ್ಸ್‌ನ ಹೇಗ್ ಪಟ್ಟಣದಲ್ಲಿ ಸ್ಥಾಪಿಸಲಾಗುವ ಈ ಕೋರ್ಟು 18 ನ್ಯಾಯಾಧಿಶರು ಹಾಗೂ ಪ್ರಾಸಿಕ್ಯೂಟರ್‌ಗಳನ್ನು ಹೊಂದಿರುತ್ತದೆ.

ಬಾಂಗ್ಲಾ ದೇಶದ ಸರಕಾರ ಅಮೇರಿಕಾದೊಡನೆ ಮಿಲಿಟರಿ ಸಹಕಾರ ಒಪ್ಪಂದ ಮಾಡಿಕೊಳ್ಳುವುದನ್ನು ವಿರೋಧಿಸಿ ಢಾಕಾದಲ್ಲಿ ಮಹಿಳೆಯರ ಮತ ಪ್ರದರ್ಶನ



"ಪರಿಶೀಲಿಸಿದ ನಂತರ ಪಡಿತರ ಚೀಟಿ ನೀಡುವ ಭರವಸೆ"

ಜಿಲ್ಲಾಧಿಕಾರಿಗಳ ಕಛೇರಿಯ ಬಳಿ ಸಮಾವೇಶಗೊಂಡಿದ್ದ ನೂರಾರು ಬೀಡಿ ಕುಲಮೆ ಮತ್ತಿತರ ಕಾರ್ಮಿಕರಿಂದ ಪಡಿತರ ಚೀಟಿಗೆ ಅರ್ಜಿ ಸ್ವೀಕರಿಸಿದ ಜಿಲ್ಲಾ ಕೇಂದ್ರ ಸ್ಥಾನಿಕ ಅಧಿಕಾರಿಯಾದ ಸುಬ್ಬಾರಾವ್‌ರವರು ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಿಲ್ಲಾಧಿಕಾರಿಗಳು ಅರ್ಜಿಗಳನ್ನು ಪರಿಶೀಲಿಸಿ, ಪಡಿತರ ಚೀಟಿ ರಹಿತ ಕಾರ್ಮಿಕರಿಗೆಲ್ಲ ಹಸಿರು ಪಡಿತರ ಚೀಟಿ ನೀಡುವುದಾಗಿ ಭರವಸೆ ನೀಡಿದರು.

ತುಮಕೂರು ಜಿಲ್ಲಾ ಬೀಡಿ ಕಾರ್ಮಿಕ ಸಂಘದ ವತಿಯಿಂದ ಸುಮಾರು 400 ಕ್ಕೂ ಹೆಚ್ಚು ಕಾರ್ಮಿಕರು ಬಡತನ ರೇಖೆಕ್ಕಿಂತ ಕೆಳಮಟ್ಟದಲ್ಲಿ ಬದುಕುತ್ತಿರುವ ಎಲ್ಲಾ ಕಾರ್ಮಿಕರಿಗೂ ಹಸಿರು ಪಡಿತರ ಚೀಟಿ ನೀಡಬೇಕೆಂದು ಒತ್ತಾಯಿಸಿ, ಪಡಿತರ ಚೀಟಿ ರಹಿತ ನಾಗರೀಕರೆಲ್ಲರಿಗೂ ಪಡಿತರ ಚೀಟಿಯನ್ನು ನೀಡುವಂತೆ ಒತ್ತಾಯಿಸಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

"ಸಾಮೂಹಿಕ ಸಂಘಟನೆಗಳ ಪ್ರತಿಭಟನಾ ಮೆರವಣಿಗೆ"

ಕೇಂದ್ರ ಬಿಜೆಪಿ ಮೈತ್ರಿ ಸರ್ಕಾರದ ಜನ-ವಿರೋಧಿ ರೈಲ್ವೆ ಬಜೆಟನ್ನು ವಿರೋಧಿಸಿ, ಸ್ವದೇಶಿ ಜಪದೊಂದಿಗೆ ಆಡಳಿತ ಹಿಡಿದು ಬಹುರಾಷ್ಟ್ರೀಯ ಕಂಪನಿಗಳಿಗೆ ಹಸೆಮಣೆ ಹಾಕುತ್ತಿರುವ, ಆರ್ಥಿಕ ನೀತಿಗಳಶನ್ನು ವಿರೋಧಿಸಿ, ಎಲ್.ಐ.ಸಿ ಖಾಸಗೀಕರಣ ನೀತಿ ಖಂಡಿಸಿ ಜಾಗತೀಕರಣ ಮತ್ತು ಉದಾರೀಕರಣದ ವಿರುದ್ಧ 54 ಸಂಘಟನೆಗಳಿರುವ ಸಾಮೂಹಿಕ ಸಂಘಟನೆಗಳ ವೇದಿಕೆಯ ರಾಷ್ಟ್ರ ಸಮಿತಿ ಕರೆಯಂತೆ ದೇಶಾದ್ಯಂತ ನಡೆದ ಪ್ರತಿಭಟನೆಯ ಭಾಗವಾಗಿ ತುಮಕೂರು ಜಿಲ್ಲಾ ಸಾಮೂಹಿಕ ಸಂಘಟನೆಯ ವೇದಿಕೆಯ ಸುಮಾರು 500 ಕಾರ್ಮಿಕರು ಜುಲೈ 14 ರಂದು ನಗರದ ಟೌನ್ ಹಾಲ್‌ನಿಂದ ಪ್ರತಿಭಟನಾ ಮೆರವಣಿಗೆ ಹೊರಟು ಜಿಲ್ಲಾಧಿಕಾರಿಗಳ ಕಛೇರಿ ತಲುಪಿದರು.

ಸಭೆಯಲ್ಲಿ ಸಿಐಟಿಯುನ ರಾಜ್ಯ ಉಪಾಧ್ಯಕ್ಷರಾದ ಮಹಮ್ಮದ್ ದಸ್ತಗೀರ್‌ರವರು ಮಾತನಾಡುತ್ತ ಕೇಂದ್ರ ಸರ್ಕಾರವು ಬಡತನ ರೇಖೆಕ್ಕಿಂತ ಕೆಳಗೆ ಬದುಕುತ್ತಿರುವ ಜನರಿಗೆ ಅರ್ಧ ಬೆಲೆಯಲ್ಲಿ ಅಗತ್ಯ ಪಡಿತರ ಪದಾರ್ಥಗಳನ್ನು ನೀಡುವಂತೆ ಆಗ್ರಹಿಸಿದರು.

ಸಾಮೂಹಿಕ ಸಂಘಟನೆಗಳ ಜಿಲ್ಲಾ ಸಂಚಾಲಕರಾದ ಎಲ್.ಐ.ಸಿ.ಯ ಜಿ.ಕೆ ಗಂಗಾಧರರವರು ಮಾತನಾಡುತ್ತ ಸಾರ್ವಜನಿಕ ಲಾಭದಾಯಕ ಉದ್ದಿಮೆಯಾದ ಎಲ್.ಐ.ಸಿ.ನ್ನು ಖಾಸಗೀಕರಣ ಮಾಡುವುದನ್ನು ವಿರೋಧಿಸಬೇಕೆಂದು ಕರೆಯಿತ್ತರು.

ತುಮಕೂರು ವಾರ್ತಾಪತ್ರ

ಅಂಚೆ ನೌಕರ ಸಂಘಟನೆಯ ಮುಖಂಡರಾದ ಹನುಮಂತರಾಯಪ್ಪ ಮಾತನಾಡಿ, ಸರ್ಕಾರ ಜನವಿರೋಧಿ ನೀತಿಗಳನ್ನು ಬಿಟ್ಟು ಕಾರ್ಮಿಕರ ಪರ ಜನಪರ ನೀತಿಗಳನ್ನು ಜಾರಿಗೊಳಿಸುವಂತೆ ಒತ್ತಾಯಿಸಿದರು. ಆಟೋ ಚಾಲಕ ಸಂಘದ ಮುಖಂಡರಾದ ಎಂ.ಎನ್. ಚೆಲುವರಾಜ್ ಎ.ಐ.ಟಿ.ಯು.ಸಿ ನ ಕೆ.ಎಂ. ಶಿವಕುಮಾರ್, ಎಸ್.ಎಫ್.ಐ ನ ಜಿಲ್ಲಾಧ್ಯಕ್ಷ ಎನ್.ಕೆ. ಸುಬ್ರಹ್ಮಣ್ಯ, ಜಿಲ್ಲಾ ಬೀಡಿ ಕಾರ್ಮಿಕ ಸಂಘಟನೆಯ ಕಾರ್ಯದರ್ಶಿ ಸೈಯದ್ ಮುಜೀಬ್ ಹಾಗೂ ಅಂಗನವಾಡಿ ಸಂಘಟನೆಯ ಮುಖಂಡರಾದ ಅಲ್ಲಾಬಕಾಷ್ ಮತ್ತಿತರರು ಭಾಗವಹಿಸಿ ಸಭೀಕರನ್ನು ಉದ್ದೇಶಿಸಿ ಮಾತನಾಡಿದರು.

ನಾಗರಿಕರ ಸೌಲಭ್ಯಕ್ಕಾಗಿ ಒತ್ತಾಯಿಸಿ ನಗರಸಭೆಗೆ ಮುತ್ತಿಗೆ

ನಗರಸಭಾ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿ ಕನಿಷ್ಟ ನಾಗರಿಕ ಸೌಲಭ್ಯಗಳಾದ ಚರಂಡಿ ವ್ಯವಸ್ಥೆ ಮತ್ತು ಬೀದಿ ದೀಪಗಳ ವ್ಯವಸ್ಥೆಗಳು ಇಲ್ಲದೇ ಸಾಕಷ್ಟು ತೊಂದರೆವುಂಟಾಗಿದೆ ಎಂದು ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘ ಎಸ್.ಎಫ್.ಐ, ಡಿ.ವೈ.ಎಫ್.ಐ ಹಾಗೂ ಸಿ.ಐ.ಟಿ.ಯು ಮತ್ತಿತರ ಸಂಘಟನೆಯಡಿಯಲ್ಲಿ -ಜುಲೈ 12 ರಂದು ನಗರಸಭೆ ಎದುರು ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು.ನ ರಾಜ್ಯ ಉಪಾಧ್ಯಕ್ಷರಾದ ಮಹಮದ್ ದಸ್ತಗೀರ್‌ರವರು ನಗರ ಸಭೆಯು ಅಗತ್ಯವಿರುವ ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು, ನಗರದ ಸ್ವಚ್ಛತೆಗೆ ಮುಂದಾಗಬೇಕೆಂದು ಒತ್ತಾಯಿಸಿದರು. ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡುತ್ತ ನಗರ ಸಭೆಯು ಶೀಘ್ರದಲ್ಲಿಯೇ ಕೊಳಚೆ ಪ್ರದೇಶಗಳಿಗೆ ಕನಿಷ್ಟ ಸೌಲಭ್ಯಗಳನ್ನು ಪೂರೈಸಬೇಕೆಂದು ಆಗ್ರಹಿಸಿದರು.

ಕಳೆದ ಒಂದು ವರ್ಷದ ಹಿಂದೆ ಸಿ.ಪಿ.ಐ(ಎಂ), ಸಿ.ಐ.ಟಿ.ಯು.ನ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಿಂದಾಗಿ ನಗರ ಸಭಾ ಅಧ್ಯಕ್ಷರು ಮತ್ತು ಆಯುಕ್ತರು ವಿವಿಧ ಬಡಾವಣೆಗಳಿಗೆ ಭೇಟಿ ನೀಡಿ, ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳುವ ಭರವಸೆ ನೀಡಿದ್ದರು. ಆದರೂ ಇದುವರೆವಿಗೂ ಯಾವುದೇ ಪ್ರಗತಿ ಆಗಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸಾಮೂಹಿಕ ಸಂಘಟನೆಯ ಸಂಚಾಲಕರಾದ ಜಿ.ಕೆ ಗಂಗಾಧರ್‌ರವರು ಮನವಿ ಪತ್ರ ನೀಡಿದರು. ಮನವಿ ಪತ್ರ ಸ್ವೀಕರಿಸಿದ ನಗರಸಭೆಯ ಉಪಾಧ್ಯಕ್ಷರಾದ ಪ್ರಮೀಳಾ ನಾಗೇಶ್‌ರವರು ಮಾತನಾಡಿ ತಾವು ಹೊಸ ಆಯುಕ್ತರೊಂದಿಗೆ ಚರ್ಚಿಸಿ ಸಮಸ್ಯೆ ಇತ್ಯರ್ಥ ಪಡಿಸುವುದಾಗಿ ಭರವಸೆ ನೀಡಿದರು.

ಈ ಹೋರಾಟದಲ್ಲಿ ಆಟೋ ಚಾಲಕರ ಮುಖಂಡರಾದ ಅಪ್ಪಾಜಿ, ಸಿ.ಪಿ.ಐ.(ಎಂ) ನ ಅಮಾನುಲ್ಲಾ, ಎಸ್.ಎಫ್.ಐ. ನ ಡಿ.ಬಿ ನಾಗಭೂಷಣ, ರಮೇಶ್ ಡಿ.ವೈ.ಎಫ್.ಐ ನ ಅಶ್ವತ್ಥಯ್ಯ, ಅಫ್ಸರ್ ಎ.ಐ.ಟಿ.ಯು.ಸಿ.ನ ಶಿವಕುಮಾರ್, ಸಿ.ಐ.ಟಿ.ಯು.ನ ಎಂ.ಎನ್.ಅಹಮದಿ ಮತ್ತಿತರರು ಭಾಗವಹಿಸಿದ್ದರು.

ಜೀವಂತ ಚರ್ಚೆ ಚೈತನ್ಯಶಾಲಿ ವಿಚಾರಸಂಕಿರಣ

ರೈತ ಮತ್ತು ಕೃಷಿಕೂಲಿಕಾರರ ಸಂಘಟನೆಗಳ ಕಾರ್ಯಕರ್ತರು ಮತ್ತು ಕೃಷಿರಂಗದಲ್ಲಿ ಅಧ್ಯಯನ ನಡೆಸುತ್ತಿರುವ ಪ್ರಮುಖ ಬುದ್ಧಿಜೀವಿಗಳ ನಡುವೆ ಜೀವಂತ ಚರ್ಚೆ ಹಾಗೂ ಚೈತನ್ಯಶಾಲೀ ವಿಚಾರ ವಿನಿಮಯ ನವ ದೆಹಲಿಯಲ್ಲಿ ಜುಲೈ 19 ಹಾಗೂ 20ರಂದು ನಡೆದ 'ಭಾರತದಲ್ಲಿ ಕೃಷಿ ಸನ್ನಿವೇಶ' ಕುರಿತ ವಿಚಾರ ಸಂಕಿರಣದ ಪ್ರಮುಖ ಲಕ್ಷಣವಾಗಿತ್ತು. ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕೃಷಿಕೂಲಿಕಾರರ ಸಂಘ ಇದನ್ನು ಏರ್ಪಡಿಸಿದ್ದವು.

ದೇಶದ ವಿವಿಧ ಸ್ಥಳಗಳಿಂದ ಬಂದ 125 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ನಾಲ್ಕು ಅಧಿವೇಶನಗಳಲ್ಲಿ ಈ ವಿಚಾರ ಸಂಕಿರಣ ನಡೆಯಿತು. ಸುವಿಖ್ಯಾತ ಆರ್ಥಿಕ ತಜ್ಞರು ಹಾಗೂ ಕೃಷಿ ರಂಗದಲ್ಲಿನ ಪರಿಣಿತರು ಪ್ರಸ್ತುತ ಸನ್ನಿವೇಶದ ಬಗ್ಗೆ ವಿವರವಾದ ಪ್ರಬಂಧಗಳನ್ನು ಮಂಡಿಸಿದರು. ನಂತರ ಅದರ ಮೇಲೆ ಪ್ರತಿನಿಧಿಗಳು ಪ್ರಶ್ನೆ ಕೇಳಿದರು, ಚರ್ಚೆ ನಡೆಸಿದರು.

ಜುಲೈ 19ರ ಮೊದಲ ಅಧಿವೇಶನದಲ್ಲಿ ಕೃಷಿ ಧೋರಣೆ ಹಾಗು ಹೊಸ ಆರ್ಥಿಕ ಧೋರಣೆಯಡಿ ಏನಾಯ್ತು ಎಂಬ ಬಗ್ಗೆ ಚರ್ಚೆ ನಡೆಯಿತು. ಪ್ರಮುಖ ಭಾಷಣಕಾರರು - ಪ್ರೊ ಪ್ರಭಾತ್ ಪಟ್ನಾಯಕ್, ಪ್ರೊ ವಿ.ಎಸ್.ವ್ಯಾಸ್ ಹಾಗೂ ಡಾ|| ಅಶೋಕ್ ಮಿತ್ರ. ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ಹಾಗೂ ಎಐಕೆಎಸ್ ಜಂಟಿ ಕಾರ್ಯದರ್ಶಿ ಪಿ.ಕೆ. ಟಂಡನ್ ಕೂಡಾ ಮಾತನಾಡಿದರು. ಬಿನೋಯ್ ಕೃಷ್ಣ ಚೌಧರಿ ಈ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು.

ಮಧ್ಯಾಹ್ನದ ಅಧಿವೇಶನ ಬಿನೋಯ್ ಕೊನಾರ್ ಅಧ್ಯಕ್ಷತೆಯಲ್ಲಿ ನಡೆಯಿತು. ಇದರಲ್ಲಿ ಬೆಲೆಗಳು ಹಾಗೂ ಕೃಷಿ ಲಾಗುವಾಡುಗಳ ಪೂರೈಕೆ ಹಾಗೂ ಉತ್ಪನ್ನಗಳ ಬಗ್ಗೆ ಚರ್ಚೆ ನಡೆಯಿತು. ಪ್ರೊ ವೈ.ಕೆ. ಅಲಗ್, ಪ್ರೊ. ಜಿ.ಎಸ್. ಭಲ್ಲಾ, ಪ್ರೊ ಅಭಿಜಿತ್ ಸೇನ್, ಪ್ರೊ ಶೈಲಾ ಭಲ್ಲಾ ಹಾಗೂ ಸುನೀತ್ ಚೋಪ್ರಾ ಮಾತನಾಡಿದರು.

ಎರಡನೇ ದಿನ ಬೆಳಿಗ್ಗೆ ಕೃಷಿಯು ಮೇಲೆ ಜಾಗತೀಕರಣದ ಪ್ರಭಾವ ಕುರಿತು ಪ್ರೊ ಉತ್ಸಾ ಪಟ್ನಾಯಕ್ ಒಂದು ತಿಳಿಯಾದ ವಿವರಣೆ ನೀಡಿದರು. 'ವ್ಯಾಪಾರ ಸಂಬಂಧಿ ಪ್ರಶ್ನೆಗಳು ಮತ್ತು ಕೃಷಿಯ ಮೇಲೆ ಅವುಗಳ ಪ್ರಭಾವ' ಈ ಅಧಿವೇಶನದ ಚರ್ಚೆಯ ವಿಷಯವಾಗಿತ್ತು. ಇದರಲ್ಲಿ ಮಾತನಾಡಿದ ಇತರ ಭಾಷಣಕಾರರೆಂದರೆ ಪ್ರೊ ಮುಚ್ಕುಂದ್ ದುಬೆ. ಪಿ.ಕೆ. ಟಂಡನ್ ಅಧ್ಯಕ್ಷತೆ ವಹಿಸಿದ್ದರು.

ಭಾರತದಲ್ಲಿ ಕೃಷಿ ಸನ್ನಿವೇಶ

ಕೊನೆಯ ಅಧಿವೇಶನದಲ್ಲಿ ಒಂದು ಕ್ಲಿಷ್ಟ ಪ್ರಶ್ನೆಯ ಬಗ್ಗೆ ವಿವರವಾದ ಚರ್ಚೆ ನಡೆಯಿತು. ಸಸ್ಯ ಪ್ರಕಾರಗಳ ಪೇಟೆಂಟ್ ಹಾಗೂ ಭಾರತ ಮತ್ತು ಇತರೆಡೆ ಕೃಷಿ ಸಮುದಾಯದ ಮೇಲೆ ಇದರ ಅಪಾಯಕಾರಿ ಪರಿಣಾಮಗಳು - ಚರ್ಚಾ ವಿಷಯ. ಪೇಟೆಂಟ್‌ಗಳ ಅರ್ಥವೇನು, ಬಹುರಾಷ್ಟ್ರೀಯ ಕಂಪನಿಗಳು ಹೇಗೆ ಬಹುಕಾಲದಿಂದ ಬಳಕೆಯಲ್ಲಿರುವ ಕೃಷಿ ವಿಧಾನಗಳನ್ನು, ಉತ್ಪನ್ನಗಳನ್ನು ಪೇಟೆಂಟ್ ಮಾಡಿ ಗುತ್ತೇದಾರಿಕೆ ನಡೆಸಲು ಹೊರಟಿದ್ದಾರೆ, ಹೇಗೆ ಇಡೀ ವಿಶ್ವ ವ್ಯಾಪಾರ ಸಂಘಟನೆಯ ವ್ಯವಸ್ಥೆ ಬಹುರಾಷ್ಟ್ರೀಯ ಕಂಪನಿಗಳ ಹಾಗೂ ಪಾಶ್ಚಿಮಾತ್ಯ ದೇಶಗಳ ಹಿತಾಸಕ್ತಿಗಳನ್ನು ರಕ್ಷಿಸಲು ರೂಪುಗೊಂಡಿದೆ ಎಂಬುದನ್ನು ಡಾ|| ವಿಪ್ಲವ್ ದಾಸ್ ಗುಪ್ತಾ ವಿವರಿಸಿದರು. ಡಾ|| ಅರುಣ್ ಘೋಷ್ ಈ ವಿಷಯದ ಬಗ್ಗೆ ಮಾತನಾಡಿದರು. ಡಾ|. ವಂದನಾಶಿವ ಭಾಗವಹಿಸಲಾಗದ್ದರಿಂದ ಅವರ ಪ್ರಬಂಧವನ್ನು ಓದಲಾಯಿತು. ಹನ್ನನ್ ಮೊಲ್ಲಾ ಈ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು.

(ಐ.ಎನ್.ಎನ್.)

ನಗು ನಗುತ ಬಾಳೋಣ ಬನ್ನಿ

ನನಗೆ ಇಲ್ಲ...
ನಡೆದಾಡುವ ಕಾಲುಗಳು,
ದುಡಿವ ಕೈಗಳು,
ಕೇಳುವ ಕಿವಿಗಳು,
ನೋಡುವ ನೇತ್ರಗಳು.
ಆದರೂ...
ನಾನೊಬ್ಬ ಮನುಷ್ಯ.

ನನಗಿದೆ
ಸ್ವಾಭಿಮಾನದ ಮೆದುಳು
ಸದೃಢ ಮನಸು
ದಣಿವರಿಯದ ಛಲ

ಆದರೆ, ನೀವು
ಆಗದವರು-ನೀಗದವರು
ಮೈ ಮುರಿಯೇ ದುಡಿಯದವರು
ಒಂಟಿ ನಡೆಯುವ ಪಯಣಿಗರೆಂದು
ದೂಷಿಸದಿರಿ.

ಕವಡೆ ಕಾಸಿನ ಕಿಮ್ಮತ್ತುಕಟ್ಟಿ
ಲೇವಡಿ ಮಾಡುವ ನಿರ್ದಯಿಗಳೇ
ಹಣೆಬರವೆಂದು ಹಳಿಯದಿರಿ
ಕಣ್ಣೀರ ಕೋಡಿ ಹರಿಸಿದಿರಿ

ನೆನಪಿಡಿ
ನಮ್ಮ ಬಯಕೆಗಳು
ಬಿಸಿಲಲ್ಲಿ ಬತ್ತುವುದಿಲ್ಲ,
ನಿರಾಶೆಯ ಕಡಲಲ್ಲಿ ಕರಗುವುದಿಲ್ಲ
ನಮ್ಮ ಬಯಕೆಗಳಿಗೆ
ಬರವಿಲ್ಲ ಭುವಿಯೊಳಗೆ.

ಶ್ರಮ ಶಕ್ತಿಯ ಸಾಕಾರಗೊಳಿಸುತ್ತ
ಬದುಕ ಬವಣೆ ಬಯಲು ಮಾಡುತ್ತ,
ನಮ್ಮೊಳಗಿನ ಅಂತಃ ಶಕ್ತಿಯ ಒಗ್ಗೂಡಿಸಿ
ಬದುಕ ಬಲ್ಲೆವು ನಾವು
ನಿಮ್ಮಂತೆ ಎಲ್ಲರಂತೆ

ಒಡಲ ಹೊರೆಯ ಮರೆಯಲೆಂದು
ಸ್ವಾಭಿಮಾನದ ಸ್ನೇಹಕ್ಕೆ ಸೇತುವೆ ಕಟ್ಟಿ
ಮನುಜರ ಮುತ್ತಿನ ಹಾರದೊಳಗೊಂದು
ಮುತ್ತಾಗಿ ಮೆರೆಯೋಣ ಬನ್ನಿ
ಅಸಹಾಯಕತೆಯ ಮರೆಯೋಣ ಬನ್ನಿ
ಎಲ್ಲರಂತೆ ನಗುತ ಬಾಳೋಣ ಬನ್ನಿ.

- ಕೋದಂಡರಾಮಯ್ಯ

ಎನ್.ಟಿ.ಸಿ. ಪುನಶ್ಚೇತನ

ನಿಮ್ಮದೇ ಚುನಾವಣೆ ಭರವಸೆಯನ್ನು ಈಡೇರಿಸುವುದಿಲ್ಲವೇ?

ಪ್ರಧಾನಿಗಳಿಗೆ ಕಾರ್ಮಿಕ ನಿಯೋಗದ ಪ್ರಶ್ನೆ

ಜುಲೈ 15ರಂದು ದೇಶದ ವಿವಿಧೆಡೆಗಳಿಂದ ಬಂದ ಸಾವಿರಾರು ಎನ್.ಟಿ.ಸಿ. ಕಾರ್ಮಿಕರು ಮತ ಪ್ರದರ್ಶನ ನಡೆಸಿದ್ದು, ಮರುದಿನ ಜುಲೈ 16ರಂದು ಎನ್.ಟಿ.ಸಿ. ಗಿರಣಿಗಳ ಪುನಶ್ಚೇತನ ಕುರಿತಂತೆ ಚರ್ಚಿಸಲು ಒಂದು ಜಂಟಿ ಕಾರ್ಮಿಕ ಸಂಘಗಳ ನಿಯೋಗ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿತು.

ಬಿ.ಜೆ.ಪಿ. ಅಧಿಕಾರಕ್ಕೆ ಬಂದರೆ ಎನ್.ಟಿ.ಸಿ. ಗಿರಣಿಗಳನ್ನು ಪುನಶ್ಚೇತನಗೊಳಿಸುವುದಾಗಿ ಜನವರಿ 23, 1998ರಂದು ಕಾನ್ಪುರದ ಫೂಲ್‌ಬಾಗ್ ಚುನಾವಣಾ ಭಾಷಣದಲ್ಲಿ ವಾಜಪೇಯಿಯವರು ಕಾರ್ಮಿಕರಿಗೆ ಮತ್ತು ಜನತೆಗೆ ವಚನ ನೀಡಿದ್ದನ್ನು ನಿಯೋಗ ನೆನಪಿಸಿತು. ಪ್ರಧಾನಿಯವರ ಚುನಾವಣಾ ಭಾಷಣದ ಪತ್ರಿಕಾ ವರದಿಯ ಪ್ರತಿಯೊಂದನ್ನು ಅವರಿಗೆ ನೀಡಲಾಯಿತು.

ನಿಯೋಗ ಪ್ರಧಾನಿಗಳ ಗಮನಕ್ಕೆ ತಂದ ಇನ್ನೊಂದು ಸಂಗತಿಯೆಂದರೆ ಮಹಾರಾಷ್ಟ್ರ ಸರ್ಕಾರ ಮುಂಬೈಯಲ್ಲಿನ ಎನ್.ಟಿ.ಸಿ. ಗಿರಣಿಗಳ ಹೆಚ್ಚುವರಿ ಜಮೀನನ್ನು ಮಾರಲು ಅನುಮತಿ ನೀಡುತ್ತಿಲ್ಲ ಎಂಬುದು. ಇದರಿಂದ ಗರಿಷ್ಟ ಹಣ ಪಡೆದು ಎನ್.ಟಿ.ಸಿ. ಗಿರಣಿಗಳ ಆಧುನೀಕರಣ ಕೆಲಸವನ್ನು ಕೈಗೆತ್ತಿಕೊಳ್ಳಬಹುದಿತ್ತು. ಕೇಂದ್ರದಲ್ಲಿ ಹಾಗೂ ಮಹಾರಾಷ್ಟ್ರ ರಾಜ್ಯದಲ್ಲಿ ಅದೇ ಪಕ್ಷದ ಸರಕಾರಗಳಿರುವಾಗ ಆಧುನೀಕರಣಕ್ಕೆ ಹಣ ಕೊಡಿಸುವುದು ಕಷ್ಟವೇನೂ ಆಗಬಾರದಾಗಿತ್ತು. ಅಷ್ಟೇ ಅಲ್ಲ, ರಾಷ್ಟ್ರೀಯ ಪುನಶ್ಚೇತನದ ನಿಧಿಯಿಂದಲೂ ಹಣ ಪಡೆಯಬಹುದಿತ್ತು. ಅದನ್ನೀಗ ಕಾರ್ಮಿಕರನ್ನು ಸ್ವಯಂ ನಿವೃತ್ತಿಯೊಜನೆ (ವಿ.ಆರ್.ಎಸ್.) ಮೂಲಕ ಕೆಲಸದಿಂದ ತೆಗೆದು ಹಾಕಲು ದುರಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದು ಕಾರ್ಮಿಕ ಮುಖಂಡರ ನಿಯೋಗ ಹೇಳಿತು.

ನಿಯೋಗದ ಎಲ್ಲಾ ಸದಸ್ಯರು ಹಾಗೂ ಅದರ ಜೊತೆಗೆ ಹೋಗಿದ್ದ ಸಂಸತ್ ಸದಸ್ಯರು ಎನ್.ಟಿ.ಸಿ. ಗಿರಣಿಗಳ ಪುನಶ್ಚೇತನದ ಬಗ್ಗೆ ಆಗಿರುವ ಒಮ್ಮತದ ತ್ರಿಪಕ್ಷೀಯ ಒಪ್ಪಂದವನ್ನು ಗೌರವಿಸಬೇಕು ಎಂದು ಆಗ್ರಹ ಪಡಿಸಿದರು. ಹಿಂದಿನ ಮಂತ್ರಿ ಮಂಡಲವೂ ಇದಕ್ಕೆ ಅನುಮೋದನೆ ನೀಡಿತ್ತು ಎಂಬುದನ್ನು ಅವರು ನೆನಪಿಸಿದರು. ಸಂಬಳವನ್ನು ನಿಯಮಿತವಾಗಿ ನೀಡಬೇಕೂ ಎಂದೂ ಒತ್ತಾಯಿಸಲಾಯಿತು.

ಸಿ.ಐ.ಟಿಯು.ನ ಪಿ.ಕೆ.ಗಂಗೂಲಿ, ದೌಲತ್‌ರಾಂ, ಸುಭಾಷಿಣಿ, ಎ.ಐ.ಟಿ.ಯು.ಸಿ.ಯ ಡಿ.ಎಲ್. ಸಚ್‌ದೇವ್, ಪಿ. ಬೋಕ್ಷಿ, ಹೆಚ್.ಎಂ.ಎಸ್.ನ ಎ.ಡಿ. ನಾಗ್‌ಪಾಲ್, ಆರ್.ಕೆ. ತ್ರಿಪಾಠಿ, ಇಂಟಕ್‌ನ ಎಸ್.ಎಸ್. ಯಾದವ್, ಹೆಚ್.ಎಂ.ಕೆ.ಪಿ.ಯ ರಾಜಾ ದೀಕ್ಷಿತ್, ಯು.ಟಿ.ಯು.ಸಿ.ಯ ಅಶೋಕ್ ಗೌರ್ ಮತ್ತಿತರರು ಈ ನಿಯೋಗದಲ್ಲಿದ್ದರು. ಸಿ.ಪಿ.ಐ.(ಎಂ)ನ ಸಂಸತ್ ಸದಸ್ಯರಾದ ಸೋಮನಾಥ್ ಚಟರ್ಜಿ, ಬಾಸುದೇವ ಆಚಾರ್ಯ, ತರಿತ್ ತೋಪ್ದಾರ್ ಹಾಗೂ ಅಸೀವನ್ ಬಾಲಾ, ಸಿ.ಪಿ.ಐ.ನ ಗೀತಾ ಮುಖರ್ಜಿ ಮತ್ತು ಎಸ್. ಸುಧಾಕರ್ ರೆಡ್ಡಿ ಹಾಗೂ ಆರ್.ಎಸ್.ಪಿ.ಯ ಪ್ರಮಥೇಶ್ ಮುಖರ್ಜಿ ಅವರ ಜೊತೆಗಿದ್ದರು. ಪ್ರಧಾನ ಮಂತ್ರಿಗಳು ಸಕಾರಾತ್ಮಕ ಭರವಸೆ ನೀಡಿದರೆಂದು ಕಾರ್ಮಿಕ ಮುಖಂಡರು ಹೇಳಿದ್ದಾರೆ.

ನಿಯೋಗ ಐ.ಡಿ.ಪಿ.ಎಲ್.(ಔಷಧಿ ಇಲಾಖೆ) ಪುನಶ್ಚೇತನದ ಬಗ್ಗೆಯೂ ಒಂದು ಮನವಿ ಸಲ್ಲಿಸಿದರು. ಎಲ್ಲಾ ಕಾರ್ಮಿಕ ಸಂಘಗಳು ಹಾಗೂ ಸಂಯುಕ್ತ ರಂಗ ಸರಕಾರದ ಮಂತ್ರಿಗಳ ಒಪ್ಪಿಗೆ ಪಡೆದಿರುವ ಒಂದು ಪುನಶ್ಚೇತನ ಯೋಜನೆ ರೂಪಿಸಿ ಒಂದು ವರ್ಷವಾದರೂ ಇದನ್ನಿನ್ನೂ ಜ್ಯಾರಿಗೆ ತಂದಿಲ್ಲ. ಉತ್ಪಾದನೆ ಮತ್ತು ಕಾರ್ಮಿಕರ ಸಂಬಳ ಎಂದೋ ನಿಂತಿದ್ದರೂ ಇನ್ನೂ ಈಗಿನ ಮಂತ್ರಿಗಳು ಕಾಲಳೆಯುತ್ತಿದ್ದಾರೆ ಎಂದು ನೆನಪಿಸಿದರು.

ಪ್ರಧಾನ ಮಂತ್ರಿಗಳು ಮೇಲಿನ ರೀತಿಯದೇ ಆಶ್ವಾಸನೆ ನೀಡಿದರು.

(ಐ.ಎನ್.ಎನ್.)

ಮಾದರಿ ಐಕ್ಯತೆಯಿಂದ ವಿಜಯ

ಸಿಐಟಿಯು ಆರು ಲಕ್ಷ ಅಂಚೆ ನೌಕರರಿಗೆ ಅಭಿನಂದನೆ

ಒಂಭತ್ತು ದಿನಗಳ ದೇಶವ್ಯಾಪಿ ಯಶಸ್ವಿ ಮುಷ್ಕರ ನಡೆಸಿದ ಆರು ಲಕ್ಷ ಅಂಚೆ ನೌಕರರನ್ನು ಸಿ.ಐ.ಟಿ.ಯು ಕಾರ್ಯದರ್ಶಿ ಮಂಡಳಿ ಅಭಿನಂದಿಸಿದೆ. ಮುಷ್ಕರವನ್ನು ಮುರಿಯಲು ಸೇನೆಯನ್ನು ಬಳಸುವ ಬೆದರಿಕೆಗೂ ಜಗ್ಗದೆ ಮುಂದುವರೆದ ಮುಷ್ಕರ ಇದು ಎಂದು ಕಾರ್ಯದರ್ಶಿ ಮಂಡಳಿ ಹೇಳಿಕೆ ಅಭಿನಂದಿಸಿದೆ. ಮುಷ್ಕರ ಹಿಂತೆಗೆದುಕೊಳ್ಳದೆ ಮಾತುಕತೆಯಿಲ್ಲ ಎಂದು ಹೇಳುತ್ತಿದ್ದ ಸರಕಾರ ಒಂದು ಇತ್ಯರ್ಥಕ್ಕೆ ಬರುವಂತೆ ಮಾಡಲಾಗಿದೆ. ನೌಕರರು ಎತ್ತಿದ ಎಲ್ಲಾ ಹಣಕಾಸು ಬೇಡಿಕೆಗಳನ್ನು ಸರಕಾರ ಒಪ್ಪಬೇಕಾಗಿ ಬಂದಿದೆ. ಇಲಾಖೇತರ ನೌಕರರ ಪ್ರಶ್ನೆಯನ್ನು ತಲ್ವಾರ್ ಸಮಿತಿ ಶಿಫಾರಸುಗಳ ಬೆಳಕಿನಲ್ಲಿ ಪರಿಹರಿಸುವುದಾಗಿ ಸರಕಾರ ಭರವಸೆ ನೀಡಿದೆ. ಮುಷ್ಕರದಲ್ಲಿ ಭಾಗವಹಿಸಿದ್ದಕ್ಕಾಗಿ ವೇತನ ಕಡಿತ ಇಲ್ಲ ಎಂದೂ ಸರಕಾರ ಭರವಸೆ ನೀಡಿದೆ.

ಈ ಹೋರಾಟದಲ್ಲಿ ಅಂಚೆ ನೌಕರರು ಪ್ರದರ್ಶಿಸಿದ ಮಾದರಿ ಹಾಕಿಕೊಡುವಂತಹ ಐಕ್ಯತೆಯನ್ನು ಸಿ.ಐ.ಟಿ.ಯು ಆದರಿಸುತ್ತದೆ, ಅಂಚೆ ನೌಕರರ ವಿಜಯ ತನಗೆ ಸಂತಸ ತಂದಿದೆ ಎಂದು ಈ ಹೇಳಿಕೆ ತಿಳಿಸಿದೆ.

ರಾಜ್ಯ ಸರ್ಕಾರಿ ನೌಕರರ ಅಭಿನಂದನೆ

ದೇಶದ 80 ಲಕ್ಷ ರಾಜ್ಯ ಸರ್ಕಾರಿ ನೌಕರರನ್ನು ಪ್ರತಿನಿಧಿಸುವ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ ಕೂಡಾ ಅಂಚೆ ನೌಕರರನ್ನು ಅಭಿನಂದಿಸಿದೆ.

ಈ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದ ಎನ್.ಎಫ್.ಪಿ.ಇ ಹಾಗೂ ಎಫ್.ಎನ್.ಪಿ.ಓ. ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಗೆ ಒಕ್ಕೂಟ ಸೋದರ ಅಭಿನಂದನೆ ಸಲ್ಲಿಸಿದೆ. ಕೇಂದ್ರ ಸರಕಾರ ಮತ್ತು ಸಂಬಂಧಪಟ್ಟ ಮಂತ್ರಿಗಳು ಮುಷ್ಕರದ ಮುಖಂಡರಿಗೆ ನೀಡಿದ ಭರವಸೆಗಳನ್ನು ಜ್ಯಾರಿಗೆ ತರಲು ಅವರ ಬೇಡಿಕೆಗಳನ್ನು ಶೀಘ್ರದಲ್ಲೇ ಇತ್ಯರ್ಥ ಮಾಡಬೇಕು ಎಂದು ಅದು ಆಗ್ರಹಪಡಿಸಿದೆ.

ಆಗಸ್ಟ್ 6 - ಅಣ್ವಸ್ತ್ರೀಕರಣ ವಿರೋಧಿ ದಿನ



ಇದು ಹಿರೋಷಿಮಾದ ಬಾಂಬ್ ಸ್ಫೋಟದ 7 ವರ್ಷಗಳ ನಂತರ ಅಗೆದಾಗ ಕಂಡು ಬಂದ ದೃಶ್ಯ. ಬಾಂಬ್ ಸ್ಫೋಟಕ್ಕೆ ಬಲಿಯಾದ 3.5 ಲಕ್ಷ ಜಾಪಾನಿಯರಲ್ಲಿ ಕೆಲವರ ಈ ತಲೆ ಬರುಡೆಗಳು ನಮಗೆ ಬಾಂಬಿನ ಭಯಾನಕತೆಯನ್ನು, ಶಕ್ತಿ ಪೀಠಸ್ಥರ ಅಮಾನವೀಯತೆಯನ್ನು ನೆನಪಿಸಬಲ್ಲವೇ?

'ನೆತ್ತರಲ್ಲಿ ನೆಂದ ಹೂ'

ಹೋರಾಟದ ಹಾಡುಗಳ ಕ್ಯಾಸೆಟ್ ಬಿಡುಗಡೆ

ಬೆಂಗಳೂರಿನ ಜನಸ್ನೇಹ ಕ್ರಿಯೇಷನ್ಸ್ ಹೋರಾಟದ ಹಾಡುಗಳ ಕ್ಯಾಸೆಟ್ಟನ್ನು ಕ್ವಿಟ್ ಇಂಡಿಯಾ ದಿನಾಚರಣೆಯ ದಿನ ಆಗಸ್ಟ್ 8 ರಂದು ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ. ಅಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸಂಜೆ 5 ಗಂಟೆಗೆ ವಿಶೇಷ ಸಮಾರಂಭವೊಂದರಲ್ಲಿ ಇದನ್ನು ಬಿಡುಗಡೆ ಮಾಡಲಾಗುವುದು.

'ಇದೊಂದು ವಿಶಿಷ್ಟವಾದ ಧ್ವನಿಸುರಳಿ ಕಿವಿಯಿಂದ ಕರುಳಿಗೆ ಬಂದು, ಕರುಳಿನಿಂದ ಕಣ್ಣಿಗೆ ಬಂದು, ನಮ್ಮ ನಾಡಿನ ಬದುಕನ್ನು ಶ್ರಮ ಸಂಸ್ಕೃತಿಯ ಮೂಲದಿಂದ ನೋಡೋ ಹಾಗೆ ಮಾಡುವ ಎದೆಯಾಳದ ಹಾಡುಗಳು' ಎಂದು ಈ ಕ್ಯಾಸೆಟ್‌ನ ತಯಾರಕರು ಹೇಳಿದ್ದಾರೆ.

ವಿ.ಮನೋಹರ್ ಸಂಗೀತ ಹಾಗೂ ಡಾ|| ಬರಗೂರು ರಾಮಚಂದ್ರಪ್ಪನವರ ನಿರೂಪಣೆಯಿರುವ ಈ ಕ್ಯಾಸೆಟ್‌ನಲ್ಲಿ ಕುವೆಂಪುರವರ 'ಬನ್ನಿ ಸೋದರರೆ ಬನ್ನಿ', ಸಿದ್ದಲಿಂಗಯ್ಯನವರ ಪ್ರಸಿದ್ಧ ಹೋರಾಟದ ಹಾಡು 'ನನ್ನ ದಿನ ನನ್ನ ಜನ' ಹಾಗೂ 'ಒಲವರಳಿದ ಆ ದಿನಗಳೇ, ಚೆನ್ನಣ್ಣ ವಾಲೀಕಾರರ 'ಬನ್ನಿ ಅಣ್ಣರೇ ಬನ್ನಿ ತಮ್ಮರೇ, ಬರಗೂರು ರಾಮಚಂದ್ರಪ್ಪನವರ 'ನನ್ನ ಈ ನಾಡಿನಲ್ಲಿ' ರಂಜಾನ್ ದರ್ಗಾರವರ 'ನ್ಯೂಟ್ರಾನ್ ಬಾಂಬ್', ಎಲ್.ಹನುಮಂತಯ್ಯನವರ 'ದುಡಿವ ಕಂದನನು', ರಾಮಲಿಂಗಂರವರ 'ಬೆಟ್ಟಗಳ ಒಡೆದೆವು' ಹಾಗೂ ಕೆ.ರಾಮಯ್ಯನವರ 'ಬಸಿರಲ್ಲಿ ಹೊನ್ನುವುದು' ಈ ಹತ್ತು ಹೋರಾಟದ ಹಾಡುಗಳನ್ನು ಆಯ್ದುಕೊಳ್ಳಲಾಗಿದೆ. ಜನಾರ್ಧನ್, ಜಯಶ್ರೀ, ರಾಜೇಶ್ ಕೃಷ್ಣನ್, ರಮೇಶ್ ಚಂದ್ರ, ಪಿಚ್ಚಳ್ಳಿ ಶ್ರೀನಿವಾಸ್, ಸುನಿತಾ ಪ್ರಕಾಶ್ ಮತ್ತಿತರರು ಈ ಹಾಡುಗಳನ್ನು ಹಾಡಿದ್ದಾರೆ.

ಕ್ಯಾಸೆಟ್‌ನ ಮುಖಬೆಲೆ ರೂ. 40.00 ಇದ್ದು ಬಿಡುಗಡೆ ಪೂರ್ವ 25% ರಿಯಾಯ್ತಿ ನೀಡಲಾಗುವುದೆಂದು ಜನಸ್ನೇಹ ಕ್ರಿಯೇಷನ್ಸ್‌ನ ಎಂ.ಹೆಚ್.ಶ್ರೀಧರಮೂರ್ತಿ ತಿಳಿಸಿದ್ದಾರೆ.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27